ಸಂಪುಟ: 06 ಸಂಚಿಕೆ: 143 ಪುಟಗಳು: 08 ಬುಧವಾರ 05 ಆಗಸ್ಟ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಸುಳ್ಳು ಹೇಳಿ ಮನಸ್ಸು ಸಮಾಧಾನ ಪಡಿಸುವ ಕಲೆ ಹಲವರಿಗೆ ಕರಗತವಾಗಿರುತ್ತದೆ...! ಆದರೆ ತಮ್ಮನ್ನು ವಿರೋಧಿಸಿದರೂ ಪರವಾಗಿಲ್ಲ ಸತ್ಯ ಹೇಳುವ ತಾಕತ್ತು ಕೆಲವರಿಗೆ ಮಾತ್ರ ಇರುತ್ತದೆ...!

# ಕೈ ಶಾಸಕರಿಗೆ ಬರಲಿ ಶಿಸ್ತು ಡಿಕೆಶಿ ಸುಸ್ತು

• ಉದಯವಾಹಿನಿ, ಬೆಂಗಳೂರು

ಅಸಮಾಧಾನಿತ ಶಾಸಕರು ಏನಾದರೂ ರಾಜೀನಾಮೆ ನೀಡಲು ಬಂದರೆ ಕ್ಷಣ ಮಾತ್ರದಲ್ಲೇ ರಾಜೀನಾಮೆ ಅಂಗೀಕರಿಸುತ್ತೇನೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದ್ದಾರೆ. ಮಂತ್ರಿ ಸ್ಥಾನ ವಂಚಿತ ಕೆಲ ಶಾಸಕರು ರಾಜೀನಾಮೆ ನೀಡಲು ಮುಂದಾಗಿರುವ ಹಿನ್ನೆಲೆ ಸಿಎಂ ಡಿಕೆಶಿ ಖಡಕ್ ಎಚ್ಚರಿಕೆ ನೀಡಿದ್ದಾರೆ. ಸದಾಶಿವನಗರ ಬಳಿ ಪ್ರತಿಕ್ರಿಯಿಸುತ್ತಾ, ಶಾಸಕರು ಏನಾದರೂ ರಾಜೀನಾಮೆ ನೀಡಲು ಬಂದರೆ ಕ್ಷಣ ಮಾತ್ರದಲ್ಲೇ ರಾಜೀನಾಮೆ ಅಂಗೀಕರಿಸುತ್ತೇನೆ ಎಂದು ತಿಳಿಸಿದ್ದಾರೆ.

ಪಕ್ಷ ಮುಖ್ಯ, ಪಕ್ಷದಲ್ಲಿ ಶಿಸ್ತು ಮುಖ್ಯ, ನಾನು ನಿನ್ನೆಯೇ ಹೇಳಿದ್ದೇನೆ. ವೀರೇಂದ್ರ ಪಾಟೀಲ್ ಕಾಲದಲ್ಲಿ ಮಂತ್ರಿ ಸ್ಥಾನ ಕೊಟ್ಟಿರಲಿಲ್ಲ. ಬಂಗಾರಪ್ಪ, ಖರ್ಗೆ, ಧರ್ಮಸಿಂಗ್ ಅವರಿಗೆ ಮಂತ್ರಿ ಸ್ಥಾನ ಕೊಟ್ಟಿರಲಿಲ್ಲ. ನನಗೆ, ಪರಮೇಶ್ವರ್ ಅವರಿಗೂ ಕೂಡ ಕೊಟ್ಟಿರಲಿಲ್ಲ. ಆಗ ನಾವಿಬ್ಬರು ಸುಮ್ಮನೆ ಇರಲಿಲ್ಲವಾ?.

ತಾಳ್ಮೆಯಿಂದ ಇರಬೇಕು ಎಂದು ತಿಳಿಸಿದ್ದಾರೆ. ಏನು ಹೇಳಬೇಕೋ ಎಲ್ಲಾ ಹೇಳಿದ್ದೇನೆ. ಏನಾದರೂ ಇದ್ದರೆ ಖಂಡಿತ ನಿಮ್ಮನೆಲ್ಲ ಕರೆಯುತ್ತೇನೆ. ಹೊಸದೇನೂ ಇಲ್ಲ. ಕೂಡಲೇ ಬರ ಪರಿಹಾರಕ್ಕೆ ಭೇಟಿ ಮಾಡಲು ಮಂತ್ರಿಗಳಿಗೆ ಹೇಳಿದ್ದೇನೆ ಎಂದರು. ನಿಗಮ ಮಂಡಳಿಗಳಿಗೆ ನೇಮಕವಾದವರಿಗೆ 2.5 ವರ್ಷ ಅಧಿಕಾರ ಅಂತ ಮೊದಲೇ ಹೇಳಿದ್ದೇವೆ. ಮಂತ್ರಿಗಳಿಗೂ ಮುಂಚೆಯೇ ಹೇಳಿದ್ದೆವು. ಬೋರ್ಡ್, ಕಾರ್ಪೋರೇಷನ್ ಅವರಿಗೆ ರಾಜೀನಾಮೆ ಕೊಡುವಂತೆ ಹೇಳಿದ್ದೇನೆ. ಕಾರ್ಯಕರ್ತರಿಗೆ ಮೊದಲು ಹೇಳುತ್ತೇನೆ, ಬಳಿಕ ಶಾಸಕರನ್ನು ಕರೆದು ಮಾತನಾಡುತ್ತೇನೆ ಎಂದರು. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದ ಸಿಎಂ ಸುಮಾರು 2 ಗಂಟೆಗಳ ಕಾಲ ಸಚಿವ ಸಂಪುಟದ ನೂತನ ಸದಸ್ಯರಿಗೆ ಮಾರ್ಗದರ್ಶನ ನೀಡಿದ್ದೇವೆ. ನಮ್ಮಲ್ಲಿ ಸಾಕಷ್ಟು ಹಿರಿಯ ನಾಯಕರಿದ್ದರೂ ನಾವು ಈ ಬಾರಿ ಹೊಸ ಮುಖಗಳಿಗೆ ಅವಕಾಶ ನೀಡಿದ್ದೇವೆ. ನಾನು ಹಾಗೂ ಪರಮೇಶ್ವರ್ ಅವರು ಮೊದಲ ಬಾರಿಗೆ ಶಾಸಕರಾಗಿ ಮಂತ್ರಿಯಾಗಿದ್ದೇವೆ. ಕೆಲವು ಸಂದರ್ಭದಲ್ಲಿ ನಮ್ಮನ್ನು ಸಚಿವರನ್ನಾಗಿ ಮಾಡಿದ್ದಾರೆ. ಕೆಲವೊಮ್ಮೆ ಮಾಡಿಲ್ಲ. ನಾವು ಅಲ್ಲಿಂದ ಇಲ್ಲಿಯವರೆಗೆ ಬಂದು ಈ ಸ್ಥಾನ ತಲುಪಿದ್ದೇವೆ. 19 ಸದಸ್ಯರು ಸಂಪುಟ ಸೇರ್ಪಡೆಯೊಂದಿಗೆ ವಿಸ್ತರಣೆಯಾಗಿದೆ. ನಮ್ಮಲ್ಲಿ ಅನೇಕ ಅರ್ಹರು ಇದ್ದರು. ನಮ್ಮಲ್ಲಿ ಅರ್ಹತೆ ಇಲ್ಲದವರು ಯಾರೂ ಇಲ್ಲ ಎಂದು ತಿಳಿಸಿದ್ದರು. ನಮ್ಮ ಪಕ್ಷ ತೀರ್ಮಾನ ಮಾಡಿ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ನಾನು ಹಾಗೂ ಪರಮೇಶ್ವರ್ ಅವರು ಬಂದಾಗ, ವೀರೇಂದ್ರ ಪಾಟೀಲ್ ಅವರು ಸಿಎಂ ಆಗಿದ್ದರು. ಆಗ ಬಂಗಾರಪ್ಪನವರು ಸಚಿವ ಸಂಪುಟದಲ್ಲಿ ಇರಲಿಲ್ಲ.

ಖರ್ಗೆ, ಧರಂ ಸಿಂಗ್, ಲಕ್ಕಪ್ಪನವರು ಇರಲಿಲ್ಲ. ಎಸ್ ಎಂ ಕೃಷ್ಣ ಅವರ ಕಾಲದಲ್ಲಿ ಅಜೀಜ್ ಸೇಠ್ ಅವರು ಸಂಪುಟದಲ್ಲಿ ಸ್ಥಾನ ಪಡೆಯಲು ಆಗಿರಲಿಲ್ಲ. ತಾಳ್ಮೆಯಿಂದ ಇದ್ದರೆ ನಾವು ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಅವಕಾಶ ನೀಡಲಾಗುವುದು. ನಾನು ಹಾಗೂ ಪರಮೇಶ್ವರ್ ಅವರು ನಮ್ಮ ಶಾಸಕರ ಜೊತೆ ಚರ್ಚೆ ಮಾಡುತ್ತೇವೆ.

**ಡಿಕೆಶಿ ಖಡಕ್ ಎಚ್ಚರಿಕೆ**

1 ರಾಜೀನಾಮೆ ನೀಡುವವರನ್ನು ತಡೆಯಲು ಆಗಲ್ಲ, ಯಾರಾದರೂ ರಾಜೀನಾಮೆ ಕೊಟ್ಟರೆ ತಕ್ಷಣವೇ ಅಂಗೀಕರಿಸ್ತೀನಿ

2 ಸಿಎಂ ಎಚ್ಚರಿಕೆ ಬೆನ್ನಲ್ಲೇ, ರಾಜೀನಾಮೆ ನಿರ್ಧಾರದಿಂದ ಹಿಂದೆ ಸರಿದ ಬೇಳೂರು ಗೋಪಾಲಕೃಷ್ಣ

3 ಕೈ ಪಾಳಯದಲ್ಲಿ ಭುಗಿಲೆದ್ದಿರುವ ಅಸಮಾಧಾನ

**ಚಿಕ್ಕಬಳ್ಳಾಪುರದಲ್ಲಿ ಟೈರ್‌ಗೆ ಬೆಂಕಿ ಹಚ್ಚಿ ಬೆಂಬಲಿಗರಿಂದ ಪ್ರತಿಭಟನೆ**

**ಕಾರ್ಯಕರ್ತರನ್ನು ಕಡೆಗಣಿಸಿದರೆ ನಾಳೆ ಪಕ್ಷವೇ ಇರಲ್ಲ**



ರಾಜೀನಾಮೆ ನೀಡಲು ಯಾರಾದರೂ ಬಂದರೆ ಕ್ಷಣ ಮಾತ್ರದಲ್ಲೂ ತಡಮಾಡದೆ ಅಂಗೀಕರಿಸುತ್ತೇನೆ. ಅಸಮಾಧಾನಿತರ ಪಟ್ಟುಗಳನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಹೈಕಮಾಂಡ್ ಸೂಚನೆ ಮತ್ತು ಪಕ್ಷದ ಹಿತದೃಷ್ಟಿಯಿಂದ ಅಸಮಾಧಾನಿತರು ತಾಳ್ಮೆವಹಿಸಬೇಕು. ವೀರೇಂದ್ರ ಪಾಟೀಲ್, ಎಸ್. ಬಂಗಾರಪ್ಪ, ಮಲ್ಲಿಕಾರ್ಜುನ ಖರ್ಗೆ ಮತ್ತು ಧರಂ ಸಿಂಗ್ ಅವರಂತಹ ದಿಗ್ಗಜರ ಕಾಲದಲ್ಲೂ ಎಲ್ಲರಿಗೂ ಮಂತ್ರಿ ಸ್ಥಾನ ಸಿಕ್ಕಿರಲಿಲ್ಲ. ಸಿಎಂ ಡಿಕೆಶಿ

## ಸಭಾಪತಿ ಸ್ಥಾನಕ್ಕೆ ರಾಜೀನಾಮೆ ಕೊಡೋ ಬಗ್ಗೆ ಇನ್ನೂ ನಿರ್ಧಾರ ಮಾಡಿಲ್ಲ: ಬಸವರಾಜ ಹೊರಟ್ಟಿ



• ಉದಯವಾಹಿನಿ, ಬೆಂಗಳೂರು

ಸಭಾಪತಿ ಸ್ಥಾನಕ್ಕೆ ರಾಜೀನಾಮೆ ಕೊಡುವ ಬಗ್ಗೆ ನಾನಿನ್ನೂ ನಿರ್ಧಾರ ಮಾಡಿಲ್ಲ ಎಂದು ಬಸವರಾಜ ಹೊರಟ್ಟಿ ತಿಳಿಸಿದ್ದಾರೆ. ಮಾತನಾಡಿದ ಅವರು, ಸಭಾಪತಿ ಸ್ಥಾನಕ್ಕೆ ರಾಜೀನಾಮೆ ಕೊಡುವಂತೆ ಸಿಎಂ ಡಿಕೆಶಿ ತಿಳಿಸಿದ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. ನಮ್ಮ ವರಿಷ್ಠರು ಸಭಾಪತಿ, ಉಪ ಸಭಾಪತಿ ಸ್ಥಾನಕ್ಕೆ ಇಬ್ಬರನ್ನು ಆಯ್ಕೆ ಮಾಡಿದ್ದಾರೆ, ಹೀಗಾಗಿ ನೀವು ರಾಜೀನಾಮೆ ನೀಡಬೇಕೆಂದು ಸಿಎಂ ತಿಳಿಸಿದ್ದಾರೆಂದು ಹೇಳಿದ್ದಾರೆ. ಸಭಾಪತಿ ಸ್ಥಾನಕ್ಕೆ ರಾಜೀನಾಮೆ ಕೊಡೋ ಬಗ್ಗೆ ನಾನಿನ್ನೂ ನಿರ್ಧಾರ ಮಾಡಿಲ್ಲ. ಈ ರೀತಿ ಇತಿಹಾಸದಲ್ಲಿ ಯಾವತ್ತೂ ಆಗಿಲ್ಲ. ಹೈಕಮಾಂಡ್ ಹೆಸರು ಹೇಳಿದ ಉದಾಹರಣೆ ಇಲ್ಲ. ನಮ್ಮ ಪಕ್ಷದ ನಾಯಕರ ಜೊತೆ ಚರ್ಚೆ ಮಾತಾಡ್ತೀನಿ, ಸಿಎಂ ಕರೆ ಮಾಡಿ ರಾಜೀನಾಮೆ ಕೊಡೋಕೆ ಹೇಳಿದ್ದಾರೆ. ಸದನದಲ್ಲಿ ಈ ಬಗ್ಗೆ ತೀರ್ಮಾನ ಆಗಲಿ. ಸದನದ ನಿರ್ಧಾರಕ್ಕೆ ನಾನು ಗೌರವ ಕೊಡ್ತೀನಿ. ಈ ವಿದ್ಯಾಮಾನ ನನಗೆ ನೋವು ತರಿಸಿದೆ, ಮೊದಲು ಅವರು ನೋಟೀಸ್ ಕೊಡಲಿ ಆಮೇಲೆ ಆ ಬಗ್ಗೆ ನಿರ್ಧಾರ ಮಾಡ್ತೀನಿ. ಸದನ ನಿರ್ಧಾರಕ್ಕೆ ನಾನು ಬದ್ಧ ಎಂದಿದ್ದಾರೆ. ಇನ್ನೂ ಸಭಾಪತಿ ಹೊರಟ್ಟಿ ಅವರನ್ನ ಭೇಟಿ ಮಾಡಿದ ಸಚಿವ ಶರಣಪ್ರಕಾಶ್ ಪಾಟೀಲ್ ಕೆಲಕಾಲ ಮಾತುಕತೆ ನಡೆಸಿದರು. ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿ, ಸಭಾಪತಿ ರಾಜೀನಾಮೆ ಬಗ್ಗೆ ನಾನು ಮಾತಾಡಲ್ಲ. ಯಾವುದೋ ಮೀಟಿಂಗ್ ಇತ್ತು. ಆ ವಿಚಾರವಾಗಿ ಚರ್ಚೆ ಮಾಡಿದ್ದೇನೆ ಅಷ್ಟೆ. ರಾಜೀನಾಮೆ ಬಗ್ಗೆ ಚರ್ಚೆ ಮಾಡಿಲ್ಲ. ಸಿಎಂ ಕರೆ ಮಾಡಿರೋ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದಿದ್ದಾರೆ. ಹೊರಟ್ಟಿ ಅವರ ರಾಜೀನಾಮೆ ವಿಚಾರ ಎಲ್ಲರ ನಿರ್ಣಯದ ಮೇಲೆ ನಿರ್ಧಾರ ಆಗುತ್ತದೆ. ಪಕ್ಷ ನಿರ್ಣಯ ಮಾಡೋ ವಿಚಾರ ಇದು. ಇದರ ಬಗ್ಗೆ ನಾನು ವೈಯಕ್ತಿಕ ಅಭಿಪ್ರಾಯ ನೀಡಲ್ಲ ಎಂದು ತಿಳಿಸಿದ್ದಾರೆ.

## ಸಚಿವ ಬಿ. ನಾಗೇಂದ್ರಗೆ ಬಿಗ್ ಶಾಕ್..? ದೆಹಲಿಗೆ ತೆರಳಲು ಸಲ್ಲಿಸಿದ್ದ ಅರ್ಜಿ ವಜಾ

• ಉದಯವಾಹಿನಿ, ಬೆಂಗಳೂರು

ಮಹರ್ಷಿ ವಾಲ್ಮೀಕಿ ನಿಗಮ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಬಿ. ನಾಗೇಂದ್ರ ಅವರು ದೆಹಲಿಗೆ ತೆರಳಲು ಕೋರಿ ಸಲ್ಲಿಸಿದ್ದ ಅರ್ಜಿಯನ್ನ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಜಾಗೊಳಿಸಿದೆ. ಬಿ. ನಾಗೇಂದ್ರ ಅವರು ಜುಲೈ 27 ರಿಂದ ಆಗಸ್ಟ್ 10ರವರೆಗೆ ದೆಹಲಿಗೆ ತೆರಳಲು ಅನುಮತಿ ಕೋರಿ ನ್ಯಾಯಾಲಯದ ಮೊರೆ ಹೋಗಿದ್ದರು. ಅವರ ಅರ್ಜಿಗೆ ಜಾರಿ ನಿರ್ದೇಶನಾಲಯ (ಇಡಿ) ಆಕ್ಷೇಪಣೆ ಸಲ್ಲಿಸಿತ್ತು. ಅರ್ಜಿಯ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯ, ದೆಹಲಿ ಪ್ರವಾಸಕ್ಕೆ ಸೂಕ್ತ ಹಾಗೂ ಸಮರ್ಪಕ ಕಾರಣವನ್ನ ಅರ್ಜಿದಾರರು ನೀಡಿಲ್ಲ ಎಂದು ಅಭಿಪ್ರಾಯಪಟ್ಟಿದ್ದು, ಈ ಹಿನ್ನೆಲೆಯಲ್ಲಿ ಪ್ರಯಾಣಕ್ಕೆ ಅನುಮತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿ ಆದೇಶ ನೀಡಿದೆ. ನ್ಯಾಯಾಲಯದ ಈ ಆದೇಶ ಪ್ರಕರಣದ ಮುಂದಿನ ಬೆಳವಣಿಗೆಗಳಲ್ಲಿ ಮಹತ್ವ ಪಡೆದಿದೆ.

## ಬೆಂಗಳೂರಿನ ಹಲವು ಭಾಗಗಳಲ್ಲಿ ಸಾಧಾರಣ ಮಳೆ

• ಉದಯವಾಹಿನಿ, ಬೆಂಗಳೂರು

ಕೆಲವು ದಿನಗಳಿಂದ ಮೋಡ ಕವಿದ ವಾತಾವರಣದ ನಡುವೆ ಇಂದು ಬೆಂಗಳೂರಿನ ಹಲವು ಭಾಗಗಳಲ್ಲಿ ಸಾಧಾರಣ ಮಳೆಯಾಗಿದೆ. ಸಂಜೆ ಕೆಲಸ ಮುಗಿಸಿ ಹೊರಟಿದ್ದವರಿಗೆ ವರುಣನ ಸಿಂಚನವಾಗಿದೆ. ಮೈಸೂರು ರಸ್ತೆ, ಬ್ಯಾಟರಾಯನಪುರ, ಬಾಪೂಜಿನಗರ, ನಾಯಂಡಹಳ್ಳಿ, ದೀಪಾಂಜಲಿ ನಗರ ಹಾಗೂ ವಿಜಯನಗರ ಭಾಗಗಳಲ್ಲಿ ಸಾಧಾರಣ ಮಳೆಯಾಗಿದೆ. ಬೆಂಗಳೂರು ಹೊರವಲಯ ನೆಲಮಂಗಲದ ಸುತ್ತಮುತ್ತಲೂ ಸಹ ಸ್ವಲ್ಪ ಮಟ್ಟಿಗೆ ಮಳೆಯಾಗಿದೆ.

ಅರಿಶಿನಕುಂಟೆ, ಮಾದನಾಯಕನಹಳ್ಳಿ ಸೇರಿದಂತೆ ಹಲವು ಪ್ರದೇಶಗಳಲ್ಲಿ ತುಂತುರು ಮಳೆ ಸುರಿದು ಬಿಸಿಲಿನ ವಾತಾವರಣಕ್ಕೆ ತಂಪು ತಂದಿದೆ. ಕಳೆದ ನಾಲ್ಕು ದಿನಗಳಿಂದ ಈ ಭಾಗದಲ್ಲಿ ಮೋಡ ಕವಿದ ವಾತಾವರಣವಿದ್ದು, ಇಂದು ಸುಮಾರು ಒಂದು ಗಂಟೆಯ ಕಾಲ ತುಂತುರು ಮಳೆಯಾಗಿದೆ. ವರುಣನ ಆಗಮನದಿಂದ ವಾತಾವರಣ ತಂಪಾಗಿದೆ.

## ಎಸ್‌ಐಆರ್ : ರಾಜ್ಯದಲ್ಲಿ ಸುಮಾರು 1 ಕೋಟಿಗೂ ಅಧಿಕ ಮಂದಿ ಡಿಲೀಟ್..!


• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಸುಮಾರು ಒಂದು ಕೋಟಿಗೂ ಅಧಿಕ ಮಂದಿಯನ್ನು ಎಎಸ್‌ಡಿಡಿಬಿ ವಿಭಾಗದಲ್ಲಿರಿಸುವ ಮೂಲಕ ಚುನಾವಣಾ ಆಯೋಗ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳ ಆರೋಪವನ್ನು ಸಾಬೀತುಪಡಿಸಿದೆ. ಎಸ್‌ಐಆರ್ ನಡೆದಿದ್ದ ರಾಜ್ಯಗಳಲ್ಲಿ 70ರಿಂದ 80 ಲಕ್ಷ ಮಂದಿಯನ್ನು ಕೈಬಿಟ್ಟಿರುವ ಆರೋಪಗಳು ಕೇಳಿ ಬಂದಿದ್ದವು. ಈಗ ರಾಜ್ಯದಲ್ಲಿ ಶೇ.19.95ರಷ್ಟು ಜನರನ್ನು ಗೈರುಹಾಜರಿ, ಸ್ಥಳಾಂತರ, ಸಾವು, ತೆಗೆದು ಹಾಕುವಿಕೆ ಮತ್ತು ನಕಲಿ ವಿಭಾಗದಲ್ಲಿ ಗುರುತಿಸುವ ಮೂಲಕ ಆತಂಕ ಸೃಷ್ಟಿಸಿದೆ. ಅದರಲ್ಲೂ ಬೆಂಗಳೂರು ಮತ್ತು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಶೇ. 50ಕ್ಕಿಂತಲೂ ಹೆಚ್ಚಿನ ಜನ ಎಎಸ್‌ಡಿಡಿಬಿ ವಿಭಾಗದಲ್ಲಿ ಗುರುತಿಸಿಕೊಂಡಿದ್ದಾರೆ.

ಆತಂಕಕ್ಕೊಳಗಾಗಿರುವ ಕಾಂಗ್ರೆಸ್ ಬಾಕಿಯಿರುವ ನಾಲ್ಕು ದಿನಗಳಲ್ಲಿ ಜಾಗ್ರತೆವಹಿಸುವಂತೆ ತಮ ಪಕ್ಷದ ಬಿಎಲ್‌ಎ-2ಗಳಿಗೆ ಎಚ್ಚರಿಕೆ ಸಂದೇಶ ರವಾನಿಸಿದೆ. ಮತದಾರರ ಪಟ್ಟಿಯನ್ನು ಗಮನಿಸುವಂತೆ ಮನವಿ ಮಾಡಿದ್ದಾರೆ. ಕರ್ನಾಟಕದ ಮುಖ್ಯ ಚುನಾವಣಾಧಿ ಕಾರಿಗಳ ಕಚೇರಿ ನಿನ್ನೆ ಬಿಡುಗಡೆ ಮಾಡಿದ ದೈನಂದಿನ ಪತ್ರಿಕಾ ಪ್ರಕಟಣೆಯ ಪ್ರಕಾರ, ಅದರಲ್ಲೂ ಬೆಂಗಳೂರು ಮತ್ತು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಶೇ. 50ಕ್ಕಿಂತಲರಾಜ್ಯದಲ್ಲಿ ಮತದಾರರ ವಿಶೇಷ ಪರಿಷ್ಕರಣೆ ಕಾರ್ಯದಡಿ ಮನೆ ಮನೆ ಸಮೀಕ್ಷೆ ಡಿಜಿಟಲೀಕರಣ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ.

## ಕಾರ್ಯಕರ್ತರನ್ನು ಸಮಾಧಾನ ಪಡಿಸಿದ ಬಿಕೆ ಹರಿಪ್ರಸಾದ್

ಕೆಪಿಸಿಸಿ ಕಚೇರಿಗೆ ಆಗಮಿಸಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರನ್ನು ಕೆಪಿಸಿಸಿ ಅಧ್ಯಕ್ಷ ಬಿಕೆ ಹರಿಪ್ರಸಾದ್ ಸಮಾಧಾನ ಪಡಿಸಿದರು. ಪ್ರಿಯಕೃಷ್ಣ ಅವರಿಗೆ ಮಂತ್ರಿ ಸ್ಥಾನ ನೀಡಬೇಕು ಎಂದು ಆಗ್ರಹಿಸಿದ ಕಾರ್ಯಕರ್ತರನ್ನು ಸಮಾಧಾನಪಡಿಸಿದ ಬಿಕೆ ಹರಿಪ್ರಸಾದ್, ' ನಾನೂ 50 ವರ್ಷ ಪಕ್ಷಕ್ಕಾಗಿ ದುಡಿದು ಇದೀಗ ಅಧ್ಯಕ್ಷನಾಗಿದ್ದೇನೆ. ಪ್ರಿಯಕೃಷ್ಣ ಅವರಿಗೆ ಅವಕಾಶ ಸಿಗುತ್ತದೆ. ರಾಹುಲ್ ಗಾಂಧಿ ಅವರಿಗೆ ಪ್ರಿಯಾ ಕೃಷ್ಣ ಬಗ್ಗೆ ಪ್ರೀತಿ ಇದೆ. ಎಲ್ಲರಿಗೂ ಅವಕಾಶ ಸಿಗುತ್ತದೆ' ಎಂದರು. ಇದೇ ಸಂದರ್ಭದಲ್ಲಿ ಕಚೇರಿಯಲ್ಲಿ ಗದ್ದಲ ಉಂಟು ಮಾಡಿದ ಕಾರ್ಯಕರ್ತರಿಗೆ ಎಚ್ಚರಿಕೆ ನೀಡಿದ ಬಿಕೆ ಹರಿಪ್ರಸಾದ್, 'ಇದು ನಮ್ಮ ದೇವಸ್ಥಾನವಾಗಿದೆ. ಇಲ್ಲಿ ಗೌರವವಾಗಿ ನಡೆದುಕೊಳ್ಳಬೇಕು. ನನಗೆ 50 ವರ್ಷದಿಂದ ಕೃಷ್ಣಪ್ಪ ಗೊತ್ತು. ಅವರ ಕೊಡುಗೆ ಏನು ಎಂಬುವುದು ಗೊತ್ತು. ನಾನು ಎಲ್ಲರ ಮಾತನ್ನು ಕೇಳುತ್ತೇನೆ' ಎಂದರು.





● ಅಸಮಾಧಾನಿತ ಶಾಸಕರು ಏನಾದರು ರಾಜೀನಾಮೆ ನೀಡಲು ಬಂದರೆ ಕ್ಷಣ ಮಾತ್ರದಲ್ಲೇ ಅಂಗೀಕಾರ ● ಸಿಎಂ ಡಿಕೆಶಿ ಸಚಿವ ಸ್ಥಾನ ವಂಚಿತರಿಂದ ಅಸಮಾಧಾನ ● ಬೆಂಬಲಿಗರಿಂದ ಪ್ರತಿಭಟನೆ ● ಸಿಎಂ ಡಿಕೆ ಶಿವಕುಮಾರ್ ಎಚ್ಚರಿಕೆ ಬೆನ್ನಲ್ಲೇ ರಾಜೀನಾಮೆ ನಿರ್ಧಾರದಿಂದ ಹಿಂದೆ ಸರಿದ ಬೇಳೂರು ಗೋಪಾಲಕೃಷ್ಣ! ● ಮಂತ್ರಿ ಸ್ಥಾನ ಆಕಾಂಕ್ಷಿಗಳ ಗದ್ದಲ

## ಮಹಿಳಾ ಶಾಸಕಿಯರಿಂದ ಮಂತ್ರಿಗಿರಿಗೆ ಬೇಡಿಕೆ

ಸಚಿವ ಸಂಪುಟ ವಿಸ್ತರಣೆ ಬೆನ್ನಲ್ಲೇ ಸಚಿವ ಸ್ಥಾನ ವಂಚಿತರು ಹಾಗೂ ಬೆಂಬಲಿಗರು ತಮ್ಮ ಆಕ್ರೋಶವನ್ನು ಹೊರಹಾಕುತ್ತಿದ್ದು, ಮಂಗಳವಾರ ಕೆಪಿಸಿಸಿ ಕಚೇರಿ ಮುಂದೆಯೇ ಪ್ರತಿಭಟನೆ ನಡೆಸಿದರು. ಇತ್ತ ಮಹಿಳಾ ಶಾಸಕಿಯರು ಸಚಿವ ಸ್ಥಾನದ ಬೇಡಿಕೆಯನ್ನು ಮುಂದಿಟ್ಟಿದ್ದಾರೆ. ದಿನೇಶ್ ಗುಂಡೂರಾವ್, ವಿಜಯನಗರ ಶಾಸಕ ಎಂ. ಕೃಷ್ಣಪ್ಪ, ಪ್ರಿಯ ಕೃಷ್ಣ ಪರ ಬೆಂಬಲಿಗರು ಇಂದೂ ತಮ್ಮ ಆಕ್ರೋಶ ಹೊರಹಾಕಿದರು. ಕೆಪಿಸಿಸಿ ಕಚೇರಿ ಮುಂದೆ ತಮ್ಮ ನಾಯಕರ ಪರವಾಗಿ ಮಂತ್ರಿ ಸ್ಥಾನ ಸಿಗದಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿದರು. ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಮುಂದೆ ತಮ್ಮ ಅಳಲು ತೋಡಿಕೊಂಡರು. ಸಚಿವ ಸ್ಥಾನ ಸಿಗದಿದ್ದಕ್ಕೆ ಅಸಮಾಧಾನ ಹೊರಹಾಕಿದ ದಿನೇಶ್ ಗುಂಡೂರಾವ್, ನನಗೆ ಯಾಕೆ ಸಚಿವ ಸ್ಥಾನ ನೀಡಿಲ್ಲ ಎಂಬ ಬಗ್ಗೆ ಕಾರಣ ಹೇಳಬೇಕಿತ್ತು. ನಮ್ಮ ಕಾರ್ಯಕರ್ತರಿಗೆ ನೋವಾಗಿದೆ. ಮೊದಲ ಬಾರಿಗೆ ನಮ್ಮ ಸಮುದಾಯದವರು ಈ ಸಂಪುಟದಲ್ಲಿ ಇಲ್ಲ. ನನಗೆ ಯಾಕೆ ಸಚಿವ ಸ್ಥಾನ ನೀಡಿಲ್ಲ ಎಂಬ ಕಾರಣ ತಿಳಿಸಬೇಕಿತ್ತು. ಅದು ಸ್ವಲ್ಪ ಬೇಜಾರಾಗಿದೆ. ನಾವೆಲ್ಲ ಪಕ್ಷದ ನಿಷ್ಠಾವಂತರು, ಪಕ್ಷದ ಕೆಲಸ ಮಾಡಿಕೊಂಡು ಬಂದವರು. ಇದುವರೆಗೂ ಯಾವ ನಾಯಕರೂ ಭೇಟಿ ಮಾಡಿಲ್ಲ. ಮಾತನಾಡಿಲ್ಲ, ಕಾರ್ಯಕರ್ತರಿಗೆ ನೋವಾಗಿದೆ ಎಂದು ಆಕ್ಷೇಪಿಸಿದರು.

## ಕೆಪಿಸಿಸಿ ಕಚೇರಿ ಮುಂದೆ ಪ್ರತಿಭಟನೆ

ದಿನೇಶ್ ಗುಂಡೂರಾವ್‌ಗೆ ಸಚಿವ ಸ್ಥಾನ ಸಿಗದಿರುವುದರ ವಿರುದ್ಧ ಬೆಂಬಲಿಗರು ಕೆಪಿಸಿಸಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಹಿರಿಯ ನಾಯಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ನೂರಾರು ಬೆಂಬಲಿಗರು ಧಿಕ್ಕಾರ ಕೂಗಿದರು. ಇತ್ತ ಎಂ. ಕೃಷ್ಣಪ್ಪ, ಅವರ ಪುತ್ರ ಪ್ರಿಯ ಕೃಷ್ಣಗೆ ಸಚಿವ ಸ್ಥಾನ ನೀಡದಿದ್ದಕ್ಕೆ ಅವರ ಬೆಂಬಲಿಗರೂ ಕೆಪಿಸಿಸಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು. ಕೆಪಿಸಿಸಿ ಕಚೇರಿ ಮುಂಭಾಗದಲ್ಲಿ ಧರಣಿ ನಡೆಸಿ ತಮ್ಮ ಆಕ್ರೋಶ ಹೊರಹಾಕಿದರು.



ಕೆಪಿಸಿಸಿ ಕಚೇರಿಗೆ ಆಗಮಿಸಿದ ಬಿ.ಕೆ. ಹರಿಪ್ರಸಾದ್ ಮುಂದೆ ಬೆಂಬಲಿಗರು ತಮ್ಮ ಬೇಡಿಕೆ ಇಟ್ಟರು. ತಮ್ಮ ನಾಯಕರಿಗೆ ಮಂತ್ರಿ ಸ್ಥಾನ ನೀಡುವಂತೆ ಒತ್ತಾಯಿಸಿದರು.

## ರಾಜೀನಾಮೆ ನಿರ್ಧಾರದಿಂದ ಹಿಂದೆ ಸರಿದ ಬೇಳೂರು ಗೋಪಾಲಕೃಷ್ಣ



ಸಿಎಂ ಡಿಕೆಶಿಕುಮಾರ್ ರಾಜೀನಾಮೆಯನ್ನು ತಕ್ಷಣವೇ ಅಂಗೀಕರಿಸುತ್ತೇನೆ ಎಂದು ಎಚ್ಚರಿಕೆ ನೀಡುತ್ತಿದ್ದಂತೆ ಮಹತ್ವದ ಬೆಳವಣಿಗೆ ನಡೆದಿದ್ದು, ರಾಜೀನಾಮೆ ನೀಡುತ್ತಿನಿ ಈ ಕುರಿತು ಮಂಗಳವಾರ ನನ್ನ ನಿರ್ಧಾರ ತಿಳಿಸುತ್ತೇನೆ ಎಂದು ಬಹಿರಂಗವಾಗಿಯೇ ಹೇಳಿಕೊಂಡಿದ್ದ ಶಾಸಕ ಬೇಳೂರು ಗೋಪಾಲಕೃಷ್ಣ ಅವರು ಇದೀಗ ತಮ್ಮ ರಾಜೀನಾಮೆ ನಿರ್ಧಾರದಿಂದ ಹಿಂದೆ ಸರಿದಿದ್ದಾರೆ. ಸಚಿವ ಸ್ಥಾನ ಸಿಗದೆ ಅಸಮಾಧಾನಗೊಂಡಿರುವ ನಾಯಕರ ಆಕ್ರೋಶವನ್ನು ತಣಿಸಲು ಡಿ.ಕೆ. ಶಿವಕುಮಾರ್ ಪ್ರಯತ್ನ ಮಾಡಿದ್ದು, ಧರಂಸಿಂಗ್ ಹಾಗೂ ಸಿದ್ದರಾಮಯ್ಯ ಅವರ ಅವಧಿಯಲ್ಲಿ ನನ್ನನ್ನು ಹಾಗೂ ಜಿ. ಪರಮೇಶ್ವರ್ ಇಬ್ಬರನ್ನೂ ಸಂಪುಟದಿಂದ ಹೊರಗಿಡಲಾಗಿತ್ತು. ಆದರೆ ಆ ಸಮಯದಲ್ಲಿ ನಾವು ತಾಳ್ಮೆಯಿಂದ ಇದ್ದೆವು. ಆ ತಾಳ್ಮೆಯೇ ಇಂದು ಪರಮೇಶ್ವರ್ ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಹಾಗೂ ನನ್ನನ್ನು ಇಲ್ಲಿಯವರೆಗೆ(ಮುಖ್ಯಮಂತ್ರಿ) ಕರೆತಂದಿದೆ. ನಮ್ಮ ಪಕ್ಷದಲ್ಲಿ ಕೇವಲ ಶಾಸಕರಷ್ಟೇ ಅಲ್ಲ, ವಿಧಾನ ಪರಿಷತ್ ಸದಸ್ಯರೂ ಸಚಿವರಾಗಲು ಅರ್ಹರಿದ್ದಾರೆ.

ಆದರೆ, ಶಾಸಕಾಂಗದಲ್ಲಿ ಶೇ.15ರಷ್ಟು ಜನರನ್ನು ಮಾತ್ರ ಸಚಿವರನ್ನಾಗಿ ಮಾಡಲು ಸಾಧ್ಯ. ನನ್ನ ನಾಯಕರು ಹಾಗೂ ಸ್ನೇಹಿತರಿಗೆ ಹೇಳುವುದು ಒಂದೇ, ತಾಳ್ಮೆಯಿಂದಿರಿ, ಮುಂದಿನ ದಿನಗಳಲ್ಲಿ ಖಂಡಿತ ಅವಕಾಶ ಮಾಡಿಕೊಡಲಾಗುವುದು ಎಂದು ತಿಳಿಸಿದ್ದರು.

## ರಸ್ತೆ ತಡೆ ನಡೆಸಿದ್ದವರ ವಿರುದ್ಧ ಪ್ರಕರಣ

ಮಾಗಡಿ ರಸ್ತೆ ಹಾಗೂ ನಾಗರಭಾವಿಯಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದ್ದವರ ವಿರುದ್ಧ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸಚಿವ ಸ್ಥಾನ ತಪ್ಪಿದ್ದಕ್ಕೆ ಅಸಮಾಧಾನಗೊಂಡ ಕೃಷ್ಣಪ್ಪ ಹಾಗೂ ಪ್ರಿಯ ಕೃಷ್ಣ ಬೆಂಬಲಿಗರು ಅಜ್ಜಯ್ಯನ ಮಠದ ಶಾಖೆಗೆ ಭೇಟಿ ನೀಡಿದ್ದ ಸಿಎಂ ಅವರ ಕಾರಿಗೆ ಮುತ್ತಿಗೆ ಹಾಕಲು ಯತ್ನಿಸಿದ್ದರು. ಚಂದ್ರಾ ಲೇಔಟ್ ವ್ಯಾಪ್ತಿಯಲ್ಲಿ ಟೈರ್‌ಗಳಿಗೆ ಬೆಂಕಿ ಹಚ್ಚಿ, ರಸ್ತೆ ತಡೆ ನಡೆಸಿ ನೂರಾರು ಬೆಂಬಲಿಗರು ಪ್ರತಿಭಟಿಸಿದ್ದರು. ಪ್ರತಿಭಟಿಸಿದ್ದವರ ವಿರುದ್ಧ ಮಾಗಡಿ ರಸ್ತೆ, ವಿಜಯನಗರ, ಬ್ಯಾಟರಾಯನಪುರ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಮಹಿಳೆಯರಿಗಾಗಿ 'ಋತುತಾರೆ' ಯೋಜನೆ: ಆರೋಗ್ಯ ಸಚಿವ ಯು.ಟಿ.ಖಾದರ್ ಘೋಷಣೆ

• ಉದಯವಾಹಿನಿ, ಬೆಂಗಳೂರು

ಮಹಿಳೆಯರಿಗಾಗಿ 'ಋತುತಾರೆ' ಎಂಬ ಹೊಸ ಯೋಜನೆಯೊಂದನ್ನು ರಾಜ್ಯ ಸರ್ಕಾರ ಜಾರಿಗೆ ತರುತ್ತಿದ್ದು, ಈ ಬಗ್ಗೆ ಸ್ವತಃ ಆರೋಗ್ಯ ಸಚಿವ ಯು.ಟಿ. ಖಾದರ್ ಘೋಷಣೆ ಮಾಡಿದ್ದಾರೆ. ಮಹಿಳೆಯರು ಮಾನಸಿಕ ಒತ್ತಡ, ಸಮಸ್ಯೆ ಅನುಭವಿಸುತ್ತಿದ್ದಾರೆ. ಹೀಗಾಗಿ ಮೆನೋಪಾಸ್ ಸಂಬಂಧ ಮಹಿಳಾ ತಜ್ಞೆ ಜೋಸ್ನಾ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದೇವೆ. ನಟಿ ರಮ್ಯಾ ಈ ಕಾರ್ಯಕ್ರಮದ ಬ್ರ್ಯಾಂಡ್ ಅಂಬಾಸಿಡರ್ ಆಗಿರಲಿದ್ದಾರೆ. ಆಶಾ ಕಾರ್ಯಕರ್ತೆಯರು ಮನೆಮನೆಗೆ ಹೋಗಿ ಮಹಿಳೆಯರ ಡೇಟಾ ತೆಗೆದುಕೊಳ್ಳಲಿದ್ದು, ಪ್ರೀ ಮೆನೋಪಾಸ್ ಹಾಗೂ ಪೋಸ್ಟ್ ಮೆನೋಪಾಸ್ ಕುರಿತು ಯಾವೆಲ್ಲಾ ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ತಿಳಿಸಲಿದ್ದಾರೆ ಎಂದವರು ತಿಳಿಸಿದ್ದಾರೆ.

ಮಹಿಳೆಯರನ್ನು ಕಾಡುತ್ತಿರುವ ಮೆನೋಪಾಸ್ ಸಮಸ್ಯೆ ಕುರಿತು ಸೂಕ್ತ ಕ್ರಮಕ್ಕೆ ನಟಿ ರಮ್ಯಾ ಒತ್ತಾಯಿಸಿದ್ದರು. ಈ ಹಿನ್ನಲೆ ಆರೋಗ್ಯ ಸಚಿವ ಯು.ಟಿ. ಖಾದರ್ ಜೊತೆ ನಟಿ ರಮ್ಯ ಹಾಗೂ ಇತರೆ ಪರಿಣಿತರೊಂದಿಗೆ ಬೆಂಗಳೂರಿನ ಆರೋಗ್ಯ ಸೌಧದಲ್ಲಿ ಮಹತ್ವದ ಸಂವಾದ ನಡೆಸಲಾಗಿದ್ದು, ಎಲ್ಲರ ಸಲಹೆ ಮತ್ತು ಸೂಚನೆಗಳನ್ನು ಆಲಿಸಿದ ಬಳಿಕ ಸರ್ಕಾರ ಈ ತೀರ್ಮಾನ ಮಾಡಿರೋದಾಗಿ ಸಚಿವರು ತಿಳಿಸಿದ್ದಾರೆ.

ಮಹಿಳೆಯರಿಗೆ ಋತುಬಂಧ ಯಾವ ಸಮಯದಲ್ಲಿ ಬಂದಿದೆ ಯಾವ ರೀತಿ ಬಂದಿದೆ. ಅನ್ನೋದನ್ನ ತಿಳಿದುಕೊಳ್ಳಬೇಕು. ನಾರ್ಮಲ್ ಹಾಗೂ ಸರ್ಜಿಕಲ್ ಮೆನೋಪಾಸ್ ಎಂಬ ಎರಡು ವಿಭಾಗಗಳಿವೆ.



ಮೆನೋ ಪಾಸ್ ಸಮಯದಲ್ಲಿ ಹೃದಯ ಸಂಬಂಧಿ, ಮೂಳೆ ಸಂಬಂಧಿ ಕಾಯಿಲೆಗಳು ಬರುವ ಸಾಧ್ಯತೆ ಇದೆ. ಹೀಗಾಗಿ ಸರ್ಜಿಕಲ್ ಆಪರೇಷನ್ ಆದವರು ಹೆಚ್ಚಿನ ಗಮನ ಹರಿಸಬೇಕು.

ನಾರ್ಮಲ್ ಮೆನೋಪಾಸ್ ಸಮಯದಲ್ಲಿ ತೊಂದರೆಯಾಗೋರಿಗೆ ಆಹಾರದಲ್ಲೇ ಸರಿಮಾಡಬಹುದು ಎಂದು ಮಹಿಳಾ ತಜ್ಞೆ ಜೋಸ್ನಾ ತಿಳಿಸಿದ್ದಾರೆ. ಇನ್ನು ಸರ್ಕಾರದ ನಿರ್ಧಾರದ ಬಗ್ಗೆ ಪ್ರತಿಕ್ರಿಯಿಸಿರುವ ನಟಿ ರಮ್ಯಾ, ಬೇರೆ ದೇಶಗಳಿಗೆ ಹೋಲಿಸಿದ್ರೆ ಭಾರತದಲ್ಲಿ ಮೆನೋಪಾಸ್ ಬೇಗ ಕಾಣಿಸಿಕೊಳ್ಳುತ್ತೆ.

ಸಿಟಿಯಲ್ಲಿ ಅತಿ ಹೆಚ್ಚಿನ ಮಹಿಳೆಯರು ಮೆನೋಪಾಸ್ ಸಮಯದಲ್ಲಿ ಸಮಸ್ಯೆಯಿಂದ ಬಳಲುತ್ತಾರೆ. ಯಾವೆಲ್ಲಾ ಸಮಸ್ಯೆಗಳು ಕಾಣಿಸಿಕೊಳ್ಳುತ್ತೆ ಮತ್ತು ಟ್ರೀಟ್‌ಮೆಂಟ್ ಏನೆಂಬ ಬಗ್ಗೆ ಸಿಟಿ ಭಾಗದವರಿಗೂ ಹೆಚ್ಚಾಗಿ ಗೊತ್ತಿಲ್ಲ. ಗ್ರಾಮೀಣ ಭಾಗದವರಿಗಂತೂ ಇದರ ಬಗ್ಗೆ ಮಾಹಿತಿ ಅತಿ ಕಡಿಮೆ ಇದೆ. ಹೀಗಾಗಿ ಇದರ ಬಗ್ಗೆ ಗೃಹಾರೋಗ್ಯ ಪುಸ್ತಕದಲ್ಲಿ ಸೇರಿಸಿ ಅಂತ ಮನವಿ ಇಟ್ಟುಕೊಂಡು ಬಂದಿದ್ದೆವು. ಆದರೆ ಘೋಷಿಸಿರುವ ಯೋಜನೆಗೆ ಸರ್ಕಾರ ತನ್ನನ್ನೇ ಬ್ರ್ಯಾಂಡ್ ಅಂಬಾಸಿಡರ್ ಮಾಡಿರುವುದು ಖುಷಿ ಇದೆ ಎಂದವರು ತಿಳಿಸಿದ್ದಾರೆ.

## ಬೆಂಗಳೂರು ಪೊಲೀಸ್ ವ್ಯವಸ್ಥೆಯಲ್ಲಿ ಭಾರೀ ಬದಲಾವಣೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಪೊಲೀಸ್ ವ್ಯವಸ್ಥೆಯಲ್ಲಿ ಭಾರೀ ಬದಲಾವಣೆ ಕುರಿತಾಗಿ ಸರ್ಕಾರಕ್ಕೆ ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಪ್ರಸ್ತಾವನೆ ಸಲ್ಲಿಸಿದ್ದಾರೆ. ಬೆಂಗಳೂರು ಕಮಿಷನರೇಟ್ ಅನ್ನು 5 ಹೊಸ ಕಮಿಷನರೇಟ್ ವಲಯಗಳಾಗಿ ವಿಭಜಿಸಲು ಮತ್ತು 6,633 ಹೊಸ ಹುದ್ದೆ ಸೃಷ್ಟಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಬೆಂಗಳೂರು ಪೊಲೀಸ್ ಕಮಿಷನರೇಟ್ ಅನ್ನು ಐದು ಪ್ರತ್ಯೇಕ ಕಮಿಷನರೇಟ್‌ಗಳಾಗಿ ವಿಭಜಿಸಲು ನಗರ ಪೊಲೀಸ್ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಈ ಯೋಜನೆಯಡಿ, ಪ್ರಸ್ತುತ ಬೆಂಗಳೂರು ಪೊಲೀಸ್ ಆಯುಕ್ತರು, ಮುಖ್ಯ ಆಯುಕ್ತರ ಹುದ್ದೆ ಸೃಜನೆಯಾಗಲಿದ್ದು, ಕೇಂದ್ರ, ಪೂರ್ವ, ಪಶ್ಚಿಮ, ಉತ್ತರ ಹಾಗೂ ದಕ್ಷಿಣ ಎಂಬ ಐದು ಘಟಕಗಳು ಸೃಷ್ಟಿಯಾಗಲಿವೆ. ಈ ಬದಲಾವಣೆಗೆ ಸುಮಾರು 7,648 ಕೋಟಿ ರೂ. ವೆಚ್ಚವಾಗಲಿದ್ದು, 6,633 ಹೊಸ ಹುದ್ದೆಗಳ ಸೃಷ್ಟಿಗೆ ಮನವಿ ಮಾಡಲಾಗಿದೆ. ಬೆಂಗಳೂರು ಕಮಿಷನರೇಟ್ ಐದು ವಿಭಾಗಗಳ ವಿಂಗಡಣೆ ಸಂಬಂಧ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಹಿರಿಯ ಅಧಿಕಾರಿಗಳ ಜತೆ ಸಾಧಕ-ಬಾಧಕಗಳ ಸಮಾಲೋಚನೆ ಬಳಿಕ ಸಿಎಂ ಡಿಕೆ ಶಿವಕುಮಾರ್ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ.

ಕೇಂದ್ರ ಕಮಿಷನರೇಟ್‌ನಲ್ಲಿ ಓರ್ವ ಸಂಚಾರ ಡಿಸಿಪಿ, ಕೇಂದ್ರ ಕಚೇರಿ ಡಿಸಿಪಿ, ಸಶಸ್ತ್ರ ಮೀಸಲು ಪಡೆ ಕೇಂದ್ರ ಸೇರಿ ಐವರು ಡಿಸಿಪಿ ಗಳಿದ್ದು, ಪ್ರಸ್ತುತ ಕೇಂದ್ರ ವಿಭಾಗದ ಡಿಸಿಪಿ ಜತೆಗೆ, ಗಾಂಧೀನಗರ, ಇಂದಿರಾನಗರ ಹೆಸರಿನ ಹೊಸದಾಗಿ ಕಾನೂನು ಸುವ್ಯವಸ್ಥೆ ವಿಭಾಗ ರಚನೆಯಾಗಲಿದೆ. ಕೇಂದ್ರ ಸಂಚಾರ ವಿಭಾಗ ಅಸ್ತಿತ್ವಕ್ಕೆ ಬರಲಿದೆ. ಈ ಆಯುಕ್ತರ ವ್ಯಾಪ್ತಿಗೆ ವಿಧಾನಸೌಧ ಮತ್ತು ವಿಕಾಸಸೌಧ, ಲೋಕಭವನ, ಹೈಕೋರ್ಟ್,



ನ್ಯಾಯಾಂಗ ಸಮುಚ್ಚಯಗಳು, ಚಿನ್ನಸ್ವಾಮಿ ಹಾಗೂ ಕಂಠೀರವ ಕ್ರೀಡಾಂಗಣಗಳು, ಫ್ರೀಡಂ ಪಾರ್ಕ್, ಮೆಟ್ರೋ ನಿಲ್ದಾಣಗಳು, ಬೈಯಪ್ಪನಹಳ್ಳಿ ಮೆಟ್ರೋ ಡಿಪೋ, ಕೆಎಸ್‌ಆರ್‌ಟಿಸಿ ರೈಲ್ವೆ ನಿಲ್ದಾಣ, ವಲಯ ಕಚೇರಿ ಮತ್ತು ಮೆಜೆಸ್ಟಿಕ್ ಬಸ್ ನಿಲ್ದಾಣ ಸೇರಿ ಇತರೆ ಸ್ಥಳಗಳು ಬರಲಿವೆ. ಉತ್ತರ ವಿಭಾಗದ ಕಮಿಷನರೇಟ್‌ನಲ್ಲಿ ಹಾಲಿ ಉತ್ತರ ವಿಭಾಗ, ಈಶಾನ್ಯ ವಿಭಾಗಗಳ ಜತೆ ಹೊಸದಾಗಿ ಯಶವಂತಪುರ ರಚನೆಯಾಗಲಿದೆ. ಉತ್ತರ ವಿಭಾಗ (ಸಂಚಾರ) ಹಾಗೂ ಸಿಎಆರ್ ಉತ್ತರ ಡಿಸಿಪಿ ವಿಭಾಗಗಳು ಸೇರಲಿವೆ. ಅದೇ ರೀತಿ ಅಮೃತಹಳ್ಳಿ ಉಪ ವಿಭಾಗ ನೂತನವಾಗಿ ಸ್ಥಾಪನೆಯಾಗಲಿದೆ. ಯಲಹಂಕ ಹಾಗೂ ಕೆ.ಜಿ.ಹಳ್ಳಿ ಉಪ ವಿಭಾಗ ಸಹ ಉತ್ತರಕ್ಕೆ ಸೇರ್ಪಡೆಯಾಗಲಿವೆ.

ಪಶ್ಚಿಮ ವಿಭಾಗದಲ್ಲಿ ಕೆಂಗೇರಿ, ಪೀಣ್ಯಾ ಹಾಗೂ ಸಂಚಾರ, ಸಿಎಆರ್‌ಡಿಸಿಪಿಗಳ ಹುದ್ದೆಗಳು ಒಳಪಟ್ಟಿದ್ದು, ಈ ವಿಭಾಗಕ್ಕೆ ಹೊಸದಾಗಿ ಬೆಂಗಳೂರು ದಕ್ಷಿಣ ಜಿಲ್ಲೆಯ ತಾವರೆಕೆರೆ, ನೂತನವಾಗಿ ಆಂಧ್ರಹಳ್ಳಿ, ಕಡಬಗೆರೆ ಠಾಣೆಗಳು ರಚನೆಯಾಗಲಿವೆ. ಸಿಸಿಬಿ ಯಾವುದೇ ವಿಘಟನೆ ಇಲ್ಲದೆ ಯಥಾಸ್ಥಿತಿಯಲ್ಲಿ ಮುಂದುವರೆಯಲಿದ್ದು ಮುಖ್ಯ ಆಯುಕ್ತರ ಅಧೀನದಲ್ಲಿ ಸಿಸಿಬಿ ಕಾರ್ಯನಿರ್ವಹಿಸಲಿದೆ.

# ದಾಖಲೆ ಕೊಡದ ಮನೆಗಳಿಗೆ ಗೃಹಜ್ಯೋತಿ ಯೋಜನೆಯ ಉಚಿತ ವಿದ್ಯುತ್ ಇಲ್ಲ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗೃಹಜ್ಯೋತಿ ಯೋಜನೆಯಡಿ ಉಚಿತ ವಿದ್ಯುತ್ ಪಡೆಯುತ್ತಿರುವ ಗ್ರಾಹಕರಿಗೆ ಇಂಧನ ಇಲಾಖೆ ಶಾಕಿಂಗ್ ಸುದ್ದಿ ನೀಡಿದೆ. ರಾಜ್ಯಾದ್ಯಂತ ನಡೆಯುತ್ತಿರುವ ಮನೆ-ಮನೆ ಸಮೀಕ್ಷೆಯಲ್ಲಿ ಅಗತ್ಯ ದಾಖಲೆಗಳು ಮತ್ತು ಮಾಹಿತಿಯನ್ನು ನೀಡದಿದ್ದರೆ ಫಲಾನುಭವಿಗಳು ಯೋಜನೆಯ ವ್ಯಾಪ್ತಿಯಿಂದ ಹೊರಗುಳಿಯುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಯಾವುದೇ ಅರ್ಹ ಗ್ರಾಹಕರು ಯೋಜನೆಯ ಸೌಲಭ್ಯದಿಂದ ವಂಚಿತರಾಗದಂತೆ ವಿಶೇಷ ಶಿಬಿರಗಳನ್ನು ಆಯೋಜಿಸುವ ಪ್ರಸ್ತಾವನೆಯನ್ನೂ ಸರ್ಕಾರದ ಮುಂದಿಡಲಾಗಿದೆ.

ಇಂಧನ ಇಲಾಖೆಯ ಅಂಕಿ-ಅಂಶಗಳ ಪ್ರಕಾರ ರಾಜ್ಯದಲ್ಲಿ ಗೃಹಜ್ಯೋತಿ ಯೋಜನೆಯಡಿ 1,65,32,652 ಗೃಹ ವಿದ್ಯುತ್ ಗ್ರಾಹಕರು ನೋಂದಾಯಿಸಿಕೊಂಡಿದ್ದಾರೆ. ಇವರಲ್ಲಿ ಆಗಸ್ಟ್ 2, 2026ರವರೆಗೆ 91,50,081 ಫಲಾನುಭವಿಗಳ ಮನೆಗಳಿಗೆ ಮೀಟರ್ ರೀಡರ್‌ಗಳು ಭೇಟಿ ನೀಡಿ ಸಮೀಕ್ಷೆ ಪೂರ್ಣಗೊಳಿಸಿದ್ದು, ಇನ್ನೂ 73,82,571 ಫಲಾನುಭವಿಗಳ ಮಾಹಿತಿ ಸಂಗ್ರಹವಾಗಿಲ್ಲ. ಮನೆ-ಮನೆ ಸಮೀಕ್ಷೆಯ ಉದ್ದೇಶ ಯೋಜನೆಯ ಫಲಾನುಭವಿಗಳ ವಿವರಗಳನ್ನು ನವೀಕರಿಸುವುದು ಮತ್ತು ಯೋಜನೆಯ ಲಾಭ ಸರಿಯಾದ ಫಲಾನುಭವಿಗಳಿಗೆ ತಲುಪುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದಾಗಿದೆ. ಸಮೀಕ್ಷೆ ವೇಳೆ ಗ್ರಾಹಕರು ಮನೆಯಲ್ಲಿ ಇಲ್ಲದಿದ್ದರೆ ಅಥವಾ ಮಾಹಿತಿ ನೀಡಲು ನಿರಾಕರಿಸಿದರೆ ಅವರು ಯೋಜನೆಯ ಪಟ್ಟಿಯಿಂದ ಹೊರಗುಳಿಯುವ ಸಾಧ್ಯತೆ ಇದೆ ಎಂಬ ಎಚ್ಚರಿಕೆಯನ್ನು ಇಲಾಖೆ ನೀಡಿದೆ.




**26,997 ಕೋಟಿಗೂ ಅಧಿಕ ವೆಚ್ಚ**

ಆಗಸ್ಟ್ 2023ರಲ್ಲಿ ಆರಂಭವಾದ ಗೃಹಜ್ಯೋತಿ ಯೋಜನೆಗಾಗಿ ಮೇ 2026ರವರೆಗೆ ರಾಜ್ಯ ಸರ್ಕಾರ ಒಟ್ಟು ರೂ.26,997.54 ಕೋಟಿ ವೆಚ್ಚ ಮಾಡಿದೆ. ಇದರಲ್ಲಿ ಬೆಸ್ಕಾಂ ವ್ಯಾಪ್ತಿಯಲ್ಲಿ ಅತಿ ಹೆಚ್ಚು 12,577.61 ಕೋಟಿ ರೂ. ವೆಚ್ಚವಾಗಿದೆ. ಈ ನಡುವೆ ರಾಜ್ಯ ಸರ್ಕಾರದ ಅತ್ಯಂತ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಲ್ಲಿ ಒಂದಾಗಿರುವ ಗೃಹಜ್ಯೋತಿ ಯೋಜನೆಯ ಫಲಾನುಭವಿಗಳು ಸಮೀಕ್ಷೆಯಲ್ಲಿ ಕಡ್ಡಾಯವಾಗಿ ಸಹಕರಿಸಬೇಕು ಎಂದು ಇಂಧನ ಇಲಾಖೆ ಮನವಿ ಮಾಡಿದೆ.

ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ರಾಜ್ಯದ ಎಲ್ಲಾ ಎಸ್ಕಾಂ ಕಚೇರಿಗಳಲ್ಲಿ ವಿಶೇಷ ಸಮೀಕ್ಷಾ ಶಿಬಿರಗಳನ್ನು ನಡೆಸಲು ಸರ್ಕಾರದ ಅನುಮತಿ ಕೋರಲಾಗಿದೆ. ಈ ಶಿಬಿರಗಳಲ್ಲಿ ಫಲಾನುಭವಿಗಳು ಸ್ವತಃ ಹಾಜರಾಗಿ ತಮ್ಮ ದಾಖಲೆಗಳು ಮತ್ತು ಮಾಹಿತಿಯನ್ನು ಸಲ್ಲಿಸಬಹುದಾಗಿದೆ. ಅಲ್ಲದೆ ಮೊದಲ ಬಾರಿ ಮನೆಗೆ ಭೇಟಿ ನೀಡಿದಾಗ ಫಲಾನುಭವಿಗಳು ಸಿಗದಿದ್ದರೆ ಅಥವಾ ಮಾಹಿತಿ ನೀಡದಿದ್ದರೆ ಮೀಟರ್ ರೀಡರ್‌ಗಳು ಮತ್ತೊಮ್ಮೆ ಮನೆಗಳಿಗೆ ಭೇಟಿ ನೀಡುವಂತೆ ನಿರ್ದೇಶನ ನೀಡಲಾಗಿದೆ. ಈ ನಡುವೆ ಬೆಸ್ಕಾಂ ವ್ಯಾಪ್ತಿಯ ವೈಟ್‌ಫೀಲ್ಡ್, ಮಹದೇವಪುರ ಮತ್ತು ಸರ್ಜಾಪುರ ಸೇರಿದಂತೆ ಕೆಲವು ಪ್ರದೇಶಗಳ ದೊಡ್ಡ ಅಪಾರ್ಟ್‌ಮೆಂಟ್‌ಗಳಲ್ಲಿ ಮೀಟರ್ ರೀಡರ್ ಗಳಿಗೆ ಪ್ರವೇಶ ನೀಡುತ್ತಿಲ್ಲ ಎಂಬ ದೂರುಗಳು ಕೇಳಿಬಂದಿವೆ. ಕೆಲ ನಿವಾಸಿಗಳು ತಮ್ಮ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳಲು ಹಿಂದೇಟು ಹಾಕುತ್ತಿರುವುದರಿಂದ ಸಮೀಕ್ಷೆ ಕಾರ್ಯಕ್ಕೆ ಅಡ್ಡಿಯಾಗುತ್ತಿದೆ ಎಂದು ಸಿಬ್ಬಂದಿ ತಿಳಿಸಿದ್ದಾರೆ.

ಈ ಬಗ್ಗೆ ಮೀಟರ್ ರೀಡರ್‌ಗಳು ಬೆಸ್ಕಾಂ ಮುಖ್ಯ ಕಚೇರಿಯ ಗಮನಕ್ಕೂ ತಂದಿದ್ದಾರೆಂದು ತಿಳಿದುಬಂದಿದೆ. ಕೆಲವರು ತಮ್ಮ ಮಾಹಿತಿಯನ್ನು ಹಂಚಿಕೊಳ್ಳಲು ಆಸಕ್ತಿ ತೋರದಿರುವುದು ನಿಜ. ಅಂಥ ಸಂದರ್ಭಗಳಲ್ಲಿ ಆಪ್‌ನಲ್ಲಿ ಮಾಹಿತಿ ನೀಡಲು ನಿರಾಕರಿಸಿದ್ದಾರೆ ಎಂಬ ಆಯ್ಕೆಯಿದೆ ಮತ್ತು ಫಲಾನುಭವಿಯಿಂದ ಸಹಿಯನ್ನೂ ಪಡೆಯಲಾಗುತ್ತದೆ.

ಇದುವರೆಗೆ ಯಾವುದೇ ಫಲಾನುಭವಿಯನ್ನು ಪಟ್ಟಿಯಿಂದ ಕೈಬಿಡಲಾಗಿಲ್ಲ. ಯೋಜನೆಯಿಂದ ಯಾರನ್ನಾದರೂ ಹೊರಗಿಡುವ ಕುರಿತು ಅಂತಿಮ ನಿರ್ಧಾರವನ್ನು ಸರ್ಕಾರವೇ ಕೈಗೊಳ್ಳಲಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ ಎನ್ ಅವರು, ಸ್ಪಷ್ಟಪಡಿಸಿದ್ದಾರೆ.


**ಈ ದಿನದ ದರ** ಪೆಟ್ರೋಲ್: 110.82₹/L ಡೀಸೆಲ್ : 98.77₹/L ಬಂಗಾರ: ₹ 14,400 /Gram 24ct ₹ 13,200/Gram 22ct ಬೆಳ್ಳಿ: ₹235.00/

# 5 ವಿಭಾಗಗಳಾಗಿ ವಿಭಜಿಸಲು ಕರಡು ಸಿದ್ಧ, ಅಪರಾಧ ನಿಯಂತ್ರಣಕ್ಕೆ ಹೊಸ ತಂತ್ರ..!

• ಉದಯವಾಹಿನಿ, ಬೆಂಗಳೂರು

ವೇಗವಾಗಿ ವಿಸ್ತರಿಸುತ್ತಿರುವ ನಗರದಲ್ಲಿ ಅಪರಾಧ ನಿಯಂತ್ರಣ ಹಾಗೂ ಕಾನೂನು ಸುವ್ಯವಸ್ಥೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಿರ್ವಹಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಬೆಂಗಳೂರು ನಗರ ಪೊಲೀಸ್ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗೆ ಮುಂದಾಗಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮಾದರಿಯಲ್ಲಿ ಬೆಂಗಳೂರು ನಗರ ಪೊಲೀಸ್ ಆಯುಕ್ತಾಲಯವನ್ನು ಮಧ್ಯ, ಉತ್ತರ ದಕ್ಷಿಣ ಪೂರ್ವ ಹಾಗೂ ಪಶ್ಚಿಮ ಎಂದು ಐದು ವಿಭಾಗಗಳಾಗಿ ಮರುರಚಿಸುವ ಕರಡು ಪ್ರಸ್ತಾವನೆ ಸಿದ್ಧವಾಗಿದ್ದು, ನಗರ ಪೊಲೀಸರು ಆಗಸ್ಟ್ 1ರಂದು ಕರಡು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆಂದು ತಿಳಿದುಬಂದಿದೆ. ಈ ಹೊಸ ವ್ಯವಸ್ಥೆಯ ಮೂಲಕ ಅಪರಾಧ ನಿಯಂತ್ರಣ, ತನಿಖೆ ಮತ್ತು ಆಡಳಿತವನ್ನು ಮತ್ತಷ್ಟು ಚುರುಕುಗೊಳಿಸುವ ಗುರಿಯನ್ನು ಸರ್ಕಾರ ಹೊಂದಿದೆ.


ಉದಯವಾಹಿನಿ ಚಿತ್ರ

ಪ್ರಸ್ತಾವನೆಯಂತೆ, ಪೊಲೀಸ್ ಮಹಾನಿರ್ದೇಶಕ ಹುದ್ದೆಯ ಮುಖ್ಯ ಪೊಲೀಸ್ ಆಯುಕ್ತ ಅವರ ನೇತೃತ್ವದಲ್ಲಿ ಐದು ವಿಭಾಗಗಳು ಕಾರ್ಯನಿರ್ವಹಿಸಲಿವೆ. ಇದರ ಜೊತೆಗೆ ಕೇಂದ್ರ ಅಪರಾಧ ವಿಭಾಗ ಗುಪ್ತಚರ ವಿಭಾಗ, ಅಪರಾಧ ಮತ್ತು ಸೈಬರ್ ಕ್ರೈಂ ವಿಭಾಗ, ಆಡಳಿತ, ವಿಐಪಿ ಭದ್ರತೆ ಹಾಗೂ ಸಂಚಾರ ವಿಭಾಗ ನೇರವಾಗಿ ಮುಖ್ಯ ಪೊಲೀಸ್ ಆಯುಕ್ತರ ಅಧೀನದಲ್ಲಿರಲಿವೆ.

ಪೂರ್ವ ವಿಭಾಗವನ್ನು ಹೊರತುಪಡಿಸಿ ಉಳಿದ ನಾಲ್ಕು ವಿಭಾಗಗಳಲ್ಲಿ ಕಾನೂನು ಸುವ್ಯವಸ್ಥೆಗೆ ತಲಾ ಮೂರು ಡಿಸಿಪಿಗಳು ಹಾಗೂ ಸಂಚಾರಕ್ಕೆ ಒಬ್ಬ ಡಿಸಿಪಿ ಇರಲಿದ್ದಾರೆ. ಐದು ವಿಭಾಗಗಳಲ್ಲೂ ಮಹಿಳಾ, ಸೈಬರ್, ಆರ್ಥಿಕ ಮತ್ತು ಮಾದಕ ವಸ್ತು ಅಪರಾಧಗಳಿಗಾಗಿ ಪ್ರತ್ಯೇಕ ಪೊಲೀಸ್ ಠಾಣೆ ಸ್ಥಾಪಿಸುವ ಪ್ರಸ್ತಾವನೆಯೂ ಇದೆ. ಇದರ ಜೊತೆಗೆ ಕೇಂದ್ರ ಅಪರಾಧ ವಿಭಾಗ ಗುಪ್ತಚರ ವಿಭಾಗ ಈ ಪುನರ್‌ರಚನೆಗೆ ಸುಮಾರು ರೂ.764 ಕೋಟಿಗೂ ಹೆಚ್ಚು ವೆಚ್ಚವಾಗುವ ಅಂದಾಜು ಮಾಡಲಾಗಿದೆ.

# ರಾಜ್ಯಾದ್ಯಂತ ಮಳೆ, ಪ್ರಮುಖ ಜಲಾಶಯಗಳಲ್ಲಿ ಶೇ.61ರಷ್ಟು ನೀರು ಸಂಗ್ರಹ

• ಉದಯವಾಹಿನಿ, ಬೆಂಗಳೂರು

ಕಳೆದ ಕೆಲವು ದಿನಗಳಿಂದ ರಾಜ್ಯಾದ್ಯಂತ ಸುರಿಯುತ್ತಿರುವ ಮಳೆಯಿಂದಾಗಿ ಪ್ರಮುಖ ಜಲಾಶಯಗಳಿಗೆ ನೀರಿನ ಹರಿವು ಹೆಚ್ಚಳವಾಗುತ್ತಿದ್ದು, ಬಹುತೇಕ ಭರ್ತಿಯಾಗುವತ್ತ ಸಾಗುತ್ತಿವೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಇಂದಿನ ವರದಿಯಂತೆ ರಾಜ್ಯದ 14 ಪ್ರಮುಖ ಜಲಾಶಯಗಳಲ್ಲಿ ಒಟ್ಟು 546.11 ಟಿಎಂಸಿ ನೀರು ಸಂಗ್ರಹವಾಗಿದ್ದು, ಪ್ರಸ್ತುತ ಜಲಾಶಯಗಳು ಶೇ.61ರಷ್ಟು ಭರ್ತಿಯಾಗಿವೆ.ರಾಜ್ಯದ ಒಟ್ಟು ಜಲಾಶಯಗಳಿಗೆ ಬೃಹತ್ ಪ್ರಮಾಣದಲ್ಲಿ ಅಂದರೆ 4,03,022 ಕ್ಯೂಸೆಕ್ ಒಳಹರಿವು ದಾಖಲಾಗಿದೆ. ಜಲಾಶಯಗಳಿಂದ ನದಿ ಮತ್ತು ನಾಲೆಗಳಿಗೆ ಒಟ್ಟು 1,82,132 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ.ಕಾವೇರಿ ನದಿ ಪಾತ್ರದ ಜಲಾಶಯಗಳಲ್ಲಿ ಪ್ರಸ್ತುತ 80.59 ಟಿಎಂಸಿ ನೀರು ಸಂಗ್ರಹವಾಗಿದೆ. ಕಾವೇರಿ ಕೊಳ್ಳಕ್ಕೆ ಒಟ್ಟು 64,507 ಕ್ಯೂಸೆಕ್ ಒಳಹರಿವಿದ್ದು, 28,882 ಕ್ಯೂಸೆಕ್ ನೀರನ್ನು ಹೊರಗೆ ಬಿಡಲಾಗುತ್ತಿದೆ.ಕೆಆರ್‌ಎಸ್ ಜಲಾಶಯದಲ್ಲಿ ಪ್ರಸ್ತುತ 25.59 ಟಿಎಂಸಿ ನೀರಿದ್ದು, 31,122 ಕ್ಯೂಸೆಕ್ ಒಳಹರಿವು ಹಾಗೂ 1,882 ಕ್ಯೂಸೆಕ್ ಹೊರಹರಿವು ದಾಖಲಾಗಿದೆ.

ಕಬಿನಿ ಜಲಾಶಯದಲ್ಲಿ 18.69 ಟಿಎಂಸಿ ನೀರಿದ್ದು, ಬೃಹತ್ ಪ್ರಮಾಣದ ಅಂದರೆ 27,988 ಕ್ಯೂಸೆಕ್ ಒಳಹರಿವು ಮತ್ತು 27,000 ಕ್ಯೂಸೆಕ್ ಹೊರಹರಿವು ದಾಖಲಾಗಿದೆ.ಹಾರಂಗಿ ಜಲಾಶಯದಲ್ಲಿ 7.90 ಟಿಎಂಸಿ ಹಾಗೂ ಹೇಮಾವತಿಯಲ್ಲಿ 28.41 ಟಿಎಂಸಿ ನೀರು ಸಂಗ್ರಹವಾಗಿದೆ.


# ಬೆಂಗಳೂರಿನಲ್ಲಿ 750 ಕಿ.ಮೀ. ಪಾದಚಾರಿ ಮಾರ್ಗ ತೆರವು; ರಾತ್ರಿ ಸಂಚಾರಕ್ಕೆ ನಿರ್ಬಂಧ

• ಉದಯವಾಹಿನಿ, ಬೆಂಗಳೂರು

ನಗರದಾದ್ಯಂತ ಒಂದು ತಿಂಗಳ ಕಾಲ ನಡೆದ 'ಸೇಫ್ ಫುಟ್‌ಪಾತ್' (ಸುರಕ್ಷಿತ ಪಾದಚಾರಿ ಮಾರ್ಗ) ಅಭಿಯಾನದಡಿ ಅತಿಕ್ರಮಣಗೊಂಡಿದ್ದ 750 ಕಿ.ಮೀ.ಗೂ ಅಧಿಕ ಪಾದಚಾರಿ ಮಾರ್ಗಗಳನ್ನು ತೆರವುಗೊಳಿಸಲಾಗಿದೆ. ಇದೀಗ ಮತ್ತೆ ಅತಿಕ್ರಮಣವಾಗದಂತೆ ಅನಿರೀಕ್ಷಿತ ಪರಿಶೀಲನೆಗಳು ಹಾಗೂ ನಿರಂತರ ತೆರವು ಕಾರ್ಯಾಚರಣೆಗಳ ಮೇಲೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಗಮನ ಕೇಂದ್ರೀಕರಿಸಿವೆ. ಜುಲೈ 1ರಿಂದ ಜುಲೈ 31ರವರೆಗೆ ನಡೆದ ಅಭಿಯಾನದಲ್ಲಿ 750 ಕಿ.ಮೀ. ಪಾದಚಾರಿ ಮಾರ್ಗಗಳನ್ನು ಅತಿಕ್ರಮಣದಿಂದ ಮುಕ್ತಗೊಳಿಸಲಾಗಿದ್ದು, ಇದರಿಂದ ಮಕ್ಕಳು, ಹಿರಿಯ ನಾಗರಿಕರು ಹಾಗೂ ವಿಶೇಷಚೇತನರು ಸೇರಿದಂತೆ ಪಾದಚಾರಿಗಳಿಗೆ ರಸ್ತೆಗಳು ಹೆಚ್ಚು ಸುರಕ್ಷಿತ ಹಾಗೂ ಸುಗಮವಾಗಿವೆ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು. ಆದರೆ, ಪಾದಚಾರಿ ಮಾರ್ಗಗಳನ್ನು ಅತಿಕ್ರಮಣಮುಕ್ತವಾಗಿ ಉಳಿಸಿಕೊಳ್ಳುವುದೇ ಈಗ ದೊಡ್ಡ ಸವಾಲಾಗಿದೆ ಎಂದರು. ಹಲವು ಪ್ರದೇಶಗಳಲ್ಲಿ ಹಲವು ಬಾರಿ ಅತಿಕ್ರಮಣ ತೆರವುಗೊಳಿಸಿದರೂ ಮತ್ತೆ ಅತಿಕ್ರಮಣವಾಗುತ್ತಿರುವುದು ಕಂಡುಬಂದಿದೆ. ನಾಗರಿಕರಿಂದ ನಿರಂತರವಾಗಿ ದೂರುಗಳು ಬಂದ ಹಿನ್ನೆಲೆಯಲ್ಲಿ ಅಧಿಕಾರಿಗಳು ಇತ್ತೀಚೆಗೆ ಅನಿರೀಕ್ಷಿತ ಮರು ಅತಿಕ್ರಮಣ ತೆರವು ಕಾರ್ಯಾಚರಣೆ ನಡೆಸಿದ್ದು, ರಸ್ತೆಬದಿ ವ್ಯಾಪಾರಿಗಳು ಹಾಗೂ ಅಕ್ರಮ ಆಕ್ರಮಣಕಾರರನ್ನು ಅಚ್ಚರಿಗೊಳಿಸಿದ್ದಾರೆ. ಇದೇ ವೇಳೆ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಆಗಸ್ಟ್ 3ರಿಂದ 12ರವರೆಗೆ ಪ್ರತಿದಿನ ರಾತ್ರಿ 10ರಿಂದ ಬೆಳಗ್ಗೆ 5 ಗಂಟೆಯವರೆಗೆ ತುಮಕೂರು ಕಡೆಗೆ ಸಂಚರಿಸುವ ಎಲ್ಲಾ ವಾಹನಗಳ ಮೇಲ್ಸೇತುವೆ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ.

# ಅತಿವೃಷ್ಟಿ, ಅನಾವೃಷ್ಟಿ ಬಗ್ಗೆ ವರದಿ ನೀಡಲು ನೂತನ ಸಚಿವರಿಗೆ ಸೂಚನೆ

ಉದಯವಾಹಿನಿ ಚಿತ್ರ



• ಉದಯವಾಹಿನಿ, ಬೆಂಗಳೂರು

ಬುಧವಾರದಿಂದಲೇ ನೂತನ ಸಚಿವರುಗಳು ತಮಗೆ ಜವಾಬ್ದಾರಿ ವಹಿಸುವ ಜಿಲ್ಲೆಗಳಿಗೆ ಹೋಗಿ ಅತಿವೃಷ್ಟಿ ಹಾಗೂ ಅನಾವೃಷ್ಟಿ ಬಗ್ಗೆ ಅಲ್ಲಿನ ಸ್ಥಳಗಳಿಗೆ ಹೋಗಿ, ಪರಿಶೀಲನೆ ಮಾಡಬೇಕು. ನಂತರ ಕಂದಾಯ ಸಚಿವರಿಗೆ ವರದಿ ಸಲ್ಲಿಸಬೇಕು ಎಂದು ಸಚಿವ ಸಂಪುಟ ಸಭೆಯಲ್ಲಿ ನಿರ್ದೇಶನ ನೀಡಲಾಗಿದೆ ಎಂದು ಸಿಎಂ ಡಿ ಕೆ ಶಿವಕುಮಾರ್ ಮಾಹಿತಿ ನೀಡಿದರು. ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ನಮ್ಮ ಮುಂದಿರುವ ಸವಾಲು, ಎದುರಾಗಬಹುದಾದ ಸಮಸ್ಯೆಗಳ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ಬರಗಾಲ ಹಾಗೂ ಕಾವೇರಿ ಭಾಗದ ಪ್ರದೇಶದಲ್ಲಿ ನೀರಿನ ಸಮಸ್ಯೆ ಬಗ್ಗೆ ಚರ್ಚೆ ಮಾಡಿದ್ದೇವೆ ಎಂದು ತಿಳಿಸಿದರು. ಈಗ ತಾತ್ಕಾಲಿಕವಾಗಿ ಮಳೆಯಿಂದ ಸಮಸ್ಯೆ ನಿವಾರಣೆಯಾಗಿರಬಹುದು. ಭೀಕರವಾದ ಕಂಟಕ ಎದುರಾಗಿತ್ತು. ದೇವರ ಕೃಪೆಯಿಂದ ಇದು ಸಧ್ಯಕ್ಕೆ ನಿವಾರಣೆಯಾಗಿದೆ. ತಮಿಳುನಾಡಿಗೆ 3,50 ಕ್ಯೂಸೆಕ್ ನೀರು ಹರಿಸುವಂತೆ ಹೇಳಿದ್ದು, ನಾವು 30 ಸಾವಿರ ಕ್ಯೂಸೆಕ್ಸ್ ನೀರು ಹರಿಸುವಂತಾಗಿದೆ. ಕೆಆರ್ ಎಸ್, ಹೇಮಾವತಿ ತುಂಬಿಲ್ಲ, ಒಳಹರಿವು ಹೆಚ್ಚಿದೆ.

ಮಲೆನಾಡಿನಲ್ಲಿ ಮಳೆ ಬೀಳುತ್ತಿದ್ದು, ತುಂಗಭದ್ರಾಗೆ ಇನ್ನು ನೀರು ಬರಬೇಕು. ಆಲಮಟ್ಟಿಯಲ್ಲಿ ನೀರಿನ ಹರಿವು ಇದೆ. ಬರಗಾಲದ ಛಾಯೆ ಇನ್ನು ಇದೆ. ಮಳೆಯಿಂದಾಗಿ ಶಿವಮೊಗ್ಗ, ತೀರ್ಥಹಳ್ಳಿ ಭಾಗದಲ್ಲಿ ಅನಾಹುತಗಳು ಆಗಿವೆ. ನಾನು ವರದಿ ತರಿಸಿಕೊಂಡು ಪರಿಹಾರ ನೀಡಲಾಗುವುದು ಎಂದರುಸಂಪುಟ ವಿಸ್ತರಣೆಯಾಗುವ ಹಿನ್ನೆಲೆಯಲ್ಲಿ ಸ್ಥಳೀಯ ನಾಯಕರಿಂದ ಪರಿಹಾರ ಘೋಷಣೆ ಮಾಡಿಸಲು ತೀರ್ಮಾನಿಸಿದ್ದೇವೆ.

# ಸಚಿವ ಸಂಪುಟದಲ್ಲಿ ಬೆಂಗಳೂರು ಮೇಲುಗೈ; ಜಿಲ್ಲೆಗಳಿಗೆ ಸಿಗಲಿಲ್ಲ ಪ್ರಾತಿನಿಧ್ಯ..!

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ವಿಸ್ತೃತ ಸಚಿವ ಸಂಪುಟದಲ್ಲಿ ರಾಜ್ಯದ 31 ಜಿಲ್ಲೆಗಳ ಪೈಕಿ 23 ಜಿಲ್ಲೆಗಳಿಗೆ ಪ್ರಾತಿನಿಧ್ಯ ದೊರೆತಿದ್ದು, 8 ಜಿಲ್ಲೆಗಳಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ. ರಾಜಧಾನಿ ಬೆಂಗಳೂರು ನಗರ ಜಿಲ್ಲೆಗೆ ಅತಿ ಹೆಚ್ಚು ಆರು ಸಚಿವರು ಸ್ಥಾನ ಪಡೆದಿದ್ದು, ಕಲಬುರಗಿ ಜಿಲ್ಲೆಯಿಂದ ಮೂರು ಸಚಿವರು ಸಚಿವ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ. ಬೆಳಗಾವಿ, ಕೊಪ್ಪಳ, ಮಂಡ್ಯ ಹಾಗೂ ರಾಮನಗರ ಜಿಲ್ಲೆಗಳಿಗೆ ತಲಾ ಎರಡು ಸಚಿವ ಸ್ಥಾನಗಳು ದೊರೆತಿವೆ. ಇನ್ನು ಬಾಗಲಕೋಟೆ, ಹಾಸನ, ಬಳ್ಳಾರಿ, ಬೀದರ್, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಹಾವೇರಿ, ಮೈಸೂರು, ಶಿವಮೊಗ್ಗ, ತುಮಕೂರು, ಉತ್ತರ ಕನ್ನಡ ಹಾಗೂ ವಿಜಯಪುರ ಜಿಲ್ಲೆಗಳಿಗೆ ತಲಾ ಒಂದು ಸಚಿವ ಸ್ಥಾನ ಲಭಿಸಿದೆ. ಆದರೆ, ಯಾದಗಿರಿ, ರಾಯಚೂರು, ಗದಗ, ವಿಜಯನಗರ, ಕೊಡಗು, ಕೋಲಾರ, ಉಡುಪಿ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಈ ಬಾರಿ ಸಚಿವ ಸಂಪುಟದಲ್ಲಿ ಯಾವುದೇ ಪ್ರಾತಿನಿಧ್ಯ ದೊರೆತಿಲ್ಲ.

# ಬಿ.ಶಿವಣ್ಣಗೆ ಸಚಿವ ಸ್ಥಾನ ನೀಡದಿದ್ರೆ ಆನೇಕಲ್ ಬಂದ್

• ಉದಯವಾಹಿನಿ, ಆನೇಕಲ್

ಕ್ಷೇತ್ರದ ಶಾಸಕರಾದ ಬಿ.ಶಿವಣ್ಣ ರವರಿಗೆ ಸಿಎಂ ಡಿ.ಕೆ.ಶಿವಕುಮಾರ್‌ರವರ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ಕೈ ತಪ್ಪಿದ ಹಿನ್ನಲೆಯಲ್ಲಿ ಆನೇಕಲ್ ಪಟ್ಟಣದಲ್ಲಿ ಕಾಂಗ್ರೆಸ್ ಹೈ ಕಮಾಂಡ್ ವಿರುದ್ಧ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಧಿಕ್ಕಾರಗಳನ್ನು ಕೂಗಿ ಪ್ರತಿಭಟನೆ ನಡೆಸಿದರು.

ಕೂಡಲೇ ಕಾಂಗ್ರೆಸ್ ಹೈಕಮಾಂಡ್ ಆನೇಕಲ್ ಕ್ಷೇತ್ರದ ಶಾಸಕರಾದ ಬಿ.ಶಿವಣ್ಣಗೆ ಪಕ್ಷದಲ್ಲಿ ಮತ್ತು ಸಚಿವ ಸಂಪುಟದಲ್ಲಿ ಸೂಕ್ತ ಸ್ಥಾನ ನೀಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಆನೇಕಲ್ ಬಂದ್ ಮಾಡಲಾಗುವುದು.ಜೊತೆಗೆ ನಾವೆಲ್ಲರೂ ಒಮ್ಮತದಿಂದ ಕಾಂಗ್ರೆಸ್ ಪಕ್ಷದ ಸದಸ್ಯತ್ವಕ್ಕೆ ಸಾಮೂಹಿಕವಾಗಿ ರಾಜೀನಾಮೆ ನೀಡಲಾಗುವುದು ಎಂದು ಕಾಂಗ್ರೆಸ್ ಮುಖಂಡರು ಕಾಂಗ್ರೆಸ್ ಹೈಕಮಾಂಡ್ ಗೆ ಎಚ್ಚರಿಕೆ ನೀಡಿದರು. ಇದೇ ಸಂಧರ್ಭದಲ್ಲಿ ಟೈರ್‌ಗಳಿಗೆ ಬೆಂಕಿ ಹಚ್ಚಿ ಧಿಕ್ಕಾರಗಳನ್ನು ಕೂಗಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

# ಸುಳ್ಳು ಸುದ್ದಿ ಪತ್ರಿಕೋದ್ಯಮವಲ್ಲ, ಗೊಂದಲ ಸೃಷ್ಟಿಸಿದವರ ವಿರುದ್ಧ ಕಠಿಣ ಕ್ರಮ

## ನನಗೆ ಕೇಳಿದ ಪ್ರಶ್ನೆ, ವಿಜಯಪುರ ಘಟನೆ ಹಿನ್ನೆಲೆಯಲ್ಲಿ ಬಿಜೆಪಿ ಮತ್ತು ಪ್ರತಿಪಕ್ಷ ನಾಯಕ ಆರ್. ಅಶೋಕ್ ನಿಮ್ಮ ರಾಜೀನಾಮೆ ಕೇಳುತ್ತಿದ್ದಾರೆ.

• ಉದಯವಾಹಿನಿ, ಬೆಂಗಳೂರು

ಪೊಲೀಸ್ ನೇಮಕಾತಿ ಪರೀಕ್ಷೆಗಳ ಕುರಿತು ತಮ್ಮ ಹೇಳಿಕೆಯನ್ನು ತಿರುಚಿ ಸುಳ್ಳು ಮಾಹಿತಿ ಹರಡಿದ ಸುದ್ದಿ ಸಂಸ್ಥೆಗಳು ಹಾಗೂ ವ್ಯಕ್ತಿಗಳ ವಿರುದ್ಧ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳುವಂತೆ ಗೃಹ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ನನಗೆ ಕೇಳಿದ ಪ್ರಶ್ನೆ, ವಿಜಯಪುರ ಘಟನೆ ಹಿನ್ನೆಲೆಯಲ್ಲಿ ಬಿಜೆಪಿ ಮತ್ತು ಪ್ರತಿಪಕ್ಷ ನಾಯಕ ಆರ್. ಅಶೋಕ್ ನಿಮ್ಮ ರಾಜೀನಾಮೆ ಕೇಳುತ್ತಿದ್ದಾರೆ. ನಿಮ್ಮ ಪ್ರತಿಕ್ರಿಯೆ ಏನು?' ಎಂಬುದಾಗಿತ್ತು.

ಬಳಿಕ ಬಿಜೆಪಿ ವಿರುದ್ಧ ಕಿಡಿಕಾರಿರುವ ಅವರು, ಪಿಎಸ್‌ಐ ನೇಮಕಾತಿ ಹಗರಣ ನಡೆದಿದ್ದು ಬಿಜೆಪಿ ಆಡಳಿತದ ಅವಧಿಯಲ್ಲಿ ವಿಧಾನಸೌಧವನ್ನು ವ್ಯಾಪಾರ ಸೌಧವನ್ನಾಗಿ ಮಾಡಿದ್ದರು. ಕಾಂಗ್ರೆಸ್ ಸರ್ಕಾರ ನಡೆಸುವ ಪ್ರತಿಯೊಂದು ನೇಮಕಾತಿ ಪರೀಕ್ಷೆಯಲ್ಲೂ ಪಾರದರ್ಶಕತೆ, ಹೊಣೆಗಾರಿಕೆ ಮತ್ತು ನ್ಯಾಯಸಮ್ಮತತೆಯನ್ನು ಕಾಪಾಡಲು ಬದ್ಧವಾಗಿದೆ ಎಂದು ಹೇಳಿದರು.

ಸರ್ಕಾರದ ವರ್ಚಸ್ಸಿಗೆ ಧಕ್ಕೆ ತರುವುದು ಮಾತ್ರವಲ್ಲ, ಹಲವು ವರ್ಷಗಳ ಬಳಿಕ ಸರ್ಕಾರಿ ಉದ್ಯೋಗದ ನಿರೀಕ್ಷೆಯಲ್ಲಿರುವ ಲಕ್ಷಾಂತರ ವಿದ್ಯಾರ್ಥಿಗಳಲ್ಲಿ ಆತಂಕ ಮತ್ತು ಗೊಂದಲ ಸೃಷ್ಟಿಸುವ ಉದ್ದೇಶದಿಂದ ಈ ಸುಳ್ಳು ಮಾಹಿತಿ ಹರಡಲಾಗಿದೆ. ಸುಳ್ಳು ಸುದ್ದಿ ಪತ್ರಿಕೋದ್ಯಮವಲ್ಲ, ಅದು ಜನರನ್ನು ದಾರಿ ತಪ್ಪಿಸುವ ಮತ್ತು ಸಾರ್ವಜನಿಕ ನಂಬಿಕೆಯನ್ನು ಕುಂದಿಸುವ ದುರುದ್ದೇಶದ ತಪ್ಪು ಮಾಹಿತಿ ಎಂದು ಕಿಡಿಕಾರಿದ್ದಾರೆ.ಮತ್ತೊಂದು ಪೋಸ್ಟ್‌ನಲ್ಲಿ, ದಯವಿಟ್ಟು ಸಂಪೂರ್ಣ ಸಂಭಾಷಣೆಯನ್ನು ಜನರ ಮುಂದೆ ಇಡಿ. ನನ್ನ ಮುಂದೆ ಮೈಕ್ ಹಿಡಿಯುವ ಮೊದಲು ಏನು ಮಾತುಕತೆ ನಡೆಯಿತು? ಯಾವ ವಿದ್ಯಾರ್ಥಿಗಳು ನನ್ನ ರಾಜೀನಾಮೆ ಕೇಳಿದ್ದರು? ರಾಜೀನಾಮೆ ಕೇಳಿದ್ದು ಬಿಜೆಪಿ, ಅದಕ್ಕೆ ನಾನು ಉತ್ತರಿಸಿದ್ದೆ. ಕನ್ನಡ ಹಾಗೂ ರಾಷ್ಟ್ರೀಯ ಮಾಧ್ಯಮಗಳು ಸಂಪೂರ್ಣ ಹೇಳಿಕೆಯನ್ನು ದಾಖಲಿಸಿದ್ದರೂ, ಕೆಲವರು ಮಾತ್ರ ಅದನ್ನು ತಿರುಚಿ ಬಿಂಬಿಸಿದ್ದಾರೆ. ಈಗ ತನಿಖೆ ಆರಂಭವಾಗಿರುವುದರಿಂದ ಆಯ್ದ ಭಾಗಗಳನ್ನು ತೋರಿಸುವ ಬದಲು ಸಂಪೂರ್ಣ ವಾಸ್ತವಾಂಶವನ್ನು ತನಿಖೆ ಮುಂದೆ ಇಡಿ ಎಂದು ಒತ್ತಾಯಿಸಿದ್ದಾರೆ.

**1** 25 ದಿನಗಳ ಉಪವಾಸ ಸತ್ಯಾಗ್ರಹ
**2** ಪಿಎಸ್‌ಐ ನೇಮಕಾತಿ ಹಗರಣ
**3** ತಿರುಚಿ ಪ್ರಸಾರ ಮಾಡಿರುವ ಸುದ್ದಿ

## ವಿಪಕ್ಷ ನಾಯಕ ಆರ್.ಅಶೋಕ್ ಕಿಡಿ!



ಉದ್ಯೋಗ ಅರಸುತ್ತಿರುವ ಯುವಕರ ಬಗ್ಗೆ ಸಚಿವ ಪ್ರಿಯಾಂಕ್ ಖರ್ಗೆಗೆ ಕಾಳಜಿಯೇ ಇಲ್ಲ. ನ್ಯಾಯಯುತ ನೇಮಕಾತಿ ಪ್ರಕ್ರಿಯೆಯನ್ನು ಖಾತರಿಪಡಿಸುವಲ್ಲಿ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ ಎಂದು ಆರ್.ಅಶೋಕ್ ಕಿಡಿಕಾರಿದರು. ಆಡಳಿತಾರೂಢ ಕಾಂಗ್ರೆಸ್ ಸರ್ಕಾರವು ನೊಂದ ವಿದ್ಯಾರ್ಥಿಗಳನ್ನು ಅಪಹಾಸ್ಯ ಮಾಡಿದೆ ಎಂದು ಆರೋಪಿಸಿದರು. ಗೃಹ ಸಚಿವ ಪ್ರಿಯಾಂಕ್ ಖರ್ಗೆಯವರು ಈ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು. ರಾಷ್ಟ್ರೀಯ ಮಟ್ಟದಲ್ಲಿ, ಬಿಜೆಪಿ ವಕ್ತಾರ ಮತ್ತು ಸಂಸದ ಸುಧಾಂಶು ತ್ರಿವೇದಿ ಅವರು ಮಾತನಾಡಿ, ಈ ಘಟನೆಯು ಕಾಂಗ್ರೆಸ್ ಬೂಟಾಟಿಕೆಯನ್ನು' ಬಹಿರಂಗಪಡಿಸಿದೆ ಎಂದು ಹೇಳಿದರು. ನೀಟ್ ವಿಷಯಗಳ ಬಗ್ಗೆ ಕೇಂದ್ರದ ಮೇಲೆ ದಾಳಿ ಮಾಡುವ ಪಕ್ಷವು ಈಗ ವಿದ್ಯಾರ್ಥಿಗಳ ಕಳವಳಗಳನ್ನು ಕ್ಷುಲ್ಲಕಗೊಳಿಸುತ್ತಿದೆ ಎಂದು ಆರೋಪಿಸಲ್ಪಟ್ಟ ಸಚಿವರನ್ನು ಸಮರ್ಥಿಸುತ್ತಿದೆ ಎಂದು ವಾದಿಸಿದರು. ಆದಾಗ್ಯೂ, ಕಾಂಗ್ರೆಸ್ ಇಲ್ಲಿಯವರೆಗೂ ಪ್ರಿಯಾಂಕ್ ಖರ್ಗೆ ಅವರ ಪರವಾಗಿಯೇ ನಿಂತಿದೆ. ನೇಮಕಾತಿ ಪರೀಕ್ಷೆಯಲ್ಲಿನ ತಪ್ಪಿನ ಪುರಾವೆಗಳಿಗಿಂತ ಹೆಚ್ಚಾಗಿ ಸಂದರ್ಭದಿಂದ ತೆಗೆದ ಕಾಮೆಂಟ್‌ಗಳ ಮೇಲೆ ನಿರ್ಮಿತ ವಿವಾದ ಎಂಬಂತೆ ವಿವಾದವನು ರೂಪಿಸಿದೆ.

## ಉಪವಾಸ ಸತ್ಯಾಗ್ರಹ, ನಂತರ ಲಾಠಿ ಚಾರ್ಜ್: ರಾಜಕೀಯ ಕೋಲಾಹಲಕ್ಕೆ ಎಡೆ ಮಾಡಿಕೊಟ್ಟ ಪ್ರಿಯಾಂಕ್ ಖರ್ಗೆ ಹೇಳಿಕೆ

## ಪ್ರಿಯಾಂಕ್ ಖರ್ಗೆ ಏನು ಹೇಳಿದ್ರು?

ಸಾವಿರಾರು ಜನರು ಪರೀಕ್ಷೆ ಬರೆಯುತ್ತಿರುವಾಗ ಕೇವಲ 120 ಅಭ್ಯರ್ಥಿಗಳು ಮಾತ್ರ ಗೇಟ್‌ಗಳನ್ನು ತೆರೆಯಲು ಮತ್ತು ವ್ಯವಸ್ಥೆಗಳಿಗೆ ಅಡ್ಡಿಪಡಿಸಲು ಪ್ರಯತ್ನಿಸುವ ಮೂಲಕ ಅಡಚಣೆ ಉಂಟುಮಾಡಿದ್ದಾರೆ ಎಂದು ವಾದಿಸಿದರು. ಪೊಲೀಸರು ಸುವ್ಯವಸ್ಥೆಯನ್ನು ಕಾಪಾಡುವ ಕರ್ತವ್ಯವನ್ನು ಹೊಂದಿದ್ದಾರೆ ಮತ್ತು ಇತರ ಅಭ್ಯರ್ಥಿಗಳ ಹಿತಾಸಕ್ತಿಗಳನ್ನು ರಕ್ಷಿಸಲು ಕೆಲವು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದರು ಎಂದು ಅವರು ಸಮರ್ಥಿಸಿಕೊಂಡರು. ವಿರೋಧ ಪಕ್ಷಗಳು ತಮ್ಮ ಹುದ್ದೆಯಿಂದ ಕೆಳಗಿಳಿಯಬೇಕೆಂಬ ಬೇಡಿಕೆಯ ಬಗ್ಗೆ ಒತ್ತಾಯಿಸಿದಾಗ, ಖರ್ಗೆ, ಹಿಂದಿನ ಬಿಜೆಪಿ ಸರ್ಕಾರ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ನೇಮಕಾತಿ ಹಗರಣವನ್ನು ನಿರ್ವಹಿಸಿದ ರೀತಿಯೊಂದಿಗೆ ಹೋಲಿಕೆ ಮಾಡಿದರು. ವಿಮರ್ಶಕರು ಬಿಜೆಪಿಯ ಸ್ವಂತ ಪ್ರತಿಭಟನಾ ಮಾದರಿಯನ್ನು ಪುನರಾವರ್ತಿಸಿದ ನಂತರವೇ ತಾವು ರಾಜೀನಾಮೆ ನೀಡಲು ಸಿದ್ಧರಿರುವುದಾಗಿ ಅವರು ಹೇಳಿದರು. ಅವರು 25 ದಿನಗಳ ಕಾಲ ಉಪವಾಸ ಸತ್ಯಾಗ್ರಹ ಮಾಡಲಿ, ಲಾಠಿ ಚಾರ್ಜ್ ಮಾಡಲಿ, ನಂತರ ನಾನು ರಾಜೀನಾಮೆ ನೀಡುತ್ತೇನೆ ಎಂದು ಟೀಕಿಸಿದರು, ಪಿಎಸ್‌ಐ ಹಗರಣದ ಸಮಯದಲ್ಲಿ ಆಗಿನ ಸಿಎಂ ಬಸವರಾಜ ಬೊಮ್ಮಾಯಿ ಮತ್ತು ಮಾಜಿ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಏಕೆ ರಾಜೀನಾಮೆ ನೀಡಲಿಲ್ಲ ಎಂದು ಪ್ರಶ್ನಿಸಿದರು.

## ಪರೀಕ್ಷಾ ಗದ್ದಲ ಹೇಗೆ ಪ್ರಾರಂಭವಾಯಿತು?

ವಿಜಯಪುರ ಜಿಲ್ಲೆಯ ತಿಕೋಟಾ ಶಾರದಾಂಬ ಪಿಯು ಕಾಲೇಜು ಸೇರಿದಂತೆ ಕರ್ನಾಟಕದಾದ್ಯಂತ ನಡೆದ ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ನೇಮಕಾತಿ ಪರೀಕ್ಷೆಯಿಂದ ಈ ವಿವಾದ ಹುಟ್ಟಿಕೊಂಡಿದೆ. ಈ ಕೇಂದ್ರದಲ್ಲಿ, ಕೆಲವು ಅಭ್ಯರ್ಥಿಗಳು ತಮ್ಮ ಒಎಂಆರ್ ಉತ್ತರ ಪತ್ರಿಕೆಗಳಲ್ಲಿನ ಸರಣಿ ಸಂಖ್ಯೆಗಳು ತಮ್ಮ ಪ್ರಶ್ನೆ ಪತ್ರಿಕೆಗಳಲ್ಲಿನ ಸರಣಿ ಸಂಖ್ಯೆಗಳಿಗೆ ಹೊಂದಿಕೆಯಾಗುವುದಿಲ್ಲ ಎಂದು ಆರೋಪಿಸಿದರು ಮತ್ತು ಪ್ರಶ್ನೆ ಪತ್ರಿಕೆಗಳನ್ನು ತಡವಾಗಿ ನೀಡಲಾಗಿದೆ ಎಂದು ಆರೋಪಿಸಿದರು. ಇದರಿಂದಾಗಿ ಅನೇಕರು ಪರೀಕ್ಷಾ ಕೇಂದ್ರಗಳಿಂದ ಹೊರನಡೆದು ಮರು ಪರೀಕ್ಷೆಗೆ ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

# ಸಮೀಕ್ಷೆಯಲ್ಲಿ ಮಾಹಿತಿ ನೀಡದಿದ್ದರೆ ಉಚಿತ ವಿದ್ಯುತ್ ಸೌಲಭ್ಯ ಸ್ಥಗಿತ..?

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗೃಹ ಜ್ಯೋತಿ ಯೋಜನೆಯಡಿ ಉಚಿತ ವಿದ್ಯುತ್ ಪಡೆಯುತ್ತಿರುವ ಗ್ರಾಹಕರಿಗೆ ಇಂಧನ ಇಲಾಖೆ ಶಾಕಿಂಗ್ ಸುದ್ದಿಯೊಂದನ್ನು ನೀಡಿದೆ. ರಾಜ್ಯಾದ್ಯಂತ ನಡೆಯುತ್ತಿರುವ ಮನೆ-ಮನೆ ಸಮೀಕ್ಷೆಯಲ್ಲಿ ಅಗತ್ಯ ದಾಖಲೆಗಳು ಮತ್ತು ಮಾಹಿತಿಯನ್ನು ನೀಡದಿದ್ದರೆ ಫಲಾನುಭವಿಗಳು ಯೋಜನೆಯ ವ್ಯಾಪ್ತಿಯಿಂದ ಹೊರಗುಳಿಯುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು


ಉದಯವಾಹಿನಿ ಚಿತ್ರ

ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಯಾವುದೇ ಅರ್ಹ ಗ್ರಾಹಕರು ಯೋಜನೆಯ ಸೌಲಭ್ಯದಿಂದ ವಂಚಿತರಾಗದಂತೆ ವಿಶೇಷ ಶಿಬಿರಗಳನ್ನು ಆಯೋಜಿಸುವ ಪ್ರಸ್ತಾವನೆಯನ್ನೂ ಸರ್ಕಾರದ ಮುಂದಿಡಲಾಗಿದೆ. ಇಂಧನ ಇಲಾಖೆಯ ಅಂಕಿ-ಅಂಶಗಳ ಪ್ರಕಾರ, ರಾಜ್ಯದಲ್ಲಿ ಗೃಹಜ್ಯೋತಿ ಯೋಜನೆಯಡಿ 1,65,32,652 ಗೃಹ ವಿದ್ಯುತ್ ಗ್ರಾಹಕರು ನೋಂದಾಯಿಸಿಕೊಂಡಿದ್ದಾರೆ. ಇವರಲ್ಲಿ ಆಗಸ್ಟ್ 2, 2026ರವರೆಗೆ 91,50,081 ಫಲಾನುಭವಿಗಳ ಮನೆಗಳಿಗೆ ಮೀಟರ್ ರೀಡರ್‌ಗಳು ಭೇಟಿ ನೀಡಿ ಸಮೀಕ್ಷೆ ಪೂರ್ಣಗೊಳಿಸಿದ್ದು, ಇನ್ನೂ 73,82,571 ಫಲಾನುಭವಿಗಳ ಮಾಹಿತಿ ಸಂಗ್ರಹವಾಗಿಲ್ಲ ಎಂದು ತಿಳಿದುಬಂದಿದೆ.ಮನೆ-ಮನೆ ಸಮೀಕ್ಷೆಯ ಉದ್ದೇಶ ಯೋಜನೆಯ ಫಲಾನುಭವಿಗಳ ವಿವರಗಳನ್ನು ನವೀಕರಿಸುವುದು ಮತ್ತು ಯೋಜನೆಯ ಲಾಭ ಸರಿಯಾದ ಫಲಾನುಭವಿಗಳಿಗೆ ತಲುಪುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದಾಗಿದೆ. ಅವರ ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಾಗುವುದಿಲ್ಲ.

# GBA ಚುನಾವಣೆಗೆ ಡಿಕೆಶಿ ಮಾಸ್ಟರ್‌ಪ್ಲಾನ್: ಬೆಂಗಳೂರಿನ 6 ಶಾಸಕರಿಗೆ ಸಚಿವ ಸ್ಥಾನ..!

• ಉದಯವಾಹಿನಿ, ಬೆಂಗಳೂರು

ಮುಂಬರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಐದು ನಗರ ನಿಗಮಗಳ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ತಮ್ಮ ಸಚಿವ ಸಂಪುಟದಲ್ಲಿ ಬೆಂಗಳೂರು ನಗರದಿಂದ ಆರು ಶಾಸಕರಿಗೆ ಸಚಿವ ಸ್ಥಾನ ನೀಡಿದ್ದು, ಇದು ರಾಜಕೀಯವಾಗಿ ಹೆಚ್ಚಿನ ಮಹತ್ವ ಪಡೆದುಕೊಂಡಿದೆ.

ರಾಜಧಾನಿಯಲ್ಲಿ ಒಟ್ಟು 28 ವಿಧಾನಸಭಾ ಕ್ಷೇತ್ರಗಳು ಇದ್ದು, ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಿಗೆ ಡಿಸೆಂಬರ್‌ನಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಕಾಂಗ್ರೆಸ್ ಸಂಘಟನೆ ಬಲಪಡಿಸುವ ಉದ್ದೇಶದಿಂದಲೇ ಆರು ಶಾಸಕರಿಗೆ ಸಚಿವ ಸ್ಥಾನ ನೀಡಲಾಗಿದೆ ಎನ್ನಲಾಗುತ್ತಿದೆ. ಡಿಕೆ.ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ರಾಮಲಿಂಗಾರೆಡ್ಡಿ, ಕೃಷ್ಣ ಬೈರೇಗೌಡ, ಕೆ.ಜೆ. ಜಾರ್ಜ್, ಬೈರತಿ ಸುರೇಶ್, ಬಿ.ಝೆಡ್. ಜಮೀರ್ ಅಹ್ಮದ್ ಖಾನ್ ಹಾಗೂ ರಿಜ್ವಾನ್ ಅರ್ಷದ್ ಸಚಿವರಾಗಿದ್ದಾರೆ.

ಹಿಂದಿನ ಸಿದ್ದರಾಮಯ್ಯ ಸರ್ಕಾರದಲ್ಲೂ ರಾಜಧಾನಿಯಿಂದ ಇದೇ ಸಂಖ್ಯೆಯ ಸಚಿವರಿದ್ದರು. ಆ ವೇಳೆ ದಿನೇಶ್ ಗುಂಡೂರಾವ್ ಸಚಿವರಾಗಿದ್ದರೆ, ಈ ಬಾರಿ ಅವರ ಸ್ಥಾನಕ್ಕೆ ರಿಜ್ವಾನ್ ಅರ್ಷದ್ ಅವಕಾಶ ಪಡೆದಿದ್ದಾರೆ.

ದಿನೇಶ್ ಗುಂಡೂರಾವ್ ಸಚಿವರಾಗಿದ್ದರೆ, ಪ್ರಸ್ತುತ ಸಚಿವ ಸಂಪುಟದಲ್ಲಿ ರಾಮಲಿಂಗಾರೆಡ್ಡಿ ಮತ್ತು ಜಮೀರ್ ಅಹ್ಮದ್ ಖಾನ್ ದಕ್ಷಿಣ ಬೆಂಗಳೂರನ್ನು, ಕೃಷ್ಣ ಬೈರೇಗೌಡ ಮತ್ತು ಬೈರತಿ ಸುರೇಶ್ ಉತ್ತರ ಬೆಂಗಳೂರನ್ನು, ಕೆ.ಜೆ. ಜಾರ್ಜ್ ಮತ್ತು ರಿಜ್ವಾನ್ ಅರ್ಷದ್ ಪೂರ್ವ ಬೆಂಗಳೂರನ್ನು ಪ್ರತಿನಿಧಿಸುತ್ತಿದ್ದಾರೆ.

# ಆ.6ರಿಂದ ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ

• ಉದಯವಾಹಿನಿ, ಬೆಂಗಳೂರು

ಪ್ರತಿ ವರ್ಷದಂತೆ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಲಾಲ್‌ಬಾಗ್‌ನಲ್ಲಿ ನಡೆಯುವ 220ನೇ ಫಲಪುಷ್ಪ ಪ್ರದರ್ಶನದಲ್ಲಿ ಕರ್ನಾಟಕದ ಮೊದಲ ರಾಜಮನೆತನಗಳಲ್ಲಿ ಒಂದಾದ ಗಂಗ ಸಾಮ್ರಾಜ್ಯದ ವೈಭವ ಅನಾವರಣಗೊಳ್ಳಲಿದೆ. ಆಗಸ್ಟ್ 6ರಿಂದ 17ರ ವರೆಗೆ 12 ದಿನಗಳ ಕಾಲ ನಡೆಯುವ ಪ್ರದರ್ಶನಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಲನೆ ನೀಡಲಿದ್ದಾರೆ.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ತೋಟಗಾರಿಕೆ ಇಲಾಖೆಯ ಕಾರ್ಯದರ್ಶಿ ಆರ್.ಗಿರೀಶ್, ಪ್ರದರ್ಶನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್, ಸಚಿವರಾದ ರಾಮಲಿಂಗಾರೆಡ್ಡಿ, ಕೃಷ್ಣ ಬೈರೇಗೌಡ ಮತ್ತಿತರರು ಹಾಜರಿರಲಿದ್ದಾರೆ ಎಂದು ಹೇಳಿದರು.

ಗಂಗರ ಆಳ್ವಿಕೆಯ ವೈಭವವನ್ನು ಬಿಂಬಿಸುವ ಬಣ್ಣಬಣ್ಣದ ಹೂವಿನ ಕಲಾಕೃತಿಗಳು ಈ ಬಾರಿಯ ಪ್ರದರ್ಶನದ ಪ್ರಮುಖ ಆಕರ್ಷಣೆಯಾಗಲಿವೆ. ಗಂಗ ದೊರೆಗಳ ಬಲಿಷ್ಠ ಗಜಸೇನೆ, ಯುದ್ಧದ ಸನ್ನಿವೇಶ, ಶ್ರವಣಬೆಳಗೊಳದ ಬಾಹುಬಲಿ ಪ್ರತಿಮೆ ಹಾಗೂ ತಲಕಾಡಿನ ದೇವಾಲಯಗಳ ಪ್ರತಿಕೃತಿಗಳನ್ನು ಹೂಗಳಿಂದ ನಿರ್ಮಿಸಲಾಗುತ್ತಿದೆ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ, ಶಿಕ್ಷಣ, ನೀರಾವರಿ ಹಾಗೂ ಶಿಲ್ಪಕಲೆಗೆ ಗಂಗರ ಕೊಡುಗೆಯನ್ನು ಪರಿಚಯಿಸುವ ವಿನೂತನ ಕಲಾಕೃತಿಗಳನ್ನೂ ಪ್ರದರ್ಶಿಸಲಾಗುವುದು. ಇತಿಹಾಸವನ್ನು ಹೂಗಳ ಮೂಲಕ ಸಾರ್ವಜನಿಕರಿಗೆ ಪರಿಚಯಿಸುವ ಉದ್ದೇಶದಿಂದ ಈ ಪ್ರದರ್ಶನ ನಡೆಯುತ್ತಿದೆ ಎಂದರು.

**2.75 ಕೋಟಿ ರೂಪಾಯಿ ವೆಚ್ಚ:** 220ನೇ ಫಲಪುಷ್ಪ ಪ್ರದರ್ಶನಕ್ಕಾಗಿ ಸುಮಾರು 2.75 ಕೋಟಿ ರೂ. ಬಜೆಟ್ ಮೀಸಲಿಡಲಾಗಿದೆ. ಪ್ರದರ್ಶನಕ್ಕೆ ಅಗತ್ಯವಿರುವ ಹೂಗಳನ್ನು ಕುಂಡಗಳಲ್ಲಿ ಹಾಗೂ ನೆಲದಲ್ಲಿ ಬೆಳೆಸಲಾಗಿದ್ದು, ವಿವಿಧ ರಾಜ್ಯಗಳಿಂದ ಅಪರೂಪದ ಹೂಗಳನ್ನು ತರಿಸುವ ವ್ಯವಸ್ಥೆಯನ್ನೂ ಮಾಡಲಾಗಿದೆ.

ಗಂಗ ದೊರೆಗಳ ಬಲಿಷ್ಠ ಗಜಸೇನೆ, ಯುದ್ಧದ ಸನ್ನಿವೇಶ, ಪ್ರಸಕ್ತ ಅವಧಿಯಲ್ಲಿ 10 ಲಕ್ಷಕ್ಕೂ ಹೆಚ್ಚು ಮಂದಿ ಆಗಮಿಸುವ ನಿರೀಕ್ಷೆಯಿದೆ ಎಂದು ಹೇಳಿದರು.

# ಅಕ್ಷಯ ವಿಪ್ರ ಮಹಾಸಭಾ 19ನೇ ವಾರ್ಷಿಕೋತ್ಸವ

## ಸಾಧಕರಿಗೆಸನ್ಮಾನ, ಪ್ರತಿಭಾ ಪುರಸ್ಕಾರ ಮತ್ತು ಅಕ್ಷಯರತ್ನ ಪ್ರಶಸ್ತಿ ಪ್ರಧಾನ ಸಮಾರಂಭ

• ಉದಯವಾಹಿನಿ, ಬೆಂಗಳೂರು

ಜಯನಗರ ವಿಜಯ ಕಾಲೇಜು ಸಭಾಂಗಣದಲ್ಲಿ ಅಕ್ಷಯ ವಿಪ್ರ ಮಹಾಸಭಾದಿಂದ 19ನೇ ವಾರ್ಷಿಕೋತ್ಸವ ಮತ್ತು ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ನಾಲ್ವರು ಮಹನೀಯರಿಗೆ 'ಅಕ್ಷಯ ರತ್ನ' ಪುರಸ್ಕಾರ ಮತ್ತು ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭವು ಯಶಸ್ವಿಯಾಗಿ ನಡೆಯಿತು.

ಸಮಾರಂಭದ ದಿವ್ಯ ಸಾನಿಧ್ಯವನ್ನು ಮುಳಬಾಗಿಲು ಶ್ರೀಪಾದರಾಜಮಠದ ಪೀಠಾಧಿಪತಿಗಳಾದ 1008 ಶ್ರೀ ಶ್ರೀ ಸುಜಯನಿಧಿ ತೀರ್ಥರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಎಸ್.ರಘುನಾಥ್ ಅವರು ಅಕ್ಷಯ ವಿಪ್ರ ಮಹಾಸಭಾದ ಅಧ್ಯಕ್ಷರಾದ ಎನ್.ಕೆ.ರಾಮಚಂದ್ರರಾವ್, ಗೌರವಾಧ್ಯಕ್ಷರಾದ ಡಾ.ಎನ್.ಕೀರ್ತಿರಾಜ್ ಕಾರ್ಯದರ್ಶಿ ರಾಘವೇಂದ್ರ ರಾವ್ ಮತ್ತು ಸುಧೀಂದ್ರರಾವ್ ಹಾಗೂ ಪಧಾಧಿಕಾರಿಗಳು ಕಾರ್ಯಕ್ರಮಕ್ಕೆ ದೀಪ ಬೆಳಗಿಸಿ ಚಾಲನೆ ನೀಡಿದರು. ಕೋಲಾರ ಜಿಲ್ಲೆಯ ಖ್ಯಾತ ವಕೀಲರಾದ ಎನ್.ಜಿ.ವಾಸುದೇವಮೂರ್ತಿ, ಡಾ.ಕೆ. ರಘುನಾಥರಾವ್, ದಿ. ಎಸ್.ರಾಮಕೃಷ್ಣ (ಮರಣೋತ್ತರ )ಹೊಸಕೋಟೆಯ ಸಮಾಜ ಸೇವಕ ಎನ್.ಕೆ.ಫಣಿ ರಾಜ್‌ರವರಿಗೆ ಅಕ್ಷಯ ರತ್ನ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಅಕ್ಷಯ ಮಹಾಸಭಾದ ಗೌರವಾಧ್ಯಕ್ಷ ಡಾ. ಎನ್, ಕೀರ್ತಿರಾಜ್ ಮತ್ತು ಅಧ್ಯಕ್ಷ ರಾಮಚಂದ್ರ ರಾವ್ ಅವರು ಮಾತನಾಡಿ ಸಂಘದ ದೆಯೋದ್ದೇಶಗಳ ಬಗ್ಗೆ ಸವಿವಾರವಾಗಿ ಸಭೆಗೆ ತಿಳಿಸಿಕೊಟ್ಟರು. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಹಾಗೂ ಸಾಧಕರನ್ನು, ಎಪ್ಪತ್ತು ವರ್ಷ ಪೂರೈಸಿದ ದಂಪತಿಗಳು ಮತ್ತು ಎಂಬತ್ತೈದು ವರ್ಷ ದಾಟಿದ ಹಿರಿಯ ಸದಸ್ಯರನ್ನು


ಉದಯವಾಹಿನಿ ಚಿತ್ರ

ಎಲ್ಲರನ್ನು ಒಟ್ಟುಗೂಡಿಸಿ ವಿಪ್ರರು ಹೋಗಬೇಕು. ಪ್ರತಿಯೊಬ್ಬರು ಸಮಾಜದ ಏಳಿಗೆಗಾಗಿ ಶ್ರಮಿಸಬೇಕು. ಬ್ರಾಹ್ಮಣ ಸಂಖ್ಯೆ ಬಹಳ ವಿರಳ. ಆರ್ಥಿಕವಾಗಿ ಅನುಕೂಲವಿರುವವರು ನಮ್ಮ ಸಮಾಜದ ಅಭಿವೃದ್ಧಿ ಸಹಕಾರ ಕೊಡಬೇಕು. ಅವಶ್ಯಕತೆ ಇರುವವರಿಗೆ ಸಹಾಯ ಮಾಡಬೇಕು. ಧರ್ಮ ಮತ್ತು ಸಂಸ್ಕೃತಿ ಉಳಿಸಬೇಕು. ಮಕ್ಕಳಿಗೆ ನಮ್ಮ ಸಂಪ್ರಾದಯ ಕಲಿಸಬೇಕು. ಬ್ರಾಹ್ಮಣ ಸಮಾಜ ದೊಡ್ಡ ಸಮಾಜ. ಧರ್ಮ ರಕ್ಷಣೆ ಮಾಡಿದರೆ, ನಾವು ಉಳಿಯುತ್ತೇವೆ. ನದಿಗಳು ಸೇರಿ ಸಮುದ್ರವಾಗುತ್ತದೆ ಅದರಂತೆ ಬ್ರಾಹ್ಮಣರು ಎಲ್ಲರು ಸೇರಿ ಸಂಘಟಿತ ರಾಗಬೇಕು ಎಂದರು. ಶ್ರೀ ಶ್ರೀ ಸುಜಯನಿಧಿ ತೀರ್ಥರು

ಅಕ್ಷಯ ವಿಪ್ರ ಮಹಾಸಭಾ ಬ್ರಾಹ್ಮಣ ಸಂಘಟನೆಯಲ್ಲಿ ಉತ್ತಮ ಕೆಲಸ ಮಾಡುತ್ತಿದ್ದಾರೆ. ನಮ್ಮ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬದಲಾವಣೆ ಮತ್ತು ಅಭಿವೃದ್ಧಿಯತ್ತ ಸಾಗುತ್ತಿದೆ. ಸಂಸ್ಕಾರ, ಸಂಘಟನೆ ಎಂಬ ಉದ್ದೇಶ ಇಟ್ಟುಕೊಂಡು ಸದಸ್ಯತ್ವ ಅಂದೋಲನ ಯಶ್ವಸಿಯಾಗಿ ಸಾಗುತ್ತಿದೆ. ಸ್ವಾವಲಂಭಿಯಾಗಿ, ಸದೃಡವಾಗಿ ಬ್ರಾಹ್ಮಣರು ಬೆಳೆಯಬೇಕು ಎಂದು ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಆಚಾರ್ಯರಿಗೆ ಅಪಮಾನ ಮಾಡಬೇಡಿ, ಬ್ರಾಹ್ಮಣರ ಸಂಖ್ಯೆ ಕಡಿಮೆಯಿದೆ ನಮ್ಮಲ್ಲಿ ಕಚ್ಚಾಟ ಬೇಡ, ಸಂಘಟಿತರಾಗಿ ಸಹೋದರರಂತೆ ಬಾಳೋಣ. ಅಧ್ಯಕ್ಷರಾದ ಎಸ್.ರಘುನಾಥ್

ಜಯನಗರ ಶಾಸಕ ಸಿ ಕೆ ರಾಮಮೂರ್ತಿ, ಸಂಘದ ಹಿರಿಯ ಸದಸ್ಯರಾದ ಎಸ್ ರಾಮರಾವ್, ನಾಗರಾಜ ರಾವ್ ಹುಲಿಮಂಗಲ, ರಾಜರಾವ್, ಪದಾಧಿಕಾರಿಗಳಾದ ಕೆ.ಆನಂದರಾವ್, ಡಾ.ಕಿರಣ್ ಎಸ್.ಮೂರ್ತಿ, ಡಾ.ಕೆ.ರಘುನಾಥರಾವ್, ಲಕ್ಮೀಶ ವಿ.ಶ್ರೀಪ್ರಕಾಶ್,ಕೆ. ರಾಘವೇಂದ್ರರಾವ್, ಎನ್.ಎಸ್.ಸುಧೀಂದ್ರ ರಾವ್ ಮತ್ತು ಮಹೇಶ್ ಕುಮಾರ್ ಆರ್., ಟಿ.ಎನ್.ಶಾಂತ ಕುಮಾರ್.,ಎನ್.ಪಿ.ಮಂಜುನಾಥ್, ಎಲ್.ಜಗನ್ನಾಥ್, ಆರ್. ಶ್ರೀನಿವಾಸ್,ಎನ್.ರಾಘವೇಂದ್ರರಾವ್,ಎನ್.ಜೆ.ಮಣಿಕುಮಾರ್, ಎ.ವಿಜಯಕುಮಾರ್ ಭಟ್, ಎನ್.ರಾಘವೇಂದ್ರರಾವ್ ಮತ್ತು ಕಾರ್ಯಕಾರಿ ಸದಸ್ಯರು, ಹಾಗೂ ನೂರಾರು ಸದಸ್ಯರು ಕುಟುಂಬದ ಸಹಿತ ಭಾಗವಹಿಸಿ ಸಮಾರಂಭವನ್ನು ಸಂಪನ್ನಗೊಳಿಸಿದರು.

**ಉದಯವಾಹಿನಿ**

**ಪ್ರಾದೇಶಿಕ**

ಬುಧವಾರ 05 ಆಗಸ್ಟ್ 2026



# ಸತ್ಸಂಗಗಳ ಮೂಲಕ ಮಾನಸಿಕ ನೆಮ್ಮದಿ ಸಿಗಲಿದೆ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಸತ್ಸಂಗಗಳ ಮೂಲಕ ಮಾನಸಿಕ ನೆಮ್ಮದಿ ಸಿಗಲಿದೆ ಇಂತಹ ಸತ್ಸಂಗಗಳಲ್ಲಿ ಹೆಚ್ಚು ಹೆಚ್ಚು ಪಾಲ್ಗೊಳ್ಳುವಂತವರಾಗಬೇಕು ಎಂದು ಅಣಕನೂರು ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಶ್ರೀ ಪೂರ್ಣಾನಂದ ಸ್ವಾಮಿಜಿ ತಿಳಿಸಿದರು.

ಶ್ರೀದತ್ತಾತ್ರೇಯ ಸಮಾಜ ಸಾಧುಮಠದಲ್ಲಿ ಚೈತನ್ಯ ಯೋಗ ಜ್ಞಾನ ಮಂದಿರ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಮಲ್ಲಾಡಿಹಳ್ಳಿ ಯೋಗ ಗುರುಗಳಾದ ಶ್ರೀ ರಾಘವೇಂದ್ರ ಸ್ವಾಮಿ ಪಾದುಕೆ ಪೂಜೆ ಮತ್ತು 30ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿ ಮಾತನಾಡಿದ ಅವರು, ನಿತ್ಯ ಜಂಜಾಟದಲ್ಲಿ ಇರುವ ನಮಗೆ ದಿನದಲ್ಲಿ ಒಂದು ಗಂಟೆಯಾದರೂ ಭಗವಂತನ ನಾಮ ಸ್ಮರಣೆಯತ್ತ ನಮ್ಮ ಚಿತ್ತ ಇರಿಸಿಕೊಂಡಿರಬೇಕು

> **ನಮ್ಮ ಗುರಿ ತಲುಪಬೇಕಾದರೆ ನಮಗೊಬ್ಬ ಗುರು ಇದ್ದೆ ಇರಬೇಕು. ಗುರುವಿನ ಗುರು ತತ್ವಗಳನ್ನ ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ನಮ್ಮ ಜೀವನ ಸಾರ್ಥಕಮಯವಾದ ಜೀವನವಾಗಲು ಸಾಧ್ಯವಾಗಲಿದೆ-ಅಧ್ಯಕ್ಷ ವಿ ಕೃಷ್ಣಮೂರ್ತಿ**


ಉದಯವಾಹಿನಿ ಚಿತ್ರ

ಎಂದರು. ಇಂತಹ ಸತ್ಸಂಗಗಳಲ್ಲಿ ಏಕಾಗ್ರತೆ ಮೂಡಿಸಿಕೊಂಡು ಭಾಗವಹಿಸಿದರೆ ನಮ್ಮಲ್ಲಿನ ತುಮಲಗಳು ದೂರವಾಗು ವುವು. ನಾವು ನಿತ್ಯ ನಿರಂತರವಾಗಿ ಸುಖ ಸಂತೋಷ ಹಾಗೂ ನೆಮ್ಮದಿ ಕಂಡುಕೊಳ್ಳಬೇಕಾದರೆ ದೈವಿಕೃಪೆ ಬೇಕು ಇಲ್ಲಿ ಶ್ರದ್ಧೆ ಭಕ್ತಿ ಭಾವದ ಜೊತೆಗೆ ಬದುಕಿನ ಆತ್ಮವಿಶ್ವಾಸ ಹೆಚ್ಚುತ್ತದೆ ಎಂದು ಹೇಳಿದರು.

ನಗರ ಸಭೆ ಮಾಜಿ ಸದಸ್ಯ ವಿ. ಸುಬ್ರಹ್ಮಣ್ಯ ಚಾರಿ ಮಾತನಾಡಿ, ಲೋಕಕಲ್ಯಾಣಕ್ಕಾಗಿ ಹತ್ತು ಹಲವಾರು ಕಾರ್ಯಕ್ರಮಗಳನ್ನ ದತ್ತಾತ್ರೇಯ ಸಮಾಜ ಸಾಧು ಮಠ ಟ್ರಸ್ಟ್ ಹಾಗೂ ಚೈತನ್ಯ ಯೋಗ ಜ್ಞಾನ ಮಂದಿರ ಟ್ರಸ್ಟ್ ವತಿಯಿಂದ ಹಮ್ಮಿಕೊಂಡು ಬರಲಾಗುತ್ತಿದೆ ಈ ಒಂದು ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ನಮ್ಮ ಪುಣ್ಯ ಇಂತಹ ಸತ್ಸಂಗಗಳು ಜೀವನದ ಸಾಕಾರಕ್ಕೆ ಮೂಲಾದಾರ ಎಂದ ಅವರೂ ಸಕ್ರಿಯವಾಗಿ ಪಾಲ್ಗೊಗೊಳ್ಳುವುದರಿಂದ ಶ್ರೇಷ್ಠತೆ ಪಡೆಯಬಹುದಾಗಿದೆ ಎಂದರು.

# ಅಂಬೇಡ್ಕರ್ ಪ್ರತಿಮೆ ಅನಾವರಣಕ್ಕೆ ನಗರಸಭೆ ಸಜ್ಜು

**ಅಂಬೇಡ್ಕರ್‌ರವರ ಕಂಚಿನ ಪುತ್ತಳಿಯನ್ನು ಉದ್ಘಾಟನೆಗೊಳಿಸಲು ಶಾಸಕಿ ರೂಪಶಶಿಧರ್ ದಿನಾಂಕ ನಿಗದಿ**

• **ಉದಯವಾಹಿನಿ, ಕೆಜಿಎಫ್**

ನಗರಸಭೆ ಅವರಣದಲ್ಲಿ ನಾಳೆ ಕಂಚಿನ ಅಂಬೇಡ್ಕರ್ ಪ್ರತಿಮೆ ಉದ್ಘಾಟನೆಗಾಗಿ ನಗರಸಭೆ ಅವರಣವನ್ನು ನವ ವಧುವಿನಂತೆ ಸಿಂಗಾರಗೊಳಿಸಲಾಗುತ್ತಿದೆ.ಹಿಂದೆ ಇದ್ದಂತಹ ಪ್ರತಿಮೆಯಲ್ಲಿ ಹಲವು ನ್ಯೂನತೆಗಳು ಕಂಡು ಬಂದಿರುವುದರಿಂದ ಪ್ರತಿಮೆ ಬದಲಾವಣೆಗೊಳಿಸಿ ಕಂಚಿನ ಪ್ರತಿಮೆ ಅನಾವರಣಗೊಳಿಸಬೇಕು ಎಂದು ಹಿಂದಿನಿಂದಲ್ಲೂ ದಲಿತ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಜನಪ್ರತಿನಿಧಿಳಿಂದ ಒತ್ತಾಯಗಳು ಕೇಳಿ ಬಂದಿತ್ತು. ಇದರ ಹಿನ್ನಲೆಯಲ್ಲಿ ನಗರಸಭೆ ಮಾಜಿ ಅಧ್ಯಕ್ಷ ವಳ್ಳಲ್ ಮುನಿಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಕಂಚಿನ ಪ್ರತಿಮೆ ಅನಾವರಣಗೊಳಿಸಲು ಒಮ್ಮತದ ತೀರ್ಮಾನ ಕೈಗೊಳ್ಳಲಾಗಿತ್ತು. ಅದರಂತೆ ನಾಳೆ ಅಧಿಕೃತವಾಗಿ ಅಂಬೇಡ್ಕರ್‌ರವರ ಕಂಚಿನ ಪುತ್ತಳಿಯನ್ನು ಉದ್ಘಾಟನೆಗೊಳಿಸಲು ಶಾಸಕಿ ರೂಪಶಶಿಧರ್ ದಿನಾಂಕ ನಿಗದಿಪಡಿಸಲಾಗಿದ್ದು,ನಗರಸಭೆ ಅವರಣದಲ್ಲಿ ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಿ ಬೃಹುತ್ ವೇದಿಕೆ ಸಿದ್ದಗೊಳಿಸಲಾಗುತ್ತಿದೆ. ನಗರಸಭೆಯ 35 ವಾರ್ಡ್‌ಗಳಿಂದ ಜನರನ್ನು ಕರೆ ತರಲು ನಗರಸಭೆ ಸದಸ್ಯರಿಗೆ ಜವಾಬ್ದಾರಿ ಸಹ ನೀಡಲಾಗಿದೆ.

# ಡಿಕೆ ಸಂಪುಟದಲ್ಲಿ ಚಿಕ್ಕಬಳ್ಳಾಪುರಕ್ಕಿಲ್ಲ ಪ್ರಾತಿನಿಧ್ಯ!

## ಚಿಂತಾಮಣಿ ಕ್ಷೇತ್ರದ ಶಾಸಕ ಡಾ.ಎಂ.ಸಿ.ಸುಧಾಕರ್‌ಗೆ ಉನ್ನತ ಶಿಕ್ಷಣ ಸಚಿವ ಸ್ಥಾನ ನೀಡುವ ಮೂಲಕ ಜಿಲ್ಲೆಗೆ ಪ್ರಾತಿನಿಧ್ಯ ದೊರಕಿತ್ತು

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಚಿಕ್ಕಬಳ್ಳಾಪುರ ಜಿಲ್ಲೆ ರಾಜ್ಯದ ಗಡಿ ಅಂಚಿನ ಜಿಲ್ಲೆ ಆಗಿದ್ದು ಅಭಿವೃದ್ಧಿಯಲ್ಲಿ ಸಾಕಷ್ಟು ಹಿನ್ನಡೆ ಇದ್ದು

**1** ಮತಕ್ಕೆ ನೆನಪಾಗುವ ಚಿಕ್ಕಬಳ್ಳಾಪುರ

**2** ಯಾರಿಗೂ ನೀಡದೆ ಸಚಿವ ಸ್ಥಾನ

**3** ಕಾಡುತ್ತಿರುವ ಕಳವಳದ ಪ್ರಶ್ನೆಯಾಗಿದೆ

ಸಮಸ್ಯೆಗಳ ಸರಮಾಲೆ ಈ ಜಿಲ್ಲೆಯನ್ನು ಕಾಡುತ್ತಿದ್ದು ಈ ಜಿಲ್ಲೆಗೆ ಇದೀಗ ಡಿ.ಕೆ .ಶಿವಕುಮಾರ್ ಎರಡನೇ ಹಂತದ ಸಚಿವ ಸಂಪುಟದ ವಿಸ್ತರಣೆಯಲ್ಲಿ ಜಿಲ್ಲೆಯಲ್ಲಿ ಮೂರು ಮಂದಿ ಕಾಂಗ್ರೆಸ್ ಶಾಸಕರು ಇದ್ದರು ಸಹ ಯಾರಿಗೂ ಮನ್ನಣೆ ನೀಡದೆ ಸಚಿವ ಸ್ಥಾನ ಇಲ್ಲದೆ ಇರುವುದು ಸಾರ್ವಜನಿಕ ವಲಯದಲ್ಲಿ ಹಾಗೂ ಕಾಂಗ್ರೆಸ್ ಪಕ್ಷದಲ್ಲಿ ತೀವ್ರ ನಿರಾಸೆ ಮೂಡಿಸಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರಾಕೆಟ್ ವೇಗದಲ್ಲಿ ಅಭಿವೃದ್ಧಿ ಆಗಬೇಕಾಗಿದ್ದು ಅತ್ಯಂತ ಪ್ರಮುಖವಾಗಿ ಅಂತರರಾಷ್ಟ್ರೀಯ ಮಟ್ಟದ ಹೂವಿನ ಮಾರುಕಟ್ಟೆ ಆಗಬೇಕಾಗಿದೆ. ನಂದಿ ಬೆಟ್ಟಕ್ಕೆ ಆಗಬೇಕಾಗಿದೆ. ಎತ್ತಿನಹೊಳೆ ನೀರು ಸರಬರಾಜು ಆಗಬೇಕಾಗಿದೆ ಅತ್ಯಂತ ಕಲುಷಿತ ನೀರು ಪೂರೈಕೆ ಆಗುತ್ತಿರುವ ಹೆಚ್ಎನ್ ವ್ಯಾಲಿ 3ನೇ ಹಂತದ ಪರಿಷ್ಕರಣೆ ಬೇಕಾಗಿದೆ.ಆದರೆ ಸಚಿವ ಸಂಪುಟದಲ್ಲಿ ಈ ಸಮಸ್ಯೆಗಳ ಬಗ್ಗೆ ಪ್ರಶ್ನಿಸಲು ಪ್ರತಿನಿಧಿತ್ವವೇ ಇಲ್ಲದಿರುವುದು ಜಿಲ್ಲೆಯ ಜನತೆಯನ್ನು ಕಾಡುತ್ತಿರುವ ಕಳವಳದ ಪ್ರಶ್ನೆಯಾಗಿದೆ. ಜಿಲ್ಲೆಯ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಸತತವಾಗಿ ಮೂರು ಅವಧಿಯಲ್ಲಿ ಗೆದ್ದ ನಿಷ್ಠಾವಂತ ಕಾಂಗ್ರೆಸ್ ಶಾಸಕ ಸುಬ್ಬಾರೆಡ್ಡಿ


ಉದಯವಾಹಿನಿ ಚಿತ್ರ

> **ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳು ನೆನಪಾಗುವ ಕಾಂಗ್ರೆಸ್‌ಗೆ ಅಧಿಕಾರ ಹಂಚುವಾಗ ಈ ಜಿಲ್ಲೆಗಳು ಯಾಕೆ ಕಾಣಿಸುವುದಿಲ್ಲ ಎಂದು ಪ್ರಶ್ನಿಸಿದ್ದಾರೆ.ಇದು ಕೇವಲ ಶಾಸಕರನ್ನು ಕಡೆಗಣಿಸಿದ ವಿಷಯವಲ್ಲ ಎರಡು ಜಿಲ್ಲೆಗಳ ಲಕ್ಷಾಂತರ ಮತದಾರರ ಜನಾದೇಶ,ಅವರ ಸ್ವಾಭಿಮಾನ ಮತ್ತು ಬಯಲುಸೀಮೆಯ ಅಸ್ತಿತ್ವಕ್ಕೇ ಮಾಡಿದ ಅಪಮಾನವಾಗಿದೆ ಎಂದು ಹೇಳಿದ್ದಾರೆ.-ಸಂಸದ ಡಾ. ಕೆ. ಸುಧಾಕರ್**

ಚಿಕ್ಕಬಳ್ಳಾಪುರದಲ್ಲಿ ಪ್ರಥಮ ಬಾರಿ ಗೆದ್ದ ಪ್ರಭಾವಿ ಶಾಸಕ ಹಾಗೂ ವಿವಾದಾತ್ಮಕ ಶಾಸಕ ಎಂದು ಜನಜನಿತವಾಗಿದ್ದ ಪ್ರದೀಪ್ ಈಶ್ವರ್ ಎರಡನೇ ಬಾರಿ ಡಿಕೆ ಸಚಿವ ಸಂಪುಟದಲ್ಲಿ ಸಚಿವ ಸ್ಥಾನಕ್ಕೆ ಪ್ರಯತ್ನ ಮಾಡಿದ್ದ ಚಿಂತಾಮಣಿಯ ಡಾಕ್ಟರ್ ಎಂ ಸಿ ಸುಧಾಕರ್ ಇವರುಗಳ ಪ್ರಯತ್ನಗಳೆಲ್ಲವೂ ನೀರಿನಲ್ಲಿ ಕದಡಿದ ಹೋಮದಂತಾಗಿರುವುದುಕಾಂಗ್ರೆಸ್ಸಿಗರಲ್ಲಿ ತೀವ್ರ ಅತಂಕ ನಿರಾಸೆ ಮೂಡಿಸಿ ಈ ದುಷ್ಪರಿಣಾಮ 2028 ರಲ್ಲಿ ನಡೆಯುವ ವಿಧಾನಸಭಾ ಚುನಾವಣೆಯ ಮೇಲೆ ಕರಿನೆರಳು ಬೀರುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಮೂರು ವರ್ಷಗಳ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಚಿಂತಾಮಣಿ ಕ್ಷೇತ್ರದ ಶಾಸಕ ಡಾ.ಎಂ.ಸಿ.ಸುಧಾಕರ್‌ಗೆ ಉನ್ನತ ಶಿಕ್ಷಣ ಸಚಿವ ಸ್ಥಾನ ನೀಡುವ ಮೂಲಕ ಜಿಲ್ಲೆಗೆ ಪ್ರಾತಿನಿಧ್ಯ ದೊರಕಿತ್ತು.

**ಸಾರ್ವಜನಿಕರು ಅಸಮಾಧಾನ**

**ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರು ಇದ್ದರೂ ಜಿಲ್ಲೆಗೆ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ನೀಡದಿರುವುದು ಜಿಲ್ಲೆಯ ಅಭಿವೃದ್ಧಿ ಮತ್ತು ಜನರ ಹಿತಾಸಕ್ತಿಯನ್ನು ಕಡೆಗಣಿಸಿದಂತಾಗಿದೆ.**

ಈ ಬಾರಿ ಜಿಲ್ಲೆಯ ಪರವಾಗಿ ಬಲವಾದ ಆಕಾಂಕ್ಷಿಗಳು ಬಾಗೇಪಲ್ಲಿ ಶಾಸಕ ಎಸ್,ಎನ್.ಸುಬ್ಬಾರೆಡ್ಡಿ, ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಇದ್ದರೂ ಕಾಂಗ್ರೆಸ್ ಹೈಕಮಾಂಡ್ ಚಿಕ್ಕಬಳ್ಳಾಪುರ ಜಿಲ್ಲೆಯನ್ನು ಸಚಿವ ಸಂಪುಟದಿಂದ ಹೊರಗಿಟ್ಟಿರುವುದು ಸಾರ್ವಜನಿಕ ವಲಯದಲ್ಲಿ ಅಸಮಾಧಾನ ವ್ಯಕ್ತವಾಗಿದೆ. ಹೊರತುಪಡಿಸಿ ಉಳಿದ ಅವಧಿಯಲ್ಲಿ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ರೋಷನ್ ಬೇಗ್, ನಾರಾಯಣಸ್ವಾಮಿ, ಶೋಭಾ ಕರಂದ್ಲಾಜೆ, ಮುಮ್ತಾಜ್ ಅಲಿ ಖಾನ್, ವೆಂಕಟರಮಣಪ್ಪ, ದಿನೇಶ್ ಗುಂಡೂರಾವ್ ಸೇರಿದಂತೆ ಹಲವು ಹೊರ ಜಿಲ್ಲೆಯ ನಾಯಕರು ಕಾರ್ಯನಿರ್ವಹಿಸಿದ್ದರು. ಈ ಬಾರಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸಚಿವ ಸಂಪುಟದಲ್ಲಿ ಜಿಲ್ಲೆಗೆ ಅವಕಾಶ ಸಿಗದಿರುವುದರಿಂದ ಕಾಂಗ್ರೆಸ್ ಸರಕಾರ ಸಾಮಾಜಿಕ ನ್ಯಾಯ ಮತ್ತು ಪ್ರಾದೇಶಿಕ ಸಮತೋಲನ ಕಾಪಾಡುವಲ್ಲಿ ವಿಫಲವಾಗಿದೆ ಎಂಬ ಟೀಕೆ ವ್ಯಕ್ತವಾಗಿದೆ.

# ಬಿಡದಿ ಟೌನ್ ಶಿಪ್ ಯೋಜನೆ: ರೈತರಿಗೆ ಹೈಕೋರ್ಟ್ ತಾತ್ಕಾಲಿಕ ರಿಲೀಫ್ ನೀಡಿದೆ - ನಿಖಿಲ್ ಕುಮಾರಸ್ವಾಮಿ

• **ಉದಯವಾಹಿನಿ, ರಾಮನಗರ**

ರೈತರ ಪರವಾಗಿ ಜೆಡಿಎಸ್ ಕಾನೂನು ಹೋರಾಟ ಆರಂಭಿಸಿತ್ತು. ಯೋಜನೆಗೆ ವಿರೋಧ ಇರುವ ರೈತರ ಪರವಾಗಿ ಪಕ್ಷ ವಕಾಲತ್ತು ವಹಿಸಿತ್ತು. ಪರಿಣಾಮ ರೈತರಿಗೆ ಇದೀಗ ತಾತ್ಕಾಲಿಕ ಜಯ ಸಿಕ್ಕಿದೆ. ಇದು ಟೌನ್ ಶಿಪ್ ವಿರುದ್ಧದ ಹೋರಾಟಕ್ಕೆ ಶುಭ ಸೂಚನೆಯಾಗಿದೆ ಎಂದು ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ರಾಮನಗರದಲ್ಲಿ ಈ ಕುರಿತು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಬಿಡದಿ ಟೌನ್‌ಶಿಪ್ ಯೋಜನೆ ವ್ಯಾಪ್ತಿಯ ರೈತರಿಗೆ ರಾಜ್ಯ ಹೈಕೋರ್ಟ್ ತಾತ್ಕಾಲಿಕ ರಿಲೀಫ್ ನೀಡಿದೆ. ಪರಿಹಾರದ ಮೊತ್ತ ನಿಗದಿಯಾಗುವವರೆಗೂ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರಿಸದಂತೆ ಕೋರ್ಟ್ ಸರ್ಕಾರಕ್ಕೆ ಸೂಚಿಸಿದೆ ಎಂದು ತಿಳಿಸಿದರು. ಇನ್ನುಳಿದ ಗ್ರಾಮಗಳ ರೈತರ ವಕಾಲತ್ತು ಪತ್ರಗಳನ್ನು ಸಹ ಕೋರ್ಟ್‌ಗೆ ಸಲ್ಲಿಸಲಾಗಿದ್ದು, ಈ ಶುಕ್ರವಾರ ಆ ಪ್ರಕರಣದ ವಿಚಾರಣೆ ನಡೆಯುವ ಸಾಧ್ಯತೆ ಇದೆ ಎಂದು ನಿಖಿಲ್ ಕುಮಾರಸ್ವಾಮಿ ಹೇಳಿದರು. **2013ರ ಕಾಯ್ದೆ ಉಲ್ಲಂಘನೆ ಆರೋಪ:** ಸರ್ಕಾರವು



ಉದಯವಾಹಿನಿ ಚಿತ್ರ

ರೈತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಏಕಪಕ್ಷೀಯವಾಗಿ ಯೋಜನೆ ಜಾರಿಗೆ ಮುಂದಾಗಿದೆ. ಹಾಗೆಯೇ 2013ರ ಭೂ ಸ್ವಾಧೀನ ಕಾಯ್ದೆಯ ಪ್ರಕಾರ ಈ ಯೋಜನೆ ಜಾರಿಯಾಗುತ್ತಿಲ್ಲ. ಆದರೂ ಅದೇ ಕಾಯ್ದೆಯನ್ನು ಉಲ್ಲೇಖಿಸಿ ಸರ್ಕಾರ ಮುಂದುವರೆಯುತ್ತಿದೆ. ಕೋರ್ಟ್ ಎಲ್ಲವನ್ನೂ ಗಮನಿಸುತ್ತಿದೆ. ಅಂತಿಮವಾಗಿ ರೈತರ ಪರವಾಗಿಯೇ ತೀರ್ಪು ಬರಲಿದೆ ಎಂಬ ವಿಶ್ವಾಸ ನಮಗಿದೆ ಎಂದರು. ಟೌನ್‌ಶಿಪ್ ಯೋಜನೆ ಜಾರಿಗೆ ಜಿಬಿಡಿಎ ಬಳಿ ಸಾಕಷ್ಟು ಹಣವೇ ಇಲ್ಲ ಎಂದು ದೂರಿದ ಅವರು, ಬಿಎಂಆರ್‌ಡಿಎ ಆಸ್ತಿಯನ್ನು ಅಡಮಾನ ಇಟ್ಟು ಸ್ವಲ್ಪ ಹಣ ಸಂಗ್ರಹಿಸಲಾಗಿದೆ. ಸರ್ಕಾರದ ಬೊಕ್ಕಸವೂ ಖಾಲಿಯಾಗಿದೆ. ಕೆಲವರಿಗೆ ಚೆಕ್ ನೀಡಿ ರೈತರನ್ನು ಆಕರ್ಷಿಸುವ ತಂತ್ರ ಸರ್ಕಾರದ್ದು. ಆದರೆ ಯಾವುದೇ ಕಾರಣಕ್ಕೂ ರೈತರು ಭೂಮಿ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಯಾರು ಮಂತ್ರಿ ಆದರೂ, ಮುಖ್ಯಮಂತ್ರಿ ಆದರೂ ರೈತರ ವಿರುದ್ಧ ಹೋಗಬಾರದು ಎಂದು ಸರ್ಕಾರಕ್ಕೆ ನಿಖಿಲ್ ಕುಮಾರಸ್ವಾಮಿ ಎಚ್ಚರಿಕೆ ನೀಡಿದರು.

**ಸಚಿವ ಸ್ಥಾನದ ರಾಜೀನಾಮೆ ಕುರಿತು:** ಸಚಿವ ಸ್ಥಾನ ಸಿಗದಿದ್ದಕ್ಕೆ ಕೆಲ ಕಾಂಗ್ರೆಸ್ ಶಾಸಕರು ರಾಜೀನಾಮೆ ನೀಡುವ ಬೆದರಿಕೆ ಹಾಕಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಇದು ಸರ್ಕಾರಕ್ಕೆ ಮತ್ತು ಆ ಪಕ್ಷಕ್ಕೆ ಬಿಟ್ಟ ವಿಚಾರ. ಯಾರನ್ನು ಸಚಿವರನ್ನಾಗಿ ಮಾಡಬೇಕು ಎಂಬುದು ಅವರ ತೀರ್ಮಾನ. ಈ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ. ಕೆಲ ಹಿರಿಯ ಶಾಸಕರು ಅಸಮಾಧಾನಗೊಂಡಿದ್ದಾರೆ.

ಆ ರಾಜೀನಾಮೆಗಳು ಅಂಗೀಕಾರವಾಗುತ್ತವೆಯೇ ಅಥವಾ ಇದು ಬ್ಲಾಕ್‌ಮೇಲ್ ತಂತ್ರವೇ ಎಂಬುದನ್ನು ಕಾದು ನೋಡಬೇಕು ಎಂದು ನಿಖಿಲ್ ಕುಮಾರಸ್ವಾಮಿ ಇದೇ ವೇಳೆ ಮಾತನಾಡಿದರು.

# ಕೆಎಸ್‌ಆರ್‌ಟಿಸಿ ಅಧ್ಯಕ್ಷ ಸ್ಥಾನಕ್ಕೆ ಶಾಸಕ ಎಸ್.ಆರ್. ಶ್ರೀನಿವಾಸ್ ರಾಜೀನಾಮೆ ಘೋಷಣೆ

• **ಉದಯವಾಹಿನಿ, ತುಮಕೂರು**

ಸಿಎಂ ಡಿ.ಕೆ. ಶಿವಕುಮಾರ್ ಸಂಪುಟದಲ್ಲಿ ಸಚಿವ ಸ್ಥಾನ ಕೈತಪ್ಪಿದ ಹಿನ್ನೆಲೆಯಲ್ಲಿ ಹಲವು ಶಾಸಕರು ರಾಜೀನಾಮೆ ನೀಡಲು ಮುಂದಾಗಿದ್ದಾರೆ. ಈ ನಡುವೆ ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್ ಅವರು ಕೆಎಸ್‌ಆರ್‌ಟಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಘೋಷಿಸಿದ್ದಾರೆ. ತುಮಕೂರಿನಲ್ಲಿ ಈ ಕುರಿತು ಮಾತನಾಡಿರುವ ಅವರು, ಜನ ನನಗೆ ಸಚಿವ ಸ್ಥಾನ ಕೊಡಬೇಕು ಎಂದು ಕೇಳುತ್ತಾರೆ. ಆದರೆ ರಾಜಕೀಯದಲ್ಲಿ ನಮ್ಮಂಥ ಸಾಮಾನ್ಯ ರೈತನ ಮಗ ಮೇಲೆ ಬರೋದು ಕಷ್ಟ. ಯಾರಾದರೂ ತಲೆ ಹೊಡೆದು ಹಣ ಸಂಪಾದನೆ ಮಾಡಿರಬೇಕು, ಅಂಥವರು ಮೇಲಕ್ಕೆ ಬರುತ್ತಾರೆ. ಜಗಳ ಮಾಡಿ ತೆಗೆದುಕೊಳ್ಳಲು ಅದೇನು ನಮ್ಮ ಅಪ್ಪನ ಆಸ್ತಿ ಅಲ್ಲ, ನಮಗೆ ಯೋಗ್ಯತೆ ಇಲ್ಲ ಅಂತ ಅರ್ಥ. ನಮಗೆ ಗಾಡ್ ಫಾದರ್


ಉದಯವಾಹಿನಿ ಚಿತ್ರ

ಇರಲಿಲ್ಲ, ಹಾಗಾಗಿ ಸಚಿವ ಸ್ಥಾನ ತಪ್ಪಿದೆ ಎಂದು ಬೇಸರ ಹೊರಹಾಕಿದ್ದಾರೆ.

ರಾಜಕೀಯದ ಹೊಸ ಪಾಠ ಈಗ ಅರ್ಥ ಆಗುತ್ತಿದೆ. ಗುರುತಿಸುತ್ತಾರೆ ಎಂದು ಅಂದುಕೊಂಡಿದ್ದೆ.

ಈಗ ಎಲ್ಲವೂ ಮೀರಿ ಹೋಗಿದೆ. ಪ್ರಾಮಾಣಿಕತೆಗೆ ಬೆಲೆ ಎಷ್ಟಿದೆ ಅನ್ನೋದು ಈಗ ಗೊತ್ತಾಗಿದೆ. ರಾಜಕೀಯ ಡಬಲ್ ಗೇಮ್, ಮೋಸದಿಂದ ಕೂಡಿದೆ. ಅವಕಾಶ ಸಿಗುತ್ತೆ ಅಂದುಕೊಂಡಿದ್ದೆ. ಈಗ ಅವಕಾಶ ವಂಚಿತನಾಗಿದ್ದೇನೆ. ನಮ್ಮ ಜಿಲ್ಲೆಗೆ ಇನ್ನೊಂದು ಸ್ಥಾನ ಕೊಡಬಹುದಿತ್ತು. ಬಡವನ ಕೋಪ ದವಡೆಗೆ ಮೂಲ. ಇನ್ನೂ ಒಂದೂವರೆ ವರ್ಷ ಸಮಯ ಇದೆ. ಕಾರ್ಯಕರ್ತರು ಏನು ತೀರ್ಮಾನ ಮಾಡುತ್ತಾರೋ ನೋಡೋಣ.

ನಾನೂ ನಿಗಮ ಮಂಡಳಿಗೆ ರಾಜೀನಾಮೆ ಕೊಡುತ್ತೇನೆ. ಕೆಎಸ್‌ಆರ್‌ಟಿಸಿ ನಷ್ಟದಲ್ಲಿ ಇದೆ. ಏನೂ ಸಾಧನೆ ಮಾಡಲು ಆಗಲ್ಲ. ಹಾಗಾಗಿ ನಾನು ನಾಳೆ ಕೆಎಸ್‌ಆರ್‌ಟಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ ಎಂದು ತಿಳಿಸಿದರು.

> **ಸಚಿವ ಸ್ಥಾನ ಸಿಗದೆ ಅಸಮಾಧಾನಗೊಂಡಿರುವ ಶಾಸಕರುಗಳು ರಾಜೀನಾಮೆ ನೀಡಿದರೆ ಕೆಲವೇ ನಿಮಿಷಗಳಲ್ಲಿ ಅವರ ರಾಜೀನಾಮೆಯನ್ನು ಅಂಗೀಕರಿಸುವುದಾಗಿ ಖಡಕ್ ಎಚ್ಚರಿಕೆ ನೀಡಿದ್ದಾರೆ.-ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್**

# ಒಂದೇ ಕಂತಿನಲ್ಲಿ ಭೂ ಪರಿಹಾರ ಬಿಡುಗಡೆ ಬಳಿಕ 135 ದಿನಗಳ ಧರಣಿ ಹಿಂಪಡೆದ ರೈತಸಂಘ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಜಂಗಮಕೋಟೆ ಹೋಬಳಿಯ ಕೆಐಎಡಿಬಿ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆ ವಿರೋಧ ಹಾಗೂ ರೈತರಿಗೆ ಸಮರ್ಪಕ ಪರಿಹಾರಕ್ಕಾಗಿ ಕಳೆದ 135 ದಿನಗಳಿಂದ ಜಿಲ್ಲಾಡಳಿತ ಭವನದ ಎದುರು ನಡೆಯುತ್ತಿದ್ದ ಅನಿರ್ದಿಷ್ಟಾವಧಿ ಧರಣಿಯನ್ನು ಜಂಗಮಕೋಟೆ ಹೋಬಳಿ ಕೆಐಎಡಿಬಿ ಜಮೀನುಗಳ ರೈತರಪರ ಹೋರಾಟ ಸಮಿತಿ ತಾತ್ಕಾಲಿಕವಾಗಿ ಹಿಂಪಡೆದಿದೆ.

ಸರ್ಕಾರ ರೈತರಿಗೆ ಭೂಪರಿಹಾರವನ್ನು ಆರ್‌ಟಿಜಿಎಸ್ ಮೂಲಕ ಒಂದೇ ಕಂತಿನಲ್ಲಿ ಖಾತೆಗೆ ಜಮೆ ಮಾಡುವ ಪ್ರಕ್ರಿಯೆ ಆರಂಭಿಸಿರುವುದು ಈ ನಿರ್ಧಾರಕ್ಕೆ ಪ್ರಮುಖ ಕಾರಣವಾಗಿದೆ.

ಕೆಐಎಡಿಬಿ ಆಯುಕ್ತರಿಗೆ ಕೆಲವು ಷರತ್ತುಗಳನ್ನು ವಿಧಿಸುವಂತೆ ಒತ್ತಾಯಿಸಿ ಜಿಲ್ಲಾ ಉಪವಿಭಾಗಾಧಿ ಕಾರಿ ಆರ್.ಅಶ್ವಿನ್ ಅವರಿಗೆ ಮನವಿ ಸಲ್ಲಿಸಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು.ಜಂಗಮಕೋಟೆ ಹೋಬಳಿಯ 13 ಗ್ರಾಮಗಳ ಸುಮಾರು 2850 ಎಕರೆ ಭೂಮಿಯಲ್ಲಿ ಕೈಗಾರಿಕಾ ಪ್ರದೇಶ ಸ್ಥಾಪನೆಗೆ ಪ್ರಾಥಮಿಕ ಅಧಿಸೂಚನೆ ಹೊರಬಿದ್ದ ದಿನದಿಂದಲೇ ಪರ-ವಿರೋಧ ಚಳವಳಿ ಗಳು ತೀವ್ರಗೊಂಡಿದ್ದವು.

ಒಂದೆಡೆ ಕೋಡಿಹಳ್ಳಿ ಚಂದ್ರಶೇಖರ್ ಬಣದ ಕರ್ನಾಟಕ ರಾಜ್ಯ ರೈತಸಂಘ ಫಲವತ್ತಾದ ಕೃಷಿಭೂಮಿಯನ್ನು ಯಾವುದೇ ಕಾರಣಕ್ಕೂ ಕೈಗಾರಿಕೆಗೆ ನೀಡಬಾರದು ಎಂದು ಹೋರಾಟ ನಡೆಸುತ್ತಿದ್ದರೆ, ಮತ್ತೊಂದೆಡೆ ಕೈಗಾರಿಕೆ ಬೇಕು.

ಆದರೆ ರೈತರಿಗೆ ನ್ಯಾಯಯುತ ಪರಿಹಾರ, ಉದ್ಯೋಗ ಹಾಗೂ ಒಂದೇ ಕಂತಿನಲ್ಲಿ ಹಣ ಪಾವತಿಸಬೇಕು ಎಂದು ರೈತರಪರ ಹೋರಾಟ ಸಮಿತಿ ಒತ್ತಾಯಿಸುತ್ತಿತ್ತು.

# ಶೌಚಾಲಯವೇ ಇಲ್ಲದ ಆದರ್ಶ ಕ್ರೀಡಾಂಗಣ

• **ಉದಯವಾಹಿನಿ, ಮೈಸೂರು**

ಬೆಳಿಗ್ಗೆ 5 ಗಂಟೆಗೆ ವಾಯುವಿಹಾರಕ್ಕೆ ಬರುವ ನೂರಾರು ಮಹಿಳೆಯರು, ಸಂಜೆ ಕ್ರಿಕೆಟ್ ಆಡಲು ಬರುವ ಯುವಕರು, ಯೋಗ ಮಾಡುವ ಹಿರಿಯ ನಾಗರಿಕರು. ಜೆ.ಪಿ.ನಗರದ ಪಂ.ಪುಟ್ಟರಾಜ ಗವಾಯಿ ಕ್ರೀಡಾಂಗಣ ಒಂದಾನೊಂದು ಕಾಲದಲ್ಲಿ ಮೈಸೂರಿನ ಹೆಮ್ಮೆಯ ಕ್ರೀಡಾಂಗಣವಾಗಿತ್ತು. ಆದರೆ ಇಂದು ಇಲ್ಲಿಗೆ ಬರುವ ಪ್ರತಿಯೊಬ್ಬರಿಗೂ ಮೊದಲು ಎದುರಾಗುವ ಸಮಸ್ಯೆ ಒಂದೇ ಶೌಚಾಲಯಕ್ಕೆ ಹೋಗಲು ಆಗುತ್ತಿಲ್ಲ. ನಗರದ ಪ್ರತಿಷ್ಠಿತ ಜೆ.ಪಿ.ನಗರದಲ್ಲಿರುವ ಈ ಕ್ರೀಡಾಂಗಣಕ್ಕೆ ಮಹಾನಗರಪಾಲಿಕೆ, ವಿಧಾನಪರಿಷತ್, ಲೋಕಸಭಾ ಸದಸ್ಯರ ಅನುದಾನದಿಂದ ವಿಶಾಲ ವಾಕಿಂಗ್ ಪಥ, ಈಜುಕೊಳ, ಬಯಲು ರಂಗಮಂದಿರ, ಟೆನ್ನಿಸ್, ಫುಟ್‌ಬಾಲ್ ಅಂಗಣ, ಕ್ರಿಕೆಟ್ ತರಬೇತಿ ಮೈದಾನ ನಿರ್ಮಿಸಲಾಗಿತ್ತು. ನಿತ್ಯ ಒಂದಲ್ಲ ಒಂದು ಕಾರ್ಯಕ್ರಮ, ಭಾನುವಾರ ಕ್ರಿಕೆಟ್ ಪಂದ್ಯಾವಳಿ ಇಲ್ಲಿನ ಸಾಮಾನ್ಯ ದೃಶ್ಯ.ಜೆ.ಪಿ.ನಗರ ಎ, ಬಿ, ಸಿ, ಡಿ, ಇ ಬ್ಲಾಕ್ ಜೊತೆಗೆ ನಾಚನಹಳ್ಳಿಪಾಳ್ಯ, ಕುಪ್ಪಲೂರು, ರಮಾಬಾಯಿ ನಗರ, ಮುನಿಸ್ವಾಮಿ ನಗರ, ಮಹದೇವಪುರದಿಂದಲೂ ನೂರಾರು ಜನ ಇಲ್ಲಿಗೆ ವಾಯುವಿಹಾರಕ್ಕೆ ಬರುತ್ತಾರೆ.

# ಕೆರೆಗಳಿಗೆ ಶೀಘ್ರ ಹೇಮೆ ಹರಿಸಿ : ಗುಬ್ಬಿ ಬಿಜೆಪಿಗರ ಒತ್ತಾಯ

## ಗುಬ್ಬಿ ತಾಲ್ಲೂಕಿನಾದ್ಯಂತ ಎಲ್ಲಾ ಕೆರೆಗಳು ನೀರು ಇಲ್ಲದೆ ಬರಿದಾಗಿ ಕುಡಿಯುವ ನೀರಿಗೂ ತತ್ವಾರ ಎದುರಾಗಿದೆ.

• **ಉದಯವಾಹಿನಿ, ಗುಬ್ಬಿ**

**1** ಹೇಮಾವತಿ ನೀರು ಬರಬೇಕಿತ್ತು

**2** ನೀರಿನ ಹಾಹಾಕಾರ ಬಂದಿದೆ

**3** ಡ್ಯಾಂಗೆ 15 ಸಾವಿರ ಕ್ಯೂಸೆಕ್ಸ್

ತಾಲ್ಲೂಕಿನ ಬಹುತೇಕ ಎಲ್ಲಾ ಕೆರೆಕಟ್ಟೆಗಳು ಬತ್ತಿ ಹೋಗಿ ಜನಜಾನುವಾರು ಸೇರಿದಂತೆ ಪಕ್ಷಿ ಸಂಕುಲಕ್ಕೂ ನೀರು ಸಿಗದ ದುಸ್ಥಿತಿ ಎದುರಾಗಿದೆ. ಸದ್ಯದ ಪರಿಸ್ಥಿತಿ ಹೇಮಾವತಿ ಡ್ಯಾಂಗೆ ಒಳಹರಿವು ಹೆಚ್ಚಿದೆ. ತಮಿಳುನಾಡಿನ ಕಣ್ಣು ಬೀಳುವ ಮುನ್ನ ತುಮಕೂರು ಜಿಲ್ಲೆಯತ್ತ ಕೂಡಲೇ ಹೇಮಾವತಿ ನೀರನ್ನು ನಮ್ಮ ತಾಲ್ಲೂಕಿನ ಎಲ್ಲಾ ಕೆರೆಗಳಿಗೆ ಕೂಡಲೇ ಹರಿಸುವಂತೆ ಒತ್ತಾಯಿಸಿ ಗುಬ್ಬಿ ಮಂಡಲದ ಬಿಜೆಪಿ ಪದಾಧಿಕಾರಿಗಳು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಒತ್ತಾಯಿಸಿದರು.

ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಬಿಜೆಪಿ ಮುಖಂಡ ಎಸ್.ಡಿ.ದಿಲೀಪ್ ಕುಮಾರ್ ಮಾತನಾಡಿ, ಗುಬ್ಬಿ ತಾಲೂಕಿನಾದ್ಯಂತ ಎಲ್ಲಾ ಕೆರೆಗಳು ನೀರು ಇಲ್ಲದೆ ಬರಿದಾಗಿ ಕುಡಿಯುವ ನೀರಿಗೂ ತತ್ವಾರ ಎದುರಾಗಿದೆ. ರೈತರ ಈ ಸಂಕಷ್ಟದ ಪರಿಸ್ಥಿತಿಯಲ್ಲಿ ಜೀವಜಲವಾಗಿದ್ದ ಹೇಮಾವತಿ ನೀರು ಬರಬೇಕಿತ್ತು. ಈ ಬಾರಿ ಜುಲೈ ತಿಂಗಳು ಕಳೆದರೂ ಹೇಮೆ ನಮ್ಮತ್ತ ಹರಿದಿಲ್ಲ. ಮುಂಗಾರು


ಉದಯವಾಹಿನಿ ಚಿತ್ರ

ಕೈ ಕೊಟ್ಟಿದೆ. ಆದರೆ ಕೆಲ ದಿನದಿಂದ ಮಲೆನಾಡು ಭಾಗದಲ್ಲಿ ಮಳೆ ಬೀಳುತ್ತಿದೆ.

ಹೇಮಾವತಿ ಗೊರೂರು ಡ್ಯಾಂಗೆ 15 ಸಾವಿರ ಕ್ಯೂಸೆಕ್ಸ್ ಒಳ ಹರಿವು ಇದೆ. ಜಲಾಶಯ ಬಹುತೇಕ ತುಂಬಿದ ಈ ಸಮಯ ತುಮಕೂರು ಜಿಲ್ಲೆಗೆ ಹರಿಸಬೇಕಾದ ಹಂಚಿಕೆಯ ನೀರು ಹರಿಸಿ ರೈತರ ಹಿತ ಕಾಯಬೇಕು. ಜಿಲ್ಲೆಯ ನೀರಾವರಿ ಬಗ್ಗೆ ಉಸ್ತುವಾರಿ ಸಚಿವರು ಗಮನಹರಿಸಿಲ್ಲ. ನಮ್ಮ ಗುಬ್ಬಿ ಶಾಸಕರು ಸಚಿವ ಸ್ಥಾನ ಲಾಭಿಯಲ್ಲೇ ಕಾಲಹರಣ ಮಾಡುತ್ತಿದ್ದಾರೆ. ಗುಬ್ಬಿ ಪಟ್ಟಣಕ್ಕೆ ನೀರಿನ ಹಾಹಾಕಾರ ಬಂದಿದೆ. ಈ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ನಮ್ಮ ಪಾಲಿನ ನೀರು ತರಲು ಸರ್ಕಾರಕ್ಕೆ ಒತ್ತಡ ತರುವ ಕೆಲಸ ಮಾಡುತ್ತಿಲ್ಲ ಎಂದು ಕಿಡಿಕಾರಿದರು.

ಬಿಜೆಪಿ ತಾಲ್ಲೂಕು ಅಧ್ಯಕ್ಷ ಬಲರಾಮಯ್ಯ ಮಾತನಾಡಿ, ಭಾಜಪ ಮುಖಂಡರು ಮತ್ತು ಪಕ್ಷದ ಪ್ರಮುಖರೆಲ್ಲ ಸೇರಿ ಇಂದು ಹೇಮಾವತಿ ನೀರು ಹರಿಸುವಂತೆ ಒತ್ತಾಯ ಮಾಡುತ್ತಿದ್ದೇವೆ. ಈಗಾಗಲೇ ಗುಬ್ಬಿ ತಾಲ್ಲೂಕು ಬರಗಾಲಕ್ಕೆ ಸಿಲುಕಿ ಕೆರೆಕಟ್ಟೆಗಳು ಬತ್ತಿ ಹೋಗಿದ್ದು ರೈತರು ಪರದಾಡುವ ಸ್ಥಿತಿ ಬಂದೊದಗಿದೆ. ಜಿಲ್ಲೆಗೆ 24 ಟಿಎಂಸಿ ಗುಬ್ಬಿ ತಾಲ್ಲೂಕಿನ 18.5 ಎಂಸಿಎಫ್ ಟಿ ಹೇಮಾವತಿ ನೀರಿನ ಪಾಲನ್ನು ತುರ್ತಾಗಿ ಹರಿಸಬೇಕೆಂದು ಒತ್ತಾಯ ಮಾಡಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಬಿ.ಎಸ್.ಪಂಚಾಕ್ಷರಿ ಮಾತನಾಡಿ, ನೀರಾವರಿ ಮಂತ್ರಿಗಳು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಕೂಡಲೇ ಗಮನಹರಿಸಿ ಜಿಲ್ಲೆಗೆ ಸಿಗಬೇಕಾದ ನೀರಿನ ಪಾಲನ್ನು ಕೊಡಿಸುವ ಕೆಲಸಕ್ಕೆ ಮುಂದಾಗ ಬೇಕಿದೆ. ತಾಲ್ಲೂಕಿನಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಎದುರಿಸುತ್ತಿದ್ದು ನೀರಿನ ಅಭಾವ ತಾಲ್ಲೂಕಿನಾದ್ಯಂತ ತಲೆದೋರಿದ್ದು ಇಂತಹ ದುಸ್ಥಿತಿಯ ಸಂದರ್ಭದಲ್ಲಿ ಗುಬ್ಬಿ ತಾಲ್ಲೂಕನ್ನು ಬರಪೀಡಿತ ತಾಲ್ಲೂಕು ಎಂದು ಸರ್ಕಾರ ಘೋಷಣೆ ಮಾಡುವ ಜೊತೆಗೆ ಬರವನ್ನ ನೀಗಿಸುವ ಕ್ರಮಕ್ಕೆ ಮುಂದಾಗಬೇಕು ಎಂದರು.

**ಉಗ್ರ ಹೋರಾಟ**

**ಇನ್ನೂ ಜಿಲ್ಲಾ ಉಸ್ತುವಾರಿ ಸಚಿವ ಮತ್ತು ಡಿಸಿಎಂ ಜಿ.ಪರಮೇಶ್ವರ್ ಕೇವಲ ಬಿಡದಿ ಟೌನ್ ಶಿಪ್ ವಿಚಾರಕ್ಕೆ ಸೀಮಿತವಾಗಿದ್ದು ನಮ್ಮ ಜಿಲ್ಲೆಯ ರೈತರ ಪರ ನಿಂತು ಕೆರೆಗಳನ್ನು ತುಂಬಿಸುವ ಕೆಲಸದಲ್ಲಿ ವಿಫಲರಾಗಿದ್ದಾರೆ. ಈ ಬಾರಿ ನಮ್ಮ ನೀರು ಹರಿಸದಿದ್ದರೆ ಉಗ್ರ ಹೋರಾಟವನ್ನು ಬಿಜೆಪಿ ರೈತರೊಟ್ಟಿಗೆ ನಡೆಸಲಿದೆ ಎಂದು ಎಚ್ಚರಿಕೆ ನೀಡಿದರು.**

> **ಕಳೆದ ಬಾರಿ ಅಧಿಕಾರಿಗಳ ನಿರ್ಲಕ್ಷ ಮತ್ತು ಗುಬ್ಬಿ ಶಾಸಕ ಬೇಜವಾಬ್ದಾರಿ ತನದಿಂದ ಗುಬ್ಬಿ ತಾಲ್ಲೂಕಿನ ಹಲವು ಕೆರೆಗಳು ಹೇಮಾವತಿ ನೀರಿ ನಿಂದ ತುಂಬಿರಲಿಲ್ಲ. ಆದರೆ ಈ ಬಾರಿ ಬರಗಾಲ ಎದುರಾಗಿದ್ದು ಕೆರೆಕಟ್ಟೆಗಳು ಬತ್ತಿ ಹೋಗಿ ಸಂಕಷ್ಟ ಎದುರಾಗಿದೆ. ಈ ಕೂಡಲೇ ಅಧಿಕಾರಿಗಳು ಮತ್ತು ಶಾಸಕರು ಸಲಹಾ ಸಮಿತಿಯ ಜೊತೆ ಚರ್ಚಿಸಿ ನೀರು ಹರಿಸುವ ಕೆಲಸಕ್ಕೆ ಮುಂದಾಗಬೇಕಿದೆ.-ಮುಖಂಡ ಎಚ್.ಟಿ.ಭೈರಪ್ಪ**

## ಮಿನಿ ನ್ಯೂಸ್

### ಗಾಳಿಪಟ ಹಾರಿಸಿ ಸಂಭ್ರಮಿಸಿದ ಹೈಕೋರ್ಟ್ ನ್ಯಾಯಮೂರ್ತಿ ಶ್ರೀಶಾನಂದ

• **ಉದಯವಾಹಿನಿ, ಮೈಸೂರು**

ಮನುಷ್ಯನ ಜೀವನಕ್ಕೂ ಗಾಳಿಪಟಕ್ಕೂ ಇರುವ ಹೋಲಿಕೆಯನ್ನು ತಿಳಿಸಿ ಉತ್ತಮ ಸಂದೇಶ ನೀಡಿದ ಹೈಕೋರ್ಟ್ ನ್ಯಾಯಮೂರ್ತಿ ಶ್ರೀಶಾನಂದ ಅವರು ಧರ್ಮಪತ್ನಿ ರಜಿನಿ ಅವರೊಂದಿಗೆ ಮಕ್ಕಳ ಜೊತೆ ಗಾಳಿಪಟ ಹಾರಿಸಿ ಸಂಭ್ರಮಿಸಿದರು.ಕಾರ್ಯಕ್ರಮದಲ್ಲಿ ಮಾತನಾಡಿದ ನ್ಯಾಯಮೂರ್ತಿ ಶ್ರೀಶಾನಂದ, ಗಾಳಿಪಟ ಹಾರುವ ರೀತಿಯನ್ನು ಮನುಷ್ಯನ ಜೀವನಕ್ಕೆ ಹೋಲಿಸಿ, ಜೀವನದಲ್ಲಿ ಏಳು-ಬೀಳುಗಳ ನಡುವೆಯೂ ಸ್ಥಿರವಾಗಿ ಮುನ್ನಡೆಯಬೇಕು ಎಂಬ ಸಂದೇಶವನ್ನು ನೀಡಿದರು. ಕಾರ್ಯಕ್ರಮದಲ್ಲಿ ಮೈಸೂರು ನ್ಯಾಯಾಲಯದ ನ್ಯಾಯಮೂರ್ತಿ ಸಂಧ್ಯಾ ಸಾಥ್ ಅವರು ಸಹ ಉಪಸ್ಥಿತರಿದ್ದರು.ನ್ಯಾಯಮೂರ್ತಿ ದಂಪತಿ ಮಕ್ಕಳೊಂದಿಗೆ ಸೇರಿ ವಿವಿಧ ಬಣ್ಣದ ಗಾಳಿಪಟಗಳನ್ನು ಹಾರಿಸಿ ಮಕ್ಕಳೊಂದಿಗೆ ಖುಷಿಯಿಂದ ಸಮಯ ಕಳೆದರು. ಗಾಳಿಪಟ ಹಬ್ಬದಲ್ಲಿ ಭಾಗವಹಿಸಿದ್ದ ನೂರಾರು ಮಕ್ಕಳು ಮತ್ತು ಸಾರ್ವಜನಿಕರು ಸಹ ವಿವಿಧ ಆಕಾರದ ಗಾಳಿಪಟಗಳನ್ನು ಹಾರಿಸಿ ಸಂಭ್ರಮಿಸಿದರು. ಆರ್ಯವೈಶ್ಯ ಅಭಿವೃದ್ಧಿ ಸಮಿತಿ ವತಿಯಿಂದ ಮೈಸೂರು ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಆಯೋಜಿಸಲಾಗಿದ್ದ ''ಗಾಳಿಪಟ ಹಬ್ಬ''ದಲ್ಲಿ ಅವರು ಭಾಗವಹಿಸಿದ್ದರು.

### ಮಲ್ಲಯ್ಯನಪುರದಿಂದ ಪುತ್ತನಪುರ ಸಂಪರ್ಕ ರಸ್ತೆ ಕಾಮಗಾರಿ ಕಳಪೆ ಆರೋಪ : ತನಿಖೆಗೆ ಆಗ್ರಹ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಗುಂಡ್ಲುಪೇಟೆ**

ತಾಲ್ಲೂಕಿನ ಮಲ್ಲಯ್ಯನಪುರ ಗ್ರಾಮದಿಂದ ಪುತ್ತನಪುರ ಗೇಟ್‌ವರೆಗೆ ಪ್ರಗತಿಯಲ್ಲಿರುವ ಸುಮಾರು 1 ಕೋಟಿ ವೆಚ್ಚದ ರಸ್ತೆ ಕಾಮಗಾರಿ ಕಳಪೆ ಗುಣಮಟ್ಟದಿಂದ ನಡೆಯುತ್ತಿದ್ದು, ಸಾರ್ವಜನಿಕರ ತೆರಿಗೆ ಹಣ ಪೋಲಾಗುತ್ತಿದೆ ಎಂದು ತಾಲ್ಲೂಕು ಅಹಿಂದ ಅಧ್ಯಕ್ಷ ಶಶಿಕುಮಾರ್ ಆರೋಪಿಸಿದ್ದಾರೆ.

ಸಾರ್ವಜನಿಕರ ಸಂಚಾರಕ್ಕೆ ಸುಗಮ ಹಾಗೂ ಸುರಕ್ಷಿತ ರಸ್ತೆ ನಿರ್ಮಾಣಕ್ಕಾಗಿ ಸರ್ಕಾರ 1 ಕೋಟಿ ಅನುದಾನ ಮೀಸಲಿಟ್ಟಿದ್ದರೂ, ಗುಣಮಟ್ಟದ ಕಾಮಗಾರಿ ನಡೆಸದೆ ಗುತ್ತಿಗೆದಾರರು ನಿರ್ಲಕ್ಷ್ಯ ತೋರಿದ್ದಾರೆ ಎಂದು ದೂರಿದ್ದಾರೆ. ರಸ್ತೆಯ ಎರಡೂ ಬದಿಯ ಚರಂಡಿ ಕಾಮಗಾರಿಯೂ ಕಳಪೆಯಾಗಿದ್ದು, ಸಂಪೂರ್ಣ ಕಾಮಗಾರಿ ಅವೈಜ್ಞಾನಿಕವಾಗಿ ನಡೆಯುತ್ತಿದೆ ಎಂದು ಆರೋಪಿಸಿರುವ ಶಶಿಕುಮಾರ್, ಇದರಿಂದ ದ್ವಿಚಕ್ರ ವಾಹನ ಸವಾರರು, ಶಾಲಾ ವಿದ್ಯಾರ್ಥಿಗಳು ಹಾಗೂ ಪಾದಚಾರಿಗಳು ನಿತ್ಯ ತೊಂದರೆ ಅನುಭವಿಸುವಂತಾಗಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಕಾಮಗಾರಿಯ ಗುಣಮಟ್ಟವನ್ನ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮವಹಿಸಬೇಕು ಹಾಗೂ ಗುಣಮಟ್ಟದ ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

### ಸರ್ಕಾರಿ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಕೋಲಾರ**

ತಾಲ್ಲೂಕಿನ ವೇಮಗಲ್ ಸರ್ಕಾರಿ ಶಾಲೆಯಲ್ಲಿ ದಿ ಗಿಫ್ಟ್ ಆಫ್ ಟೈಮ್ ಫೌಂಡೇಶನ್ ನಿಂದ ದೀರ್ಘ ಸಾಮಾಜಿಕ ಪರಿಣಾಮ ದಿನವನ್ನು ಆಚರಿಸಿದ್ದು, ಮಕ್ಕಳಿಗೆ ಆರೋಗ್ಯ ತಪಾಸಣೆ ನಡೆಸುವುದರ ಜತೆಗೆ ಹಲ್ಲುಜ್ಜುವ ಬ್ರಷ್‌ಗಳು, ನಾಲಿಗೆ ಕ್ಲೀನರ್, ಔಷಧಿಗಳು ಮತ್ತು ಕೂದಲನ್ನು ಸ್ವಚ್ಛಗೊಳಿಸಲು ಲೈವ್ ರಿಮೂವಲ್ ಕಿಟ್ ಅನ್ನು ಒಳಗೊಂಡಿರುವ ಆರೋಗ್ಯ ಕಿಟ್ ವಿತರಿಸಲಾಯಿತು. ಡಾ. ಅನಿತಾ ಸಾಹು ಅವರ ಮಾರ್ಗದರ್ಶನದಲ್ಲಿ ಅಕ್ಷತಾ ನವೀನ್ ಮತ್ತು ಆರವ್ ಶಾ ನೇತೃತ್ವದ ಹೆಲ್ತ್ ಬಡ್ಡಿ ಉಪಕ್ರಮವು 250 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸಮಗ್ರ ಆರೋಗ್ಯ ಶಿಬಿರವನ್ನು ನಡೆಸಿತು.

ಈ ಯೋಜನೆಯು ಕೋಲಾರದ ವಿದ್ಯಾರ್ಥಿಗಳ ನೈರ್ಮಲ್ಯ, ಸ್ವಚ್ಛತೆ ಮತ್ತು ಸಾಮಾನ್ಯ ಆರೋಗ್ಯವನ್ನು ಉತ್ತೇಜಿಸುವ ಸುಸ್ಥಿರ ಮಾದರಿಯನ್ನು ಕೇಂದ್ರೀಕರಿಸಿತ್ತು. ಹಲವಾರು ಮಕ್ಕಳ ಸ್ವಯಂಸೇವಕರು ಕೋಲಾರದ ಹಲವಾರು ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಸಾಮಾನ್ಯ ತಪಾಸಣೆಗಳನ್ನು ಮಾಡುವಲ್ಲಿ ಚಿಕಿತ್ಸಾಲಯಗಳ ವೈದ್ಯರಿಗೆ ಸಹಾಯ ಮಾಡಿದರು.

ಕಬ್ಬಿಣದ ಕೊರತೆಯ ತಪಾಸಣೆಯೊಂದಿಗೆ ಪ್ರಾರಂಭಿಸಿ, ಈ ವಯಸ್ಸಿನ ಮಕ್ಕಳು ಸಾಮಾನ್ಯವಾಗಿ ಎದುರಿಸುವ ಆರೋಗ್ಯ ಸಮಸ್ಯೆಗಳ ಕುರಿತು ತಪಾಸಣೆ,ಚಿಕಿತ್ಸೆ ನೀಡಲಾಯಿತು. ಪರೀಕ್ಷೆಗಳು ಮತ್ತು ದಂತ ತಿದ್ದುಪಡಿಗಳಿಗೆ ಪ್ರಿಸ್ಕಿಪ್ಷನ್‌ಗಳು ಮತ್ತು ಪರಿಣಾಮ ಬೀರುವ ವಿದ್ಯಾರ್ಥಿಗಳಿಗೆ ಕನ್ನಡಕ ಪ್ರಿಸ್ಕಿಪ್ಷನ್‌ಗಳನ್ನು ನೀಡಲಾಯಿತು.

### ಸೌಲಭ್ಯ ಪಡೆಯಲು ಹೆಳವ ಸಮಾಜ ಒಂದಾಗಲಿ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬಂಗಾರಪೇಟೆ**

ಹೆಳವ ಸಮಾಜ ರಾಜ್ಯದಲ್ಲಿ ಕಡಿಮೆ ಜನಸಂಖ್ಯೆ ಹೊಂದಿದ್ದು ಶೈಕ್ಷಣಿ,ಆರ್ಥಿಕ,ಮತ್ತು ರಾಜಕಯವಾಗಿ ನಮ್ಮ ಸಮಾಜ ಬಂಧುಗಳು ಬಳಯಬೇಕಾದರ ಸಮಾಜದ ಸಂಘಟನೆ ಬಲಿಷ್ಟ ಸಂಘಟನೆಯಾಗಿ ಬಳಯಬೇಕು ಗ್ರಾಮಗಳಲ್ಲಿ ಇರುವ ನಮ್ಮ ಸಮಾಜದ ಬಂದುಗಳು ಒಗ್ಗಟ್ಟಾಗಿ ಸಂಘಟನೆಯನ್ನು ಬಳಸಬೇಕು ಎಂದು ಹೆಳವ ಸಮಾಜ ಜಿಲ್ಲಾದ್ಯಕ್ಷ ಎನ್.ವಿ.ಶ್ರೀನಿವಾಸ್ ಹೇಳಿದರು.

ನಗರದ ಎಸ್.ಎನ್.ರಸಾರ್ಟನಲ್ಲಿ ಅಖಿಲ ಕರ್ನಾಟಕ ಹೆಳವ ಸಮಾಜದ ಜಿಲ್ಲಾ ಘಟಕದ ವತಿಯಿಂದ ಸಮಾಜದ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ 80 ಪ್ರತಿಭಾನ್ವಿತ ಮಕ್ಕಳಿಗ 6ನೇ ವರ್ಷದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ,ನಮ್ಮ ಹೆಳವ ಸಮಾಜದವರು ನಮ್ಮ ಮಕ್ಕಳಿಗ ಉತ್ತಮ ಗುಣಮಟ್ಟದ ವಿದ್ಯಾಭ್ಯಾಸ ನೀಡುವ ಮೂಲಕ ಉನ್ನತ ಮಟ್ಟದ ಅಧಿಕಾರಿಗಳಾಗಿ ರೂಪುಗೊಳ್ಳಬೇಕು.

ಇನ್ನೂ ಕೂಡ ನಮ್ಮ ಸಮಾಜವು ಆರ್ಥಿಕವಾಗಿ,ಶೈಕ್ಷಣಿಕಾವಾಗಿ ತೀರ ಹಿಂದುಳಿದೆ ನಾವು ರಾಜಕೀಯವಾಗಿ ಮುಂದೆ ಬರಬೇಕಾದರ ಮುಂಬರುವ ಸ್ಥಳಿಯ ಮಟ್ಟದ ಚುನಾವಣಗಳಲ್ಲಿ ಸ್ಪರ್ದಿಸಬೇಕು ಎಂದರು. ಇಂದು ನಾವು ನಮ್ಮ ಸಮಾಜದ ಸುಮಾರು 80 ಪತ್ರಿಭಾನ್ವಿತ ಮಕ್ಕಳಿಗ ಸನ್ಮಾನ ಮಾಡುವ ಮೂಲಕ ಸಮಾಜದ ಇತರ ವಿದ್ಯಾರ್ಥಿಗಳಿಗ ಇದು ಪ್ರೇರಣಯಾಗುತ್ತದೆ ಎಂದು ಹೇಳಿದರು.

ಅಂತರಾಳದಿಂದ.. EDITORIAL

# ಕಾವೇರಿ ವಿವಾದದಲ್ಲಿ ರಾಜಕೀಯ ಒಗ್ಗಟ್ಟು: ದೂರದೃಷ್ಟಿಯ ಹೆಜ್ಜೆ



## ರಾಜ್ಯದ ಪ್ರಗತಿ, ಅಭಿವೃದ್ಧಿ, ಜನರ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ಇತರ ವಿಷಯಗಳಲ್ಲಿಯೂ ಮುಂದುವರಿಯಬೇಕು.

ಕಾವೇರಿ ನದಿ ನೀರು ಹಂಚಿಕೆ ಮತ್ತು ಮೇಕೆದಾಟು ವಿವಾದದಂತಹ ಅತ್ಯಂತ ಸಂವೇದನಾಶೀಲ ವಿಷಯದಲ್ಲಿ ರಾಜ್ಯ ಸರಕಾರ ಹಾಗೂ ವಿಪಕ್ಷಗಳು ಪ್ರದರ್ಶಿಸಿರುವ ಅಪರೂಪದ ಒಗ್ಗಟ್ಟು ನಾಡಿನ ಹಿತಾಸಕ್ತಿಯ ನಿಟ್ಟಿನಲ್ಲಿ ಒಂದು ಪ್ರಮುಖ ಮೈಲಿಗಲ್ಲು. ತಮಿಳುನಾಡಿಗೆ ಪ್ರತಿದಿನ 3,500 ಕ್ಯುಸೆಕ್ ನೀರು ಹರಿಸಬೇಕೆಂಬ ಕಾವೇರಿ ನೀರು ನಿರ್ವಹಣ ಪ್ರಾಧಿಕಾರ ಮತ್ತು ನಿಯಂತ್ರಣ ಸಮಿತಿಯ ಆದೇಶದಿಂದ ರಾಜ್ಯಕ್ಕೆ ಎದುರಾದ ಬಿಕ್ಕಟ್ಟನ್ನು ಎದುರಿಸಲು ಈ ಸರ್ವಪಕ್ಷ ಸಭೆ ಬಹಳ ಮಹತ್ವದ್ದಾಗಿತ್ತು. ಅದರಲ್ಲಿ ಒಮ್ಮತ ಮೂಡಿಸಲು ಸಾಧ್ಯವಾದುದು ಸರಕಾರದ ಪಾಲಿಗೆ ಒಂದು ನಿರ್ಣಾಯಕ ಯಶಸ್ಸಾಗಿದೆ.

ಕಾವೇರಿ–ಮೇಕೆದಾಟು ವಿಷಯದಲ್ಲಿ ರಾಜ್ಯದಲ್ಲಿ ಸರಕಾರ, ವಿಪಕ್ಷಗಳು ಅಪರೂಪಕ್ಕೆ ಪ್ರದರ್ಶಿಸಿರುವ ಒಗ್ಗಟ್ಟು ನಿಜಕ್ಕೂ ಮೆಚ್ಚುವಂಥದ್ದು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಅವರು ಕರೆದಿದ್ದ ಸರ್ವಪಕ್ಷ ಸಭೆಯಲ್ಲಿ ವಿಪಕ್ಷದ ನಾಯಕರು ಹಾಗೂ ಮಾಜಿ ಮುಖ್ಯಮಂತ್ರಿಗಳು ಸರಕಾರದ ನಿರ್ಧಾರಕ್ಕೆ ಬೆಂಬಲ ಸೂಚಿಸಿರುವುದು ರಾಜಕೀಯ ಪ್ರಬುದ್ಧತೆಯನ್ನು ತೋರುತ್ತದೆ. ಇದರೊಂದಿಗೆ, ಆಗಸ್ಟ್ 13ರಂದು ಕರೆದಿದ್ದ ಬಂದ್ ಅನ್ನು ಕೈಬಿಡುವಂತೆ ಸಂಘಟನೆಗಳಿಗೆ ಮನವಿ ಮಾಡಿರುವುದು ಜನಪರ ಕಾಳಜಿಯಾಗಿದೆ. ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ತಮಿಳುನಾಡು ಮುಖ್ಯಮಂತ್ರಿಗೆ ಬೆಂಗಳೂರು ಭೇಟಿಯನ್ನು ಮುಂದೂಡುವಂತೆ ಮನವಿ ಮಾಡಿರುವುದು ರಾಜತಾಂತ್ರಿಕ ವಿವೇಚನೆಯ ದ್ಯೋತಕವಾಗಿದೆ. ಕೇವಲ ತಾತ್ಕಾಲಿಕ ನಿರ್ವಹಣೆಗೆ ಸೀಮಿತವಾಗದೆ, ತಮಿಳುನಾಡಿನ ಸಂಕಷ್ಟಸೂತ್ರ'ದ ಬೇಡಿಕೆಯನ್ನು ಕಾನೂನು ಚೌಕಟ್ಟಿನಲ್ಲಿ ಎದುರಿಸಲು ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಕಾನೂನು ತಜ್ಞರ ಸಲಹೆ ಪಡೆಯಲು ನಿರ್ಧರಿಸಲಾಗಿದೆ. ಇವೆಲ್ಲದಕ್ಕೂ ಶಾಶ್ವತ ಪರಿಹಾರವಾಗಿ ಮೇಕೆದಾಟು ಸಮತೋಲನ ಜಲಾಶಯ ಯೋಜನೆಯ ಅನಿವಾರ್ಯವನ್ನು ಕೇಂದ್ರ ಹಾಗೂ ನ್ಯಾಯಾಲಯಕ್ಕೆ ಬಲವಾಗಿ ಮನವರಿಕೆ ಮಾಡಿಕೊಡಲು ನಿರ್ಣಯ ಕೈಗೊಳ್ಳಲಾಗಿದೆ.

> **ವರುಣನ ಕೃಪೆಯಿಂದ ಕಬಿನಿ, ಕೆಆರ್‌ಎಸ್, ಹೇಮಾವತಿ ಹಾಗೂ ಹಾರಂಗಿ ಜಲಾಶಯಗಳಿಗೆ ಒಳಹರಿವು ಹೆಚ್ಚಾಗಿದ್ದರಿಂದ, ಜಲಾಶಯಗಳ ಸುರಕ್ಷೆಯ ದೃಷ್ಟಿಯಿಂದ ಅನಿವಾರ್ಯವಾಗಿ ನೀರು ಹೊರಬಿಡಬೇಕಾದ ಪರಿಸ್ಥಿತಿಯನ್ನು ನಾಯಕರು ಮನಗಂಡಿದ್ದಾರೆ. ಈ ವಿಷಯವನ್ನು ವಿಪಕ್ಷಗಳಿಗೆ ಮನದಟ್ಟು ಮಾಡಿಸುವಲ್ಲಿ ಸರಕಾರ ಯಶಸ್ವಿಯಾಗಿದೆ. ಸರ್ಕಾರವು ಕುಡಿಯುವ ನೀರಿನ ಭದ್ರತೆಗಾಗಿ ಕನಿಷ್ಠ 40 ಟಿಎಂಸಿ ನೀರನ್ನು ಮೀಸಲಿಡುವ ತಂತ್ರವನ್ನು ರೂಪಿಸಿದ್ದು, ರೈತರಿಗೆ ಪೂರ್ಣ ಪ್ರಮಾಣದಲ್ಲಿ ಬೆಳೆಗಳಿಗೆ ನೀರು ಹರಿಸಲಾಗದ ಅಸಹಾಯಕತೆಯನ್ನು ಮುಕ್ತವಾಗಿ ಒಪ್ಪಿಕೊಂಡಿದೆ.**

ಕಾವೇರಿ ವಿಷಯದಲ್ಲಿ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಪಕ್ಷಾತೀತವಾಗಿ ತೋರಿರುವ ಈ ಒಗ್ಗಟ್ಟು ಕೇವಲ ನೀರಿನ ನಿರ್ವಹಣೆಗೆ ಮಾತ್ರ ಸೀಮಿತವಾಗಬಾರದು. ಇದು ಇಲ್ಲಿಗೆ ನಿಲ್ಲದೆ ರಾಜ್ಯದ ಪ್ರಗತಿ, ಅಭಿವೃದ್ಧಿ, ಜನರ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ಇತರ ವಿಷಯಗಳಲ್ಲಿಯೂ ಮುಂದುವರಿಯಬೇಕು. ಸರಕಾರ ಯೋಗ್ಯವಾದ ಮತ್ತು ಸರ್ವಸಮ್ಮತವಾದ ನಿಲುವು, ನಿರ್ಧಾರಗಳನ್ನು ತೆಗೆದುಕೊಂಡು ಸರ್ವಪಕ್ಷಗಳ ಸಹಮತವನ್ನು ಪಡೆದು ಮುನ್ನಡೆಯಬೇಕಾಗಿದೆ. ಆಗ ರಾಜ್ಯದ ಪ್ರಗತಿ, ಅಭಿವೃದ್ಧಿಗೆ ಹೊಸ ಭಾಷ್ಯ ಬರೆಯಲು ಸಾಧ್ಯವಿದೆ. ರಾಜ್ಯದ ಪ್ರಗತಿ ಹಾಗೂ ಅಭಿವೃದ್ಧಿಯ ಇತರ ಪ್ರಮುಖ ವಿಷಯಗಳಲ್ಲೂ ಈ ನಾಯಕರು ಇದೇ ರೀತಿಯ ಸಹಮತವನ್ನು ಕಾಯ್ದುಕೊಂಡರೆ ಮಾತ್ರ ನಾಡು ಸರ್ವಾಂಗೀಣ ವಿಕಾಸದತ್ತ ಮುನ್ನಡೆಯಲು ಸಾಧ್ಯ.




• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಕಲಿಯುಗದಲ್ಲಿ ಕರ್ಮಗಳೆಂಬ ರೋಗಕ್ಕೆ ಸಿಲುಕಿಕೊಂಡು ಕೋಟಲೆಗೊಂಡರೆ ಜನ್ಮವು ವಿಫಲವಾಗುತ್ತದೆ. ನಾಮಸಂಕೀರ್ತನೆಯನ್ನು ಮಾಡುವವರಿಗೆ ಪಾತಕವೆಂಬ ರೋಗವು ಸೋಂಕಲಾರದು, ಜಗತ್ತು ಮುಕ್ತಿಯ ಆಡುಂಬೊಲ ಎನ್ನಿಸುತ್ತದೆ. ಇದನ್ನು ಶಾಸ್ತ್ರಸಮ್ಮತ ಎಂದು ತಿಳಿದು ನೀನು. ಹರುಷದಿಂದ ಇರು ಎಂದು ಹೇಳಿದ ಎಷ್ಟುವು ತಾಮರೌಭವನಿಂದ ಬೀಳ್ಕೊಂಡು ಹೋದ. ಆನಂತರ ಬ್ರಹ್ಮದೇವನು ಈ ಗೋಪ್ಯತರಮಂತ್ರವನ್ನು ಲೋಕಕ್ಕೆ ಉಪದೇಶ ಮಾಡಿದ. ಹೀಗಾಗಿ ರಾಮನಾಮಸ್ಮರಣೆಯು ಕಲಿಯುಗದ ಕಲ್ಪತರು ಕಾಮಧೇನು ಚಿಂತಾಮಣಿ, ಸುಲಭವಾಗಿ ಮುಕ್ತಿಯನ್ನು ನೀಡುವಂತಹುದು, ಸಕಲಸಂಪದಗಳನ್ನು ಪ್ರೀತಿಯಿಂದ ನೀಡುವಂತಹುದು'' ಎಂದು ನಳಿನಾಕ್ಷನು ಉಪದೇಶಿಸಲು ಮರುತಾತ್ಮಜನು ಸಂಭ್ರಮದಿಂದ ಕೂಡಿ ನಿತ್ಯಸುಖಮಯನೆನ್ನಿಸಿ ಹಲವು ಬಗೆಯಿಂದ ಶ್ರೀರಾಮಪುರದರಸನ ಸಂಕೀರ್ತನೆಯನ್ನು ಮಾಡುತ್ತ ಆನಂದದಿಂದ್ದ ಮಂಗಳ ಮಹಾಶ್ರೀ ಇದು ಶ್ರೀರಾಮಚಂದ್ರನ ಪಾದಾರವಿಂದಗಳಿಗೆ ನಮಸ್ಕರಿಸುತ್ತಿರುವ ಪವನನಂದನನಾದ ಹನುಮಂತನ ವರಪ್ರಸಾದವನ್ನು ಹೊಂದಿದವನೂ, ಸರಸ್ವತಿಯ ಸಾಹಿತ್ಯ ಸಾಮ್ರಾಜ್ಯವನ್ನೆಲ್ಲ ಪಡೆದವನೂ, ಚತುರ್ವಿಧ ಕವಿತಾವಿಶಾರದನೂ, ಆತ್ಮನಿಷ್ಠಾಗರಿಷ್ಠನೂ, ಸಂಗೀತಕಲಾವಿದನೂ, ವಿವಿಧ ವಿದ್ವಜ್ಜನರ ಪ್ರೀತಿಪಾತ್ರನೂ ಆದ ಹಂಪೆಯಾಮಾತ್ಯನ ಮಗ ವೆಂಕ ಎಂಬ ಹೆಸರಿನವನಿಂದ ರಚಿತವಾದ ಶ್ರೀಮದ್ರಾಮಾಯಣ ಮಹಾಪ್ರಬಂಧದಲ್ಲಿ ಸುಂದರಕಾಂಡವು ಮುಗಿಯಿತು.

ಅಗಜಾಸುತೆಯೇ ಕೇಳು, ಸೀತೆಯನ್ನು ಕಂಡು ಕುರುಹನ್ನು ಕೊಂಡು ಬಂದ ಮರುತಾತ್ಮಜನನ್ನು ಕಂಡು ರಘುನಾಥನು ಮನ್ನಿಸುತ್ತ ಹತ್ತಿರಕ್ಕೆ ಕರೆದು ರವಿತನೂಜನಿಗೆ ಹೀಗೆಂದ ಸಮುದ್ರವನ್ನು ಹಾರಿ ಯಾರೂ ಹೊಗಲಾರದಂತಹ ಲಂಕಾಪುರವನ್ನು ಹೊಕ್ಕು ಸೊಕ್ಕಿದ ಆರಿಗಳನ್ನು ನಿಗ್ರಹಿಸಿ ಅಲ್ಲಿಂದ ಹೊರಬರುವ ಸಾಮರ್ಥ್ಯದಲ್ಲಿ ಪವನತನೂಜನು ಏಕೈಕವೀರ. ಕಾರ್ಯತತ್ಪರನಾದ ಈತನು ನನ್ನ ಚಿಂತೆಯನ್ನು ಹೋಗಲಾಡಿಸಿ ನಮ್ಮ ವಂಶದ ಮರ್ಯಾದೆಯನ್ನುಳಿಸಿದವನು. ಯಜಮಾನನು ಕಠಿಣ ಕಾರ್ಯವನ್ನು ಹೇಳಲು ಅದನ್ನೊಪ್ಪಿ ಕೈಗೂಡಿಸುವವನು ಪುರುಷೋತ್ತಮ ಪತಿಯು ಹೇಳಿದುದನ್ನು ಒಪ್ಪಿದರೂ ಅದನ್ನು ಮಾಡಲಾರದೆ ಬೇರೊಂದನ್ನು ಮಾಡುವವನು ಮಧ್ಯಮ ತನ್ನ ಹೊಟ್ಟೆಹೊರೆಯುವುದನ್ನು ಮಾತ್ರ ಯೋಚಿಸುತ್ತ ಪತಿಕಾರ್ಯಕ್ಕೆ ಊನ ತರುವವನು ಅಧಮ ಎಂಬುದು ನೀತಿಜ್ಞರ ಅಭಿಪ್ರಾಯ. ಈತನಾದರೋ ಪತಿಕಾರ್ಯವನ್ನು ನೆರವೇರಿಸಿ ತಾನೂ ಕ್ಷೇಮದಿಂದ ವಾಪಸಾಗಿರುವ ಮಹಾಕಪೀಶ'' ಎಂದು ಹೊಗಳಿದ. ಧರಣಿಜಾತೆಯ ಕುರುಹನ್ನು ತಂದಿತ್ತು ನಮ್ಮ ವಂಶವನ್ನು ಕಾಪಾಡಿದ ಹನುಮನಿಗೆ ಏನನ್ನು ತಾನೇ ನೀಡಬಲ್ಲೆ ಎಂದು ಮನಸ್ಸಿನಲ್ಲಿಯೇ ಚಿಂತಿಸಿ ಸರ್ವಾಂಗದಾನವನ್ನೇ ಮರುತಾತ್ಮಜನಿಗೆ ಇತ್ತ ಶ್ರೀರಾಮನು, ಈ ಕಾರ್ಯವನ್ನು ವಾನರಸೈನ್ಯದ ನೆರವಿನಿಂದ ಹೇಗೆ ಪೂರೈಸುವುದು ಎಂದು ಸುಗ್ರೀವನನ್ನು ಕೇಳಿದ. ಅದನ್ನು ಕೇಳಿದ ತರಣಿಸುತನು, ಇದಕ್ಕೆ ಯೋಚನೆ ಮಾಡಬೇಕೇಕೆ ಹನುಮಂತನು ಅಂಬುಧಿಯನ್ನು ಗೋಷ್ಪದವಾಗಿಸಿ ಹಾರಿದನಲ್ಲವೇ ಧೀರನಾದ ಅಂಜನಾಸುತನಲ್ಲದೆ ಬೇರಾರಿಂದ ಈ ಕಾರ್ಯವು ಕೈಗೂಡಲು ಸಾಧ್ಯ? ಎಂದನು. ಅದನ್ನು ಕೇಳಿದ ರಾಘವನು, ಆದರೆ ಪ್ರಮತ್ತನಾದ ರಾವಣನ ಶೌರ್ಯವನ್ನು ಯಾರು ಬಲ್ಲರು? ಹಾಗಾಗಿ ಈ ಕಾರ್ಯವು ಹೇಗೆ ಕೈಗೂಡುವುದು ಎಂಬುದನ್ನು ಕುರಿತು ನನಗೆ ಚಿಂತೆ ಎಂದು ಉತ್ತರವಿತ್ತ.

ಅದನ್ನು ಕೇಳಿದ ಸುಗ್ರೀವನು, ದೇವ, ಚಿಂತೆಯನ್ನು ಬಿಡು, ಮುಂದಾಗಲಿರುವ ಸವಾರ್ಥನಾಶವನ್ನು ಅರಿಯದ ದುರ್ಮತಿಯಾದ ರಾವಣನನ್ನು ಆಶ್ರಯಿಸಿರುವವರು ಅನಿಷ್ಟಜರು. ಕಪಿಬಲವು ನೀರಧಿಯನ್ನು ದಾಟಿ ರಕ್ಕಸರನ್ನು ಸಂಪೂರ್ಣರವಾಗಿ ನಿರ್ನಾಮಗೈದು ಸೀತೆಯನ್ನು ನಿನಗೆ ಒಪ್ಪುಗಿಸುವ ವೀರರು, ಇದರಲ್ಲಿ ಸಂದೇಹವಿಲ್ಲ. ಮರೆಯಾಗಿ ಹೋಗಿರಲಿ, ಮರೆಯಲ್ಲಿರಲಿ, ಅಥವಾ ಯಾವುದೇ ಜಾಗದಲ್ಲಿ ಅಡಗಿಕೊಂಡಿರಲಿ ಓಡಿ ಹೋಗಿ ಆ ವಸ್ತುವಿನ ಬಗ್ಗೆ ಚಿಂತಿಸದೆ, ಅರಸನೇ, ಯುದ್ಧದಲ್ಲಿ ಗೆಲ್ಲಲಾಗದು ಸರ್ವಾಸ್ತ್ರಕೋವಿದರೂ ಸಕಲ ಶಸ್ತ್ರಾರ್ಥಯುತನೂ ಪರಮಪುರುಷನೂ ನರೋಪಮತೆಯಿಂದ ಈ ವಿಧದಲ್ಲಿ ಕಾರ್ಯಸ್ಥಿತಿಯ ಸ್ವರೂಪವಕ್ಕನುಗುಣವಾಗಿ ಸಾಧಿಸಬೇಕು, ಇದು ನೀನರಿಯದುದೇನಲ್ಲ. ಗುಣದಿಂದಲೂ ಪ್ರತಾಪದಿಂದಲೂ ಈ ಕಾರ್ಯವು ಕೈವಶವಾಗುವುದಲ್ಲದೆ, ಸಾಮದಿಂದ ಸಾಧ್ಯವಾಗದು. ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿ ಈ ದಾನವವಿದಾರಣ ಮಾಡುವರು.

ಜೊತೆಗೆ ಲಂಕಾನಗರವು ಯಾವ ರೀತಿಯಿದೆಯೋ ಆ ರೀತಿಯಲ್ಲಿಯೇ ದಾಟಲಾರನೇ? ಎಂದು ಮಾರುತಿಯು ಕಾಲುಗಳಿಗೆರಗಿ ಕೈಮುಗಿದುಕೊಂಡು ಮಧುರವೂ ವಿನಯಯುತವೂ ಆದ ಮಾತುಗಳಿಂದ ನೈರುತ್ಯದ ಆ ನಗರಿಯ ವಿವರವನ್ನು ಅಂಜನಾಸುತನು ವಿನಯದಿಂದ ತಿಳಿಸಿದ.

ಮುಂದುವರೆಯುವುದು



# ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

43

> **ಶಿಕ್ಷಣ ಮನೋವಿಜ್ಞಾನ ಹೇಳುವಂತೆ, ದೃಶ್ಯ-ಶ್ರವಣದ ಸಂಯೋಜನೆ ಕಲಿಕೆಯನ್ನು ದೃಢಗೊಳಿಸುತ್ತದೆ. ಗುಣಮಟ್ಟದ ಆಪ್‌ಗಳಲ್ಲಿನ ಆಯನಿಮೇಷನ್, ಸಂವಾದಾತ್ಮಕ ಕ್ವಿಜ್, ತಕ್ಷಣದ ಪ್ರತಿಕ್ರಿಯೆ ಮತ್ತು ಸ್ವ-ಮೌಲ್ಯಮಾಪನಗಳು ವಿದ್ಯಾರ್ಥಿಯ ಸಕ್ರಿಯ ಭಾಗವಹಿಸುವಿಕೆಯನ್ನು ಹೆಚ್ಚಿಸುತ್ತವೆ. ಇದರಿಂದ ಅಮೂರ್ತ ವಿಷಯವೂ ಸ್ಪಷ್ಟವಾಗುತ್ತದೆ. ತನ್ನದೇ ವೇಗದಲ್ಲಿ ಮರಳಿ ಓದುವ, ತಪ್ಪು ಸರಿಪಡಿಸಿಕೊಳ್ಳುವ ಅವಕಾಶ ಸ್ವತಂತ್ರ ಕಲಿಕೆಯ ಬುನಾದಿ ಹಾಕುತ್ತದೆ.**

## ಆಪ್‌ನೊಳಗಿನ ಅಕ್ಷರಶಾಲೆ




ಇಂದಿನ ವಿದ್ಯಾರ್ಥಿಗೆ ತಂತ್ರಜ್ಞಾನ ಕೇವಲ ಸಾಧನವಲ್ಲ, ಅದು ಸಹ–ಶಿಕ್ಷಕ. ಗಣಿತದ ಪ್ರಮೇಯ, ವಿಜ್ಞಾನದ ಪರಿಕಲ್ಪನೆ, ಭಾಷೆಯ ಅಭ್ಯಾಸ, ಸಾಮಾನ್ಯ ಜ್ಞಾನ – ಎಲ್ಲವೂ ಈಗ ಬೆರಳ ತುದಿಯ ಶೈಕ್ಷಣಿಕ ಆಪ್‌ಗಳಲ್ಲಿ ಲಭ್ಯ. ಆದರೆ ಪ್ರಶ್ನೆ ಬಳಕೆಯಲ್ಲಿದೆ, ಬಳಕೆಯ ಪ್ರಮಾಣದಲ್ಲ. ಸದುಪಯೋಗವೇ ಡಿಜಿಟಲ್ ಯುಗದ ನಿಜವಾದ ಕೌಶಲ.

ಆದರೆ ಇಲ್ಲಿ ಸ್ವಯಂ ನಿಯಂತ್ರಣ ನಿರ್ಣಾಯಕ. ಕಲಿಕೆಯ ಆಪ್ ಮತ್ತು ಕಾಲಕ್ಷೇಪದ ಆಪ್ ನಡುವಿನ ಗೆರೆ ಮಸುಕಾದರೆ ಗಮನ ಚದುರುತ್ತದೆ. ಆದ್ದರಿಂದ ಗುರಿ ಆಧಾರಿತ ಬಳಕೆ ಅಗತ್ಯ. ದಿನಕ್ಕೆ ನಿರ್ದಿಷ್ಟ ಸಮಯ, ನಿರ್ದಿಷ್ಟ ವಿಷಯ, ನೋಟಿಫಿಕೇಷನ್ ರಹಿತ ವಾತಾವರಣ – ಈ ಮೂರ ಶಿಸ್ತು ಇದ್ದಾಗ ಮಾತ್ರ ಆಪ್ ಶಕ್ತಿಯಾಗುತ್ತದೆ. ಹೀಗೆ ಶೈಕ್ಷಣಿಕ ಆಪ್‌ಗಳನ್ನು ಜಾಣ್ಮೆಯಿಂದ ಬಳಸುವ ವಿದ್ಯಾರ್ಥಿಯಲ್ಲಿ ಆತ್ಮಶಿಸ್ತು, ಜವಾಬ್ದಾರಿ ಮತ್ತು ನಿರಂತರ ಕಲಿಯುವ ಮನೋಭಾವ ಬೆಳೆಯುತ್ತದೆ. ಆಪ್ ಕೇವಲ ಪರದೆಯಲ್ಲ. ಅದನ್ನು ಸರಿಯಾಗಿ ಬಳಸಿದಾಗ ಅದು ಅಕ್ಷರಶಾಲೆಯಾಗುತ್ತದೆ.

# ಬೆಳಗ್ಗಿನ ಉಪಾಹಾರ ಸೇವಿಸಿದ ನಂತರವೂ ಹಸಿವಾಗುತ್ತಿದೆಯೇ? ಕಾರಣವೇನು?

ಬೆಳಗ್ಗಿನ ಉಪಹಾರ ಅನ್ನೋದು ಪ್ರತಿಯೊಬ್ಬರಿಗೂ ಅಗತ್ಯವಾಗಿ ಇರುತ್ತದೆ. ಆದರೆ ಕೆಲವರಿಗೆ ಹೊಟ್ಟೆ ತುಂಬಾ ತಿಂದರೂ ಹಸಿವಾದ ಅನುಭವ ಆಗುತ್ತದೆ. ಇದಕ್ಕೆ ಕಾರಣವೇನು? ಎನ್ನುವ ಪ್ರಶ್ನೆ ಹಲವರಲ್ಲಿ ಇರಬಹುದು. ರಕ್ತದಲ್ಲಿನ ಸಕ್ಕರೆಯ ತ್ವರಿತ ಏರಿಳಿತಗಳು, ಅಗತ್ಯವಾದ ಮ್ಯಾಕ್ರೋನ್ಯೂಟ್ರಿಯೆಂಟ್‌ಗಳ ಕೊರತೆ ಅಥವಾ ಕಳಪೆ ನಿದ್ರೆ, ಒತ್ತಡ ಮತ್ತು ನಿರ್ಜಲೀಕರಣದಂತಹ ಜೀವನಶೈಲಿಯೂ ಇದಕ್ಕೆ ಕಾರಣವಾಗಿರಬಹುದು. ನಾವು ಸೇವನೆ ಮಾಡುವ ಆಹಾರದಲ್ಲಿ ಪೋಷಕಾಂಶಗಳು ಇಲ್ಲದೆ ಇದ್ದಾಗ ಈ ರೀತಿ ಸಮಸ್ಯೆ ಕಾಣಿಸಿಕೊಳ್ಳಬಹುದು.


ನಮ್ಮ ದೇಹದಲ್ಲಿ ಹಸಿವನ್ನು ಘ್ರೆಲೊನ್ ಎಂಬ ಹಾರ್ಮೋನು ನಿಯಂತ್ರಣ ಮಾಡಲು ಸಹಕಾರಿ ಯಾಗುತ್ತದೆ. ಹುಟ್ಟೆ ತುಂಬಿದೆ ಎಂಬ ಸಂದೇಶವನ್ನು ಲೆಪ್ಟಿನ್ ಎಂಬ ಹಾರ್ಮೋನ್ ಮೆದುಳಿಗೆ ರವಾನಿಸಲು ಸಹಾಯ ಮಾಡುತ್ತದೆ. ತಿಂದ ಆಹಾರವು ಪ್ರಾಥಮಿಕ ವಾಗಿ ಸಾಕಷ್ಟು ಪ್ರೋಟೀನ್ ಅಥವಾ ಕೊಬ್ಬುಗಳಿಲ್ಲದೆ ಇದ್ದಾಗ ಅಸಮತೋಲನಕ್ಕೆ ಕಾರಣವಾಗಬಹುದು.

ಪ್ರೋಟೀನ್ ದೇಹಕ್ಕೆ ಅತ್ಯಂತ ಸಂತೃಪ್ತಿಕರ ಅಂಶ ಆಗಿದೆ. 20 ರಿಂದ 30 ಗ್ರಾಂ ಪ್ರೋಟೀನ್ ಹೊಂದಿರುವ ಉಪಾಹಾರವು ಹೊಟ್ಟೆ ತುಂಬಿದ ಅನುಭವವನ್ನು ಮಾಡಲಿದ್ದು ಮಧ್ಯಾಹ್ನ ಆಹಾರ ಸೇವನೆಯನ್ನು ಕಡಿಮೆ ಮಾಡುತ್ತದೆ ಎಂದು ಸಂಶೋದನೆ ಹೇಳಿದೆ. ಬೆಣ್ಣೆಯೊಂದಿಗೆ ರೋಸ್ಟ್ ಮಾಡಿದ ಆಹಾರ, ಸರಳ ಹಣ್ಣುಗಳಂತಹ ಕಡಿಮೆ ಪ್ರೋಟೀನ್ ಉಪಾಹಾರವು ವೇಗವಾಗಿ ಜೀರ್ಣವಾಗುತ್ತದೆ. ಇದು ಸ್ವಲ್ಪ ಸಮಯದ ನಂತರ ನಿಮಗೆ ಹಸಿವಾಗುತ್ತದೆ. ನಾರು ನೈಸರ್ಗಿಕ ಜೀರ್ಣಕ್ರಿಯೆಯಲ್ಲಿ ಪ್ರಮುಖವಾಗಿ ಕಾರ್ಯನಿರ್ವಹಿಸುತ್ತದೆ. ನಾರಿನ ಅಂಶವು ನೀರನ್ನು ಹೀರಿಕೊಳ್ಳುತ್ತದೆ ಮತ್ತು ಕರುಳಿನಲ್ಲಿ ಜೆಲ್ ತರಹದ ವಸ್ತುವನ್ನು ರೂಪಿಸುತ್ತದೆ, ಇದು ಹೊಟ್ಟೆ ಖಾಲಿಯಾಗುವುದನ್ನು ತಪ್ಪಿಸುತ್ತದೆ. ಧಾನ್ಯಗಳು, ಹಣ್ಣುಗಳು ಅಥವಾ ಬೀಜಗಳಿಂದ ಸಾಕಷ್ಟು ಫೈಬರ್ ಇದ್ದು ಜೀರ್ಣಕಾರಿ ಸಾಗಣೆ ವೇಗಗೊಳ್ಳುತ್ತದೆ. ನಿದ್ರೆಯ ಕೊರತೆಯಿಂದ ಹಸಿವು ಹೆಚ್ಚಬಹುದು. ಹಾರ್ಮೋನ್ ಹೆಚ್ಚಾಗಿ, ಹೊಟ್ಟೆ ತುಂಬಿದ ಭಾವನೆ ನೀಡುವ 'ಲೆಪ್ಟಿನ್' ಕಡಿಮೆ ಯಾಗುತ್ತದೆ. ಹಾರ್ಮೋನುಗಳ ಬದಲಾವಣೆಗೂ ಕಾರಣವಾಗಲಿದ್ದು ದೇಹಕ್ಕೆ ತೀವ್ರವಾದ ಪರಿಣಾಮ ಬೀರುತ್ತದೆ. ನಸಿಕ ಒತ್ತಡ ಹೆಚ್ಚಾದಾಗ 'ಕಾರ್ಟಿಸೋಲ್' ಹಾರ್ಮೋನ್ ಬಿಡುಗಡೆಯಾಗಿ ಸಿಹಿ ಪದಾರ್ಥಗಳನ್ನು ತಿನ್ನುವ ಬಯಕೆ ಹೆಚ್ಚುತ್ತದೆ.ಕರುಳಿನಿಂದ ಸಂಕೇತಗಳು ಮೆದುಳನ್ನು ತಲುಪಲು ಸುಮಾರು 20 ನಿಮಿಷಗಳು ಬೇಕಾಗುತ್ತದೆ. ಬೆಳಿಗ್ಗೆ ನಿಮ್ಮ ಉಪಾಹಾರವನ್ನು ವೇಗವಾಗಿ ಮಾಡುವುದರಿಂದ ಈ ಮೆದುಳು–ಕರುಳಿನ ಸಂವಹನವು ಅಡ್ಡಿಪಡಿಸುತ್ತದೆ.

ಉಪಾಹಾರವು ರಿಫೈನ್ಡ್ ಕಾರ್ಬೋಹೈಡ್ರೇಟ್ ಗಳನ್ನು ಹೊಂದಿರುತ್ತದೆ, ಅದು ತಕ್ಷಣವೇ ಶಕ್ತಿ ನೀಡಬಹುದು, ಆದರೆ ಅದು ರಕ್ತದ ಸಕ್ಕರೆಯ ದೀರ್ಘಾವಧಿ ಸ್ಥಿರತೆ ನೀಡುವುದಿಲ್ಲ. ಸಕ್ಕರೆಯ ಅಂಶದ ತೀವ್ರ ಹೆಚ್ಚಳ ಮತ್ತು ಕುಸಿತ ಹಸಿವು ಬೇಗನೆ ಮರುಕಳಿಸುವಂತೆ ಮಾಡುತ್ತದೆ. ನಿರಂತರ ಹಸಿವನ್ನು ಪ್ರತ್ಯೇಕವಾಗಿ ನೋಡಬಾರದು.

ಅದು ಅಸಹಜ ಆಯಾಸ, ಹೆಚ್ಚಿನ ಬಾಯಾರಿಕೆ, ಆಗಾಗ್ಗೆ ಮೂತ್ರ ವಿಸರ್ಜನೆ ಅಥವಾ ತೂಕದಲ್ಲಿ ವಿವರಿಸಲಾಗದ ಬದಲಾವಣೆಗಳನ್ನು ತಂದರೆ ಆಗ ವೈದ್ಯರಲ್ಲಿ ಭೇಟಿ ಮಾಡಿ ಚರ್ಚಿಸುವುದು ಸೂಕ್ತ. ಸಣ್ಣ ಬದಲಾವಣೆಗಳು ವ್ಯತ್ಯಾಸವನ್ನು ಸೃಷ್ಟಿಸಬಲ್ಲವು. ಪ್ರೊಟೀನ್ ಮತ್ತು ಫೈಬರ್ ಅಂಶ ಹೆಚ್ಚಾಗಿರುವ ಆಹಾರವು ನಿರಂತರ ಹಸಿವನ್ನು ಕಡಿಮೆ ಮಾಡಿ ಜೀರ್ಣವಾಗುವುದನ್ನು ನಿಧಾನಗೊಳಿಸಿ, ಹೊಟ್ಟೆ ತುಂಬಿಸುತ್ತದೆ ಮತ್ತು ಹೆಚ್ಚು ಸ್ಥಿರವಾದ ರಕ್ತದ ಸಕ್ಕರೆ ಅಂಶಗಳಿಗೆ ಬೆಂಬಲಿಸುತ್ತದೆ.

ಸಮತೋಲನದ ಭೋಜನದಲ್ಲಿ ಪ್ರೊಟೀನ್, ತರಕಾರಿಗಳು, ಬೇಳೆಕಾಳುಗಳು, ಧಾನ್ಯಗಳು ಮತ್ತು ಆರೋಗ್ಯಕರ ಕೊಬ್ಬುಗಳಿದ್ದರೆ ಸುಸ್ಥಿರ ಶಕ್ತಿ ನೀಡುತ್ತವೆ ಮತ್ತು ಹಸಿವನ್ನು ಉತ್ತಮ ನಿಯಂತ್ರಣದಲ್ಲಿ ಇರಿಸುತ್ತವೆ. ಕೆಲವರಿಗೆ ಸರಳವಾದ ರಕ್ತದ ಸಕ್ಕರೆ ಪರೀಕ್ಷೆಯು ಅವರ ಹಸಿವು ಏನನ್ನು ಹೇಳಲು ಪ್ರಯತ್ನಿಸುತ್ತಿದೆ ಎನ್ನುವುದರ ಅರಿವು ಮೂಡಿಸುತ್ತದೆ.



# ಮಳೆಗಾಲದಲ್ಲಿ ಶುಂಠಿ ಚಹಾಗಿಂತ ನಿಂಬೆ ಚಹಾ ಕುಡಿಯಿರಿ

ಸಾಮಾನ್ಯವಾಗಿ ಮಳೆಗಾಲ ತುಂಬಾ ತಂಪಾಗಿರುತ್ತದೆ. ಗಾಳಿ, ಮಣ್ಣಿನ ಸುವಾಸನೆ ನಡುವೆ ಬಿಸಿ–ಬಿಸಿ ಚಹಾ ಕುಡಿಯುವುದರಲ್ಲಿ ಸಿಗುವ ಖುಷಿಯೇ ಬೇರೆ. ಇಂತಹ ಸಮಯದಲ್ಲಿ ಜನ ಹೆಚ್ಚಾಗಿ ಶುಂಠಿ ಟೀ ಕುಡಿಯಲು ಬಯಸುತ್ತಾರೆ. ಆದರೆ ನೀವು ರುಚಿಯ ಜೊತೆಗೆ ನಿಮ್ಮ ಆರೋಗ್ಯದ ಬಗ್ಗೆ ಸಹ ಕಾಳಜಿವಹಿಸಲು ಬಯಸುವುದಾದರೆ ನಿಂಬೆ ಚಹಾ ಕುಡಿಯಲು ನಿಮಗೆ ಅತ್ಯುತ್ತಮ ಆಯ್ಕೆಯಾಗಿದೆ. ಕೊಂಚ ಹುಳಿಯಾದ ರುಚಿ ಮತ್ತು ತಾಜಾತನದಿಂದ ಕೂಡಿರುವ ಚಹಾ ದೇಹವನ್ನು ಬೆಚ್ಚಗಿರಿಸುವುದಲ್ಲದೇ, ಅನೇಕ ಆರೋಗ್ಯ ಪ್ರಯೋಜನಗಳನ್ನು ಸಹ ನೀಡುತ್ತದೆ.

ವಿಶೇಷವಾಗಿ ಮಳೆಗಾಲದಲ್ಲಿ ಸೋಂಕುಗಳು, ಜೀರ್ಣಕಾರಿ ಸಮಸ್ಯೆಗಳು ಹೆಚ್ಚಾಗಿ ಕಾಣಿಸಿಕೊಳ್ಳುವುದರಿಂದ ನಿಂಬೆ ಚಹಾ ದೇಹವನ್ನು ಒಳಗಿನಿಂದ ಬಲಪಡಿಸಲು ಸಹಾಯ ಮಾಡುತ್ತದೆ. ವಿಟಮಿನ್ ಸಿ, ಉತ್ಕರ್ಷಣ ನಿರೋಧಕಗಳು ಮತ್ತು ಬಿಸಿ ಚಹಾದ ಸಂಯೋಜನೆಯು ದೇಹಕ್ಕೆ ಹಲವು ವಿಧಗಳಲ್ಲಿ ಪ್ರಯೋಜನವನ್ನು ನೀಡುತ್ತದೆ. ಆದರೆ, ಇದನ್ನು ಸಮತೋಲಿತ ಪ್ರಮಾಣದಲ್ಲಿ ಕುಡಿಯುವುದು ಉತ್ತಮ. ಇದೇ ನಿಮ್ಮ ಸಮಸ್ಯೆಗೆ ಚಿಕಿತ್ಸೆ ಎಂದು ಪರಿಗಣಿಸಬಾರದು. ಹಾಗಾದ್ರೆ, ಮಳೆಗಾಲದಲ್ಲಿ ನಿಂಬೆ ಚಹಾ ಕುಡಿಯುವುದರಿಂದ ಕೆಲ ಮಂದಿಗೆ ಸಿಗುವ ಪ್ರಯೋಜನಗಳೇನು ಅಂತ ನೋಡೋಣ ಬನ್ನಿ.ಮಳೆಗಾಲದಲ್ಲಿ ವಾತಾವರಣದಲ್ಲಿನ ತೇವಾಂಶವು ಬೇಗನೆ ಹರಡಬಹುದು, ಇದು ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳಿಗೆ ಕಾರಣವಾಗಬಹುದು. ಈ ಸೀಸನ್‌ನಲ್ಲಿ ಅನೇಕ ಮಂದಿ ಶೀತ, ಕೆಮ್ಮು, ಗಂಟಲು ನೋವು ಮತ್ತು ಹೊಟ್ಟೆಯ ಸಮಸ್ಯೆಗಳನ್ನು ಎದುರಿಸುತ್ತಾರೆ. ಇಂತಹ ಸಮಯದಲ್ಲಿ ಬಿಸಿ ನಿಂಬೆ ಚಹಾವು ದೈನಂದಿನ ದಿನಚರಿಯ ಆರೋಗ್ಯಕರ ಭಾಗವಾಗಿದೆ ಮತ್ತು ದೇಹವನ್ನು ವಿಶ್ರಾಂತಿಗೊಳಿಸುವ ಉತ್ತಮ ಮಾರ್ಗವಾಗಿದೆ. ನಿಂಬೆಯನ್ನು ವಿಟಮಿನ್ ಸಿ ಯ ಉತ್ತಮ ಮೂಲವೆಂದು ಪರಿಗಣಿಸಲಾಗುತ್ತದೆ. ವಿಟಮಿನ್ ಸಿ ದೇಹದ ರೋಗನಿರೋಧಕ ಶಕ್ತಿಯನ್ನು ಅತ್ಯುತ್ತಮವಾಗಿಡಲು ಸಹಾಯ ಮಾಡುತ್ತದೆ. ಬಿಸಿ ಚಹಾದೊಂದಿಗೆ ಸೇವಿಸಿದಾಗ ಇದು ದೇಹವನ್ನು ಬೆಚ್ಚಗಿಡಲು ಮತ್ತು ಹೈಡ್ರೀಕರಿಸಲು ಸಹಾಯ ಮಾಡುತ್ತದೆ. ಹವಾಮಾನ ಬದಲಾವಣೆಯ ಸಮಯದಲ್ಲಿ ಈ ಅಭ್ಯಾಸವು ಅನೇಕ ಮಂದಿಗೆ ಪ್ರಯೋಜನಕಾರಿಯಾಗಿದೆ.

# ಅಕ್ಕಿ ತೊಳೆದ ನೀರು ಚೆಲ್ಲುತ್ತೀರಾ? ಅದರಲ್ಲಿದೆ ಈ ಆರೋಗ್ಯದ ಗುಟ್ಟು!



ನಾವು ದಿನ ನಿತ್ಯ ಬಳಸುವ ಅಕ್ಕಿ ತೊಳೆದ ನೀರು ಚೆಲ್ಲುವುದೇ ಹೆಚ್ಚು, ಆದರೆ ಇದರಲ್ಲಿ ಹಲವು ರೀತಿಯ ಆರೋಗ್ಯ ಲಾಭಗಳಿದ್ದು ಸೌಂದರ್ಯ ವರ್ಧಕ ವಾಗಿಯೂ ಬಳಕೆ ಮಾಡಬಹುದು. ಅಕ್ಕಿಯನ್ನು ನೆನೆಸಿ ಅಥವಾ ಕುದಿಸಿದ ನಂತರ ಉಳಿದ ಈ ದ್ರವವು ವಿಟಮಿನ್‌ಗಳು, ಉತ್ಕರ್ಷಣ ನಿರೋಧಕ ಗಳು ಮತ್ತು ಅಮೈನೋ ಆಮ್ಲಗಳ ವಿಶಿಷ್ಟ ಮಿಶ್ರಣವನ್ನು ಹೊಂದಿರುತ್ತದೆ. ವೈಜ್ಞಾನಿಕ ಸಂಶೋಧನೆ ಪ್ರಕಾರ ಇದನ್ನು ಸೇವನೆ ಮಾಡಿದರೆ ಚರ್ಮಕ್ಕೆ ನೈಸರ್ಗಿಕ ಹೊಳಪನ್ನು ನೀಡಬಹುದು. ಅಕ್ಕಿ ನೀರು ನೈಸರ್ಗಿಕ ಪಿಷ್ಟ ಸೆರಾಮೈಡ್‌ಗಳನ್ನು ಹೊಂದಿರುತ್ತದೆ, ಇದು ಚರ್ಮದ ತಡೆಗೋಡೆಯನ್ನು ಬಲಪಡಿಸಲಿದ್ದು ತೇವಾಂಶವನ್ನು ಉಳಿಸಿಕೊಳ್ಳಲು ಹೆಚ್ಚು ಉಪಯೋಗಕಾರಿ ಯಾಗಿದೆ. ಅದೇ ರೀತಿ ಚರ್ಮ ಶುಷ್ಕತೆಯಿಂದ ಇದ್ದಾಗ ನೈಸರ್ಗಿಕ ಹೊಳಪನ್ನು ನೀಡುವಂತೆ ಮಾಡುತ್ತದೆ. ಅಕ್ಕಿಯ ನೀರಿನಲ್ಲಿ 'ಫೆರುಲಿಕ್ ಆಸಿಡ್' ಮತ್ತು 'ಗಾಮಾ–ಓರಿಜನಾಲ್' ನಂತಹ ಆಂಟಿ–ಆಕ್ಸಿಡೆಂಟ್‌ಗಳಿವೆ. ಇವು ಸ್ವತಂತ್ರ ರಾಡಿಕಲ್‌ಗಳನ್ನು ತಟಸ್ಥಗೊಳಿಸಲು ಸಹಾಯ ಮಾಡಲಿದ್ದು ಉತ್ಕರ್ಷಣ ನಿರೋಧಕಗಳು ಜೀವಕೋಶದ ಹಾನಿಯನ್ನು ಸರಿಪಡಿಸುವ ಮೂಲಕ ಚರ್ಮವನ್ನು ರಕ್ಷಿಸಲು ಪ್ರೇರಿಪಿಸುತ್ತದೆ. ಇದರಿಂದ ವಯಸ್ಸು ಆಗುವಿಕೆಯ ಲಕ್ಷಣವನ್ನು ತಡೆಯಬಹುದು. ಮೊಡವೆ, ಕೆಂಪು ಮತ್ತು ಸೂಕ್ಷ್ಮತೆಗೆ ಉರಿಯೂತವು ಸಾಮಾನ್ಯ ಅಂಶವಾಗಿದೆ. ಅಕ್ಕಿ ನೀರಿನಲ್ಲಿ ಅಲಾಂಟೊಯಿನ್ ಮತ್ತು ಉರಿ ಯೂತದ ಸಂಯುಕ್ತಗಳು ಇರುತ್ತವೆ. ಇದು ಚರ್ಮದ ಮಟ್ಟವನ್ನು ನಿಭಾಯಿಸಲು ಮತ್ತು ಚರ್ಮವನ್ನು ಹೈಡ್ರೀಕರಿಸಲು ಸಹಕಾರಿಯಾಗುತ್ತದೆ.

ಅಕ್ಕಿ ನೀರಿನಲ್ಲಿರುವ 'ಅಲಾಂಟೊಯಿನ್' ಎಂಬ ಅಂಶವು ಚರ್ಮದ ಉರಿಯೂತವನ್ನು ತಡೆಗಟ್ಟಲು ಸಹಾಯ ಮಾಡುತ್ತದೆ. ಅಕ್ಕಿ ನೀರು ಕೊಲಾಜಿನ್ ಕೊಳೆಯುವುದನ್ನು ತಡೆದು, ಚರ್ಮದ ಕೋಶಗಳ ಅಭಿವೃದ್ಧಿಗೆ ಸಹಕಾರಿ. ಚರ್ಮದ ಟೋನ್ ಹೆಚ್ಚಾಗಿ ಉರಿಯೂತ ಮತ್ತು ಹೆಚ್ಚುವರಿ ಮೆಲನಿನ್ ಉತ್ಪಾದನೆಗೆ ಸಂಬಂಧಿಸಿದೆ. ಅಕ್ಕಿ ನೀರು ವರ್ಣ ದ್ರವ್ಯದ ಸಂಯುಕ್ತಗಳನ್ನು ಹೊಂದಿರುತ್ತದೆ, ಇದು ಹೆಚ್ಚು ಮೈಬಣ್ಣವನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ. ಗರ್ಭಿಣಿಯರು ಕುಡಿಯುದನ್ನು ತಪ್ಪಿಸಬೇಕು, ಅಕ್ಕಿ ನೀರು ಕಡಿಮೆ ಮಟ್ಟದ ಆರ್ಸೆನಿಕ್ ಮಾನ್ಯತೆಗೆ ಕಾರಣವಾಗಬಹುದು.

ಗರ್ಭಾವಸ್ಥೆಯಲ್ಲಿ ಮಗುವಿನ ಆರೋಗ್ಯಕ್ಕೆ ಒಳ್ಳೆಯದಲ್ಲ. ಶಿಶುಗಳು ಹಾಗೂ ಮಕ್ಕಳ ಜೀರ್ಣಾಂಗ ಹಾಗೂ ಶಾರೀರಿಕ ಬೆಳವಣಿಗೆಯ ಮೇಲೆ ಪರಿಣಾಮ ಬೀರಬಹುದು. ಮಧುಮೇಹ ಅಥವಾ ರಕ್ತದಲ್ಲಿನ ಸಕ್ಕರೆ ಸಮಸ್ಯೆ ಇರುವ ಜನರು ಕುಡಿಯಬಾರದು. ಏಕೆಂದರೆ ಅಕ್ಕಿ ನೀರಿನಲ್ಲಿ ಪಿಷ್ಟ ಹೆಚ್ಚಾಗಿರುತ್ತದೆ. ಅಕ್ಕಿ ನೀರು ಬ್ಲೀಚಿಂಗ್ ಗುಣಗಳನ್ನು ಹೊಂದಿರುವುದರಿಂದ ಅಕ್ಕಿ ನೀರನ್ನು ಬಳಸಿಕೊಂಡು ನಿಮ್ಮ ಮೈಬಣ್ಣವನ್ನು ತಿಳಿಗೊಳಿಸಬಹುದು. ಫೇಶಿಯಲ್ ಟಿಶ್ಯೂ ಅನ್ನು ಅಕ್ಕಿ ನೀರಿನಲ್ಲಿ ಅದ್ದಿ ನಿಮ್ಮ ಮುಖ ಮತ್ತು ಕುತ್ತಿಗೆಗೆ ಹಚ್ಚಿ. ಒಣಗಲು ಬಿಡಿ. ಸುಮಾರು 10 ನಿಮಿಷಗಳ ನಂತರ ಅದನ್ನು ಸ್ವಚ್ಛವಾದ ನೀರಿನಿಂದ ತೊಳೆಯಿರಿ. ಅಕ್ಕಿ ನೀರು ನಿಮ್ಮ ಕೂದಲನ್ನು ಸಹ ರಿಪೇರಿ ಮಾಡುತ್ತದೆ. ಕೂದಲು ಯಾವುದೇ ರೀತಿಯಲ್ಲಿ ಹಾನಿಗೊಳಗಾಗಿದ್ದರೂ ರಕ್ಷಿಸುತ್ತದೆ. ಕೂದಲಿಗೆ ಶಾಂಪೂ ಹಚ್ಚಿದ ನಂತರ ನಿಮ್ಮ ಕೂದಲನ್ನು ತೊಳೆಯಲು ಅಕ್ಕಿ ನೀರನ್ನು ಬಳಸಿ.

ಕೂದಲು ಕಾಂತಿಯುತವಾಗಿ ಮೃದುವಾಗುತ್ತದೆ. ಅಕ್ಕಿ ನೀರು ಬಹಳ ತಂಪು. ಬಿಸಿಲಿನ ಬೇಗೆಯನ್ನು ಶಮನಗೊಳಿಸಲು ಅಕ್ಕಿ ನೀರನ್ನು ಬಳಸಬಹುದು. ಯಾವ ಭಾಗದಲ್ಲಿ ಕಲೆ ಹೆಚ್ಚಾಗಿ ಇರುತ್ತದೆ ಅಲ್ಲಿ ಅಕ್ಕಿ ನೀರುನ್ನು ಹಚ್ಚುವುದರಿಂದ ಬೇಗನೆ ಪರಿಹಾರ ಕಂಡುಕೊಳ್ಳುವಿರಿ. ದದ್ದು ಮತ್ತು ಚರ್ಮದ ಉರಿಯೂತವನ್ನು ಗುಣಪಡಿಸಲು ಅಕ್ಕಿನೀರು ಸಹಾಯ ಮಾಡುತ್ತದೆ.

# ದಿನಕ್ಕೆ 2 ಕಪ್ ಕಾಫಿ ಕುಡಿದರೆ ಆಯಸ್ಸು ಹೆಚ್ಚುತ್ತದೆಯೇ? ಸಂಶೋಧನೆಯಿಂದ ತಿಳಿದುಬಂದ ಅಚ್ಚರಿ ಮಾಹಿತಿ

ಭಾರತ ಸೇರಿದಂತೆ ಜಗತ್ತಿನಾದ್ಯಂತ ಕೋಟ್ಯಂತರ ಜನರು ತಮ್ಮ ದಿನವನ್ನು ಒಂದು ಕಪ್ ಕಾಫಿಯೊಂದಿಗೆ ಆರಂಭಿಸುತ್ತಾರೆ. ಕೆಲವರಿಗೆ ಕಾಫಿ ಕುಡಿಯದೇ ದಿನವೇ ಶುರುವಾಗುವುದಿಲ್ಲ. ಆದರೆ, ಪ್ರತಿದಿನ ಕಾಫಿ ಕುಡಿಯುವುದು ಆರೋಗ್ಯಕ್ಕೆ ಒಳ್ಳೆಯದೇ? ಇದರಿಂದ ನಿಜವಾಗಿಯೂ ಆಯಸ್ಸು ಹೆಚ್ಚುತ್ತದೆಯೇ? ಎಂಬ ಪ್ರಶ್ನೆ ಹಲವರಲ್ಲಿದೆ. ಇದೀಗ ಜರ್ನಲ್‌ನಲ್ಲಿ ಪ್ರಕಟವಾದ ಹೊಸ ಅಧ್ಯಯನವೊಂದು ಈ ಪ್ರಶ್ನೆಗೆ ಕುತೂಹಲಕಾರಿ ಉತ್ತರ ನೀಡಿದೆ. ಅಧ್ಯಯನದ ಪ್ರಕಾರ, ಪ್ರತಿದಿನ ಮಿತ ಪ್ರಮಾಣದಲ್ಲಿ ಕಾಫಿ ಸೇವಿಸುವವರಲ್ಲಿ ದೀರ್ಘಾಯುಷ್ಯದ ಸಾಧ್ಯತೆ ಹೆಚ್ಚಿರಬಹುದು ಎಂಬುದು ಕಂಡುಬಂದಿದೆ. ಆದರೆ, ಕಾಫಿಯೇ ಆಯಸ್ಸು ಹೆಚ್ಚಿಸುತ್ತದೆ ಎಂಬುದಾಗಿ ಅರ್ಥೈಸಬಾರದು ಎಂದು ತಜ್ಞರು ಸ್ಪಷ್ಟಪಡಿಸಿದ್ದಾರೆ. ಹಾಗಾದರೆ ಅಧ್ಯಯನದಲ್ಲಿ ಏನು ಹೇಳಲಾಗಿದೆ. ದಿನಕ್ಕೆ ಎಷ್ಟು ಕಾಫಿ ಕುಡಿಯಬಹುದು ಸೇವನೆ ಮಾಡುವಾಗ ಯಾರು ಎಚ್ಚರ ವಹಿಸಬೇಕು ಎಂಬುದನ್ನು ಸ್ಟೋರಿ ಮೂಲಕ ತಿಳಿದುಕೊಳ್ಳಿ. ಜರ್ನಲ್‌ನಲ್ಲಿ ಪ್ರಕಟವಾದ ಅಧ್ಯಯನದಲ್ಲಿ ಸಾವಿರಾರು ಜನರ ಆರೋಗ್ಯದ ಮಾಹಿತಿಯನ್ನು ಸಂಶೋಧಕರು ವಿಶ್ಲೇಷಿಸಿದ್ದಾರೆ. ಅಧ್ಯಯನದ ಪ್ರಕಾರ, ಪ್ರತಿದಿನ 1 ರಿಂದ 2 ಕಪ್ ಕಾಫಿ ಕುಡಿಯುವವರಲ್ಲಿ ಕಾಫಿ ಸೇವಿಸದವರಿಗಿಂತ ಹೆಚ್ಚು ಕಾಲ ಬದುಕುವ ಸಾಧ್ಯತೆ ಕಂಡುಬಂದಿದೆ. ಜೊತೆಗೆ ಹೃದಯ ಸಂಬಂಧಿತ ಕಾಯಿಲೆಗಳಿಂದ ಸಾವನ್ನಪ್ಪುವ ಅಪಾಯವೂ ತುಸು ಕಡಿಮೆ ಕಂಡುಬಂದಿದೆ. ಸಂಶೋಧಕರ ಅಭಿಪ್ರಾಯದಂತೆ, ಕಾಫಿಯಲ್ಲಿ ಇರುವ ಆಂಟಿಆಕ್ಸಿಡೆಂಟ್‌ಗಳು ಮತ್ತು ಸಸ್ಯ ಮೂಲದ ನೈಸರ್ಗಿಕ ಸಂಯುಕ್ತಗಳು ದೇಹದ ಕೋಶಗಳನ್ನು ಹಾನಿಯಿಂದ ರಕ್ಷಿಸುವುದರ ಜೊತೆಗೆ ಹೃದಯದ ಆರೋಗ್ಯಕ್ಕೂ ನೆರವಾಗಬಹುದು.

ಆದರೆ, ಈ ಅಧ್ಯಯನವು ಸಂಬಂಧವನ್ನುಮಾತ್ರ ತೋರಿಸುತ್ತದೆ. ಕಾಫಿ ಕುಡಿಯುವುದರಿಂದಲೇ ಆಯಸ್ಸು ಹೆಚ್ಚುತ್ತದೆ ಎಂದು ಇದು ಸಾಬೀತುಪಡಿಸುವುದಿಲ್ಲ. ಆರೋಗ್ಯಕರ ಜೀವನಶೈಲಿ, ಸಮತೋಲನ ಆಹಾರ ಮತ್ತು ನಿಯಮಿತ ವ್ಯಾಯಾಮವೂ ದೀರ್ಘಾಯುಷ್ಯದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ಅಧ್ಯಯನದಲ್ಲಿ ಹೆಚ್ಚು ಲಾಭ ಕಂಡುಬಂದವರು ದಿನಕ್ಕೆ 1 ರಿಂದ 2 ಕಪ್ ಕಾಫಿ ಸೇವಿಸಿದವರಾಗಿದ್ದಾರೆ. ಆದರೆ, ಪ್ರತಿಯೊಬ್ಬರ ದೇಹ ವಿಭಿನ್ನವಾಗಿರುವುದರಿಂದ ಕಾಫಿಯ ಪ್ರಮಾಣವು ಈ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ಅಂದರೆ ವಯಸ್ಸು, ಒಟ್ಟಾರೆ ಆರೋಗ್ಯ, ಕ್ಯಾಫೀನ್ ಸಹಿಸುವ ಸಾಮರ್ಥ್ಯ, ಇತರ ಆರೋಗ್ಯ ಸಮಸ್ಯೆಗಳು ಎಲ್ಲವೂ ಇವುಗಳ ಮೇಲೆ ಪ್ರಭಾವ ಬೀರಬಹುದು. ಹಾಗಾಗಿ ಕಾಫಿ ಕುಡಿದ ನಂತರ ಹೃದಯ ಬಡಿತ ಹೆಚ್ಚಾಗುವುದು, ಆತಂಕ, ನಿದ್ರಾಹೀನತೆ ಅಥವಾ ಕೈ ನಡುಗುವಿಕೆ ಕಂಡುಬಂದರೆ ಅದರ ಪ್ರಮಾಣವನ್ನು ಕಡಿಮೆ ಮಾಡುವುದು ಉತ್ತಮ. ದಿನಕ್ಕೆ 3= 4 ಕಪ್‌ಗಿಂತ ಹೆಚ್ಚು ಕಾಫಿ ಸೇವಿಸಬೇಡಿ ರಾತ್ರಿ ಮಲಗುವ ಮುನ್ನ ಕಾಫಿ ಕುಡಿಯುವುದನ್ನು ತಪ್ಪಿಸಿ. ಕಾಫಿಗೆ ಹೆಚ್ಚು ಸಕ್ಕರೆ, ಸಿರಪ್ ಅಥವಾ ವಿಪ್ಪಿಂಗ್ ಕ್ರೀಮ್ ಸೇರಿಸುವುದನ್ನು ಕಡಿಮೆ ಮಾಡಿ. ಖಾಲಿ ಹೊಟ್ಟೆಯಲ್ಲಿ ಹೆಚ್ಚು ಕಾಫಿ ಕುಡಿಯುವುದರಿಂದ ಕೆಲವರಿಗೆ ಅಸಿಡಿಟಿ ಉಂಟಾಗಬಹುದು. ಸಾಕಷ್ಟು ನೀರು ಕುಡಿಯುವುದನ್ನು ಮರೆಯಬೇಡಿ. ಈ ಲೇಖನವು ಆರೋಗ್ಯ ಜಾಗೃತಿಗಾಗಿ ಮಾತ್ರ. ನಿಮ್ಮ ಆರೋಗ್ಯ ಸ್ಥಿತಿಗೆ ಅನುಗುಣವಾಗಿ ವೈದ್ಯರು ಅಥವಾ ಪೌಷ್ಟಿಕ ತಜ್ಞರ ಸಲಹೆಯಂತೆ ಆಹಾರ ಪದ್ಧತಿಯನ್ನು ಅನುಸರಿಸಿ.

ಒಂದು ದಶಕದಿಂದ ಈ ಪ್ರಮಾಣದಲ್ಲಿ ಸ್ಥಿರವಾಗಿ ಭಾಗವಹಿಸಿದ ಭಾಗವಹಿಸುವವರು ಕಡಿಮೆ ಅಥವಾ ಕೆಫೀನ್ ಸೇವಿಸದವರಿಗೆ ಹೋಲಿಸಿದರೆ ಬುದ್ಧಿಮಾಂದ್ಯತೆಯ ಬೆಳವಣಿಗೆಯ ಅಪಾಯ ಕಡಿಮೆ ಎಂದು ಅದು ಬಹಿರಂಗಪಡಿಸಿತು. ರಾಷ್ಟ್ರೀಯ ಆರೋಗ್ಯ ಸಂಸ್ಥೆಗಳಿಂದ ಧನಸಹಾಯ ಪಡೆದ ಅಧ್ಯಯನವು, ಆಲ್ಝೈಮರ್ ಮತ್ತು ಇತರ ಬುದ್ಧಿಮಾಂದ್ಯತೆಗಳಿಗೆ ಆನುವಂಶಿಕ ಅಪಾಯವಿರುವ ಜನರಲ್ಲಿಯೂ ಸಹ ಕೆಫೀನ್ ಸಂಪರ್ಕವು ನಿಜವಾಗಿದೆ ಎಂದು ಹೇಳಿದೆ. ಸಂಶೋಧನೆಯು ಒಬ್ಬ ವ್ಯಕ್ತಿಯು ಬಳಲುತ್ತಿರುವ ವಿವಿಧ ರೀತಿಯ ಬುದ್ಧಿಮಾಂದ್ಯತೆಯನ್ನು ಪ್ರತ್ಯೇಕಿಸಲಿಲ್ಲವಾದರೂ. ಹೊಸ ಅಧ್ಯಯನವು ಎರಡು ಗುಂಪುಗಳಲ್ಲಿ ಭಾಗವಹಿಸುವವರನ್ನು ಅನುಸರಿಸಿತು – ದಾದಿಯರ ಆರೋಗ್ಯ ಅಧ್ಯಯನದಲ್ಲಿ ಮಹಿಳೆಯರು ಮತ್ತು ಆರೋಗ್ಯ ವೃತ್ತಿಪರರ ಅನುಸರಣಾ ಅಧ್ಯಯನದಲ್ಲಿ ಪುರುಷರು. ಈ ಜನರು ಆರಂಭದಲ್ಲಿ 40 ರ ದಶಕದ ಮಧ್ಯದಲ್ಲಿ ಅಥವಾ 50 ರ ದಶಕದ ಆರಂಭದಲ್ಲಿದ್ದರು. ಭಾಗವಹಿಸುವವರ ಆರೋಗ್ಯ, ಆಹಾರ ಪದ್ಧತಿ ಮತ್ತು ಜೀವನಶೈಲಿ ಅಂಶಗಳ ಬಗ್ಗೆ ಸಮೀಕ್ಷೆ ನಡೆಸಲಾಯಿತು.



# ಕೈ ತೊಳೆಯುವ ಸರಿಯಾದ ವಿಧಾನ ಸೋಂಕು ತಡೆಯಲು ಈ ನಿಯಮಗಳನ್ನು ಪಾಲಿಸಿ



ದಿನನಿತ್ಯದ ಜೀವನದಲ್ಲಿ ಕೈಗಳು ಅತ್ಯಂತ ಹೆಚ್ಚು ಬಳಸುವ ದೇಹದ ಭಾಗಗಳಲ್ಲಿ ಒಂದಾಗಿದೆ. ಮೊಬೈಲ್ ಫೋನ್ ಬಳಸುವುದು, ಹಣದ ವ್ಯವಹಾರ ಮಾಡುವುದು, ಬಾಗಿಲಿನ ಹ್ಯಾಂಡಲ್ ಹಿಡಿಯುವುದು, ಸಾರ್ವಜನಿಕ ಸ್ಥಳಗಳಲ್ಲಿರುವ ವಸ್ತುಗಳನ್ನು ಸ್ಪರ್ಶಿಸುವುದು ಸೇರಿದಂತೆ ಅನೇಕ ಸಂದರ್ಭಗಳಲ್ಲಿ ಕೈಗಳು ವಿವಿಧ ಮೇಲ್ಮೈಗಳ ಸಂಪರ್ಕಕ್ಕೆ ಬರುತ್ತವೆ. ಈ ವೇಳೆ ಬ್ಯಾಕ್ಟೀರಿಯಾ, ವೈರಸ್ ಹಾಗೂ ಇತರ ಸೂಕ್ಷ್ಮಜೀವಿಗಳು ಕೈಗಳಿಗೆ ಅಂಟಿಕೊಳ್ಳುವ ಸಾಧ್ಯತೆ ಹೆಚ್ಚು. ಈ ಕಲುಷಿತ ಕೈಗಳಿಂದ ಕಣ್ಣು, ಮೂಗು ಅಥವಾ ಬಾಯಿಯನ್ನು ಮುಟ್ಟಿದರೆ ಅಥವಾ ಕೈ ತೊಳೆಯದೇ ಆಹಾರ ಸೇವಿಸಿದರೆ, ಈ ಸೂಕ್ಷ್ಮಜೀವಿಗಳು ದೇಹದೊಳಗೆ ಪ್ರವೇಶಿಸಿ ಶೀತ, ಜ್ವರ, ಫ್ಲೂ, ಅತಿಸಾರ (ಡಯೇರಿಯಾ), ಹೊಟ್ಟೆಯ ಸೋಂಕು ಸೇರಿದಂತೆ ಹಲವು ಸಾಂಕ್ರಾಮಿಕ ರೋಗಗಳ ಅಪಾಯವನ್ನು ಹೆಚ್ಚಿಸಬಹುದು. ಆದ್ದರಿಂದ ಕೈಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಅತ್ಯಂತ ಅಗತ್ಯ ಎಂದು ಆರೋಗ್ಯ ತಜ್ಞರು ಸಲಹೆ ನೀಡುತ್ತಾರೆ. ಸಾಮಾನ್ಯವಾಗಿ ಕೈ ತೊಳೆಯುವುದು ಸಣ್ಣ ಅಭ್ಯಾಸವೆನಿಸಿದರೂ, ಇದು ಆರೋಗ್ಯದ ಮೇಲೆ ದೊಡ್ಡ ಪರಿಣಾಮ ಬೀರುತ್ತದೆ. ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಅಮೆರಿಕದ ಸೆಂಟರ್ಸ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆನ್ಷನ್ ಪ್ರಕಾರ, ಸರಿಯಾದ ರೀತಿಯಲ್ಲಿ ಕೈ ತೊಳೆಯುವುದರಿಂದ ಅನೇಕ ಸಾಂಕ್ರಾಮಿಕ ರೋಗಗಳ ಹರಡುವಿಕೆಯನ್ನು ತಡೆಯಬಹುದು. ವಿಶೇಷವಾಗಿ ಮಕ್ಕಳಲ್ಲಿ, ವೃದ್ಧರಲ್ಲಿ ಮತ್ತು ರೋಗನಿರೋಧಕ ಶಕ್ತಿ ಕಡಿಮೆ ಇರುವವರಲ್ಲಿ ಕೈಗಳ ಸ್ವಚ್ಛತೆ ಜೀವ ರಕ್ಷಕ ಅಭ್ಯಾಸವಾಗಬಹುದು. ಸಾಮಾನ್ಯವಾಗಿ ಸಾಬೂನು ಮತ್ತು ನೀರು ಲಭ್ಯವಿಲ್ಲದಿದ್ದರೆ ಕನಿಷ್ಠ 60% ಆಲ್ಕೋಹಾಲ್ ಹೊಂದಿರುವ ಹ್ಯಾಂಡ್ ಸ್ಯಾನಿಟೈಸರ್ ಬಳಸಬಹುದು. ಆದರೆ ಕೈಗಳ ಮೇಲೆ ಗೋಚರಿಸುವ ಮಣ್ಣು, ಎಣ್ಣೆ ಅಥವಾ ಕೊಳಕು ಇದ್ದರೆ ಸ್ಯಾನಿಟೈಸರ್ ಸಾಕಾಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಸಾಬೂನು ಮತ್ತು ನೀರಿನಿಂದ ಕೈ ತೊಳೆಯುವುದೇ ಅತ್ಯುತ್ತಮ ವಿಧಾನ. ಈ ಸಂದರ್ಭಗಳಲ್ಲಿ ಕೈ ತೊಳೆಯುವುದು ಕಡ್ಡಾಯ ಶಾಲೆಗೆ ಹೋಗುವ ಮಕ್ಕಳು ಆಟದ ಮೈದಾನ, ತರಗತಿ ಕೊಠಡಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚು ಸಮಯ ಕಳೆಯುವುದರಿಂದ ಅವರಿಗೆ ಸೋಂಕು ತಗುಲುವ ಸಾಧ್ಯತೆ ಹೆಚ್ಚಿರುತ್ತದೆ. ಚಿಕ್ಕ ವಯಸ್ಸಿನಿಂದಲೇ ಸರಿಯಾದ ಕೈ ತೊಳೆಯುವ ಅಭ್ಯಾಸ ಬೆಳೆಸಿದರೆ, ಶೀತ, ಜ್ವರ, ಹೊಟ್ಟೆ ಸೋಂಕು ಮತ್ತು ಇತರ ಸಾಂಕ್ರಾಮಿಕ ರೋಗಗಳನ್ನು ತಡೆಯಲು ಸಹಾಯವಾಗುತ್ತದೆ.

# ಉಕ್ಕಿ ಹರಿಯುತ್ತಿರುವ ತುಂಗಭದ್ರಾ ನದಿ: ಉಕ್ಕಡಗಾತ್ರಿ ದೇವಸ್ಥಾನಕ್ಕೆ ಜಲದಿಗ್ಬಂಧನ

### ತುಂಗಭದ್ರಾ ನದಿ ಉಕ್ಕಿ ಹರಿಯುತ್ತಿರುವುದರಿಂದ ಹರಿಹರ ತಾಲ್ಲೂಕಿನ ಉಕ್ಕಡಗಾತ್ರಿ ಕರಿಬಸವೇಶ್ವರ ದೇವಸ್ಥಾನಕ್ಕೆ ಜಲದಿಗ್ಬಂಧನ ಎದುರಾಗಿದೆ.

• **ಉದಯವಾಹಿನಿ, ದಾವಣಗೆರೆ:**

ಚಿಕ್ಕಮಗಳೂರು, ಶಿವಮೊಗ್ಗ ಭಾಗದಲ್ಲಿ ಭಾರಿ ಮಳೆಯಾಗುತ್ತಿದ್ದು, ತುಂಗಭದ್ರಾ ನದಿ ಮೈದುಂಬಿ ಹರಿಯುತ್ತಿದೆ.ತುಂಗಾ ಅಣೆಕಟ್ಟೆಯಿಂದ ಅಪಾರ ಪ್ರಮಾಣದ ನೀರು ಹರಿಬಿಡಲಾಗಿದೆ. ದಾವಣಗೆರೆ ಜಿಲ್ಲೆಯ ಹರಿಹರ, ಹೊನ್ನಾಳಿ, ನ್ಯಾಮತಿ ಭಾಗದಲ್ಲಿ ಹರಿಯುವ ತುಂಗಭದ್ರಾ ನದಿಯಲ್ಲಿ ನೀರು ಹೆಚ್ಚಾಗಿದ್ದು, ರೈತರ ಜಮೀನುಗಳಿಗೆ ನೀರು

**1 : ನುಗ್ಗಿದ ನದಿ ನೀರು, ಬೆಳೆ ಹಾನಿ**
**2 : ಉಕ್ಕಡಗಾತ್ರಿ, ಸೇತುವೆ ಜಲಾವೃತ**
**3 : ನೀರಿನಲ್ಲೇ ತರುವ ದೃಶ್ಯಗಳು**

ನುಗ್ಗಿ ಅವಾಂತರ ಸೃಷ್ಟಿಯಾಗಿದೆ.ಜಿಲ್ಲೆಯ ಹರಿಹರ ತಾಲ್ಲೂಕಿನ ಧಾರ್ಮಿಕ ಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪ್ರವಾಹ ಸೃಷ್ಟಿಯಾಗಿದ್ದು, ಕರಿಬಸವೇಶ್ವರ ದೇವಸ್ಥಾನ ಜಲದಿಗ್ಬಂಧನದಲ್ಲಿದೆ. ತುಂಗಭದ್ರಾ ನದಿ ಉಕ್ಕಿ ಹರಿಯುತ್ತಿರುವುದರಿಂದ ಉಕ್ಕಡಗಾತ್ರಿ ಕ್ಷೇತ್ರದ ಕೆಲವು ಭಾಗ ಮುಳುಗಡೆಯಾಗಿದೆ. ನದಿ ದಂಡೆಯಲ್ಲಿದ್ದ ಗಣೇಶನ ದೇವಾಲಯ ಮುಳುಗಿದೆ. ನದಿ ಪಾತ್ರಕ್ಕೆ ಭಕ್ತರು ತೆರಳದಂತೆ ದೇವಸ್ಥಾನದ ಆಡಳಿತ ಮಂಡಳಿ ಸೂಚನಾ ಫಲಕ ಅಳವಡಿಸಿದೆ. ಸದ್ಯ ತುಂಗಭದ್ರಾ ನದಿಗೆ ತುಂಗಾ ಅಣೆಕಟ್ಟೆಯಿಂದ 90 ಸಾವಿರದಿಂದ 1 ಲಕ್ಷ ಕ್ಯೂಸೆಕ್ ನೀರು ಬಿಡಲಾಗಿದೆ.

ಹರಿಹರ, ನ್ಯಾಮತಿ, ಹೊನ್ನಾಳಿ ಭಾಗದ ಜಮೀನಿಗೆ ನದಿ ನೀರು ನುಗ್ಗಿದೆ. ಹರಿಹರ ತಾಲ್ಲೂಕಿನ ಉಕ್ಕಡಗಾತ್ರಿ, ಫತ್ತೆಪುರ ಭಾಗದಲ್ಲಿ ಭತ್ತ, ಸೊಪ್ಪು, ಮೂಲಂಗಿ, ತೆಂಗು, ಅಡಿಕೆ ನೀರಿನಲ್ಲಿ ಮುಳುಗಿವೆ. ತರಕಾರಿಗಳನ್ನು ರೈತರು ಸೊಂಟದ ತನಕ ಇರುವ ನೀರಿನಲ್ಲೇ ಹೊತ್ತು ತರುವ ದೃಶ್ಯಗಳು ಮೊಬೈಲ್ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಪ್ರವಾಹ ಬಂದಿರುವುದು ತಿಳಿದ ರೈತರು ತಮ್ಮ ಜಮೀನುಗಳಿಗೆ ತೆರಳಿ ಫಸಲು ಹೊತ್ತು ತಂದಿದ್ದಾರೆ.

ತುಂಗಾ ಜಲಾಶಯದಿಂದ ಭಾರಿ ಪ್ರಮಾಣದಲ್ಲಿ ನೀರು ಹೊರಬಿಟ್ಟಿರುವ ಪರಿಣಾಮ ತುಂಗಭದ್ರಾ ನದಿ ಉಕ್ಕಿ ಹರಿಯುತ್ತಿದ್ದು, ಹರಿಹರ ತಾಲ್ಲೂಕಿನ ನಂದಿಗುಡಿ ಕಡೆಯಿಂದ ಉಕ್ಕಡಗಾತ್ರಿಗೆ ಸಂಪರ್ಕಿಸುವ ಸೇತುವೆ ಸಂಪೂರ್ಣವಾಗಿ ಮುಳುಗಡೆಯಾಗಿದೆ. ಫತ್ತೇಪುರ್ ಉಕ್ಕಡಗಾತ್ರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಹಾಗೂ ಸೇತುವೆ ಕೂಡ ನೀರಿನಿಂದ ಜಲಾವೃತಗೊಂಡಿದೆ. ಹೀಗಾಗಿ, ಉಕ್ಕಡಗಾತ್ರಿ ಕ್ಷೇತ್ರಕ್ಕೆ ಬರುವ ಭಕ್ತರು 10 ಕಿ.ಮೀ ಕ್ರಮಿಸಿ ಸುತ್ತುಹಾಕಿಕೊಂಡು ಬರುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ರೈತರು ಮತ್ತು ಜನರು ತೆಪ್ಪದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ತಲುಪುತ್ತಿದ್ದಾರೆ. ರೈತ ಅಜ್ಜಪ್ಪ ಮಾತನಾಡಿ, ಪ್ರವಾಹ ಬಂದಿರುವ ಕಾರಣ ರಸ್ತೆ, ಸೇತುವೆ, ಜಮೀನು ಜಲಾವೃತವಾಗಿದೆ. ಫತ್ತೆಪುರ-ಉಕ್ಕಡಗಾತ್ರಿ ರಸ್ತೆ ಸೇತುವೆ ಮುಳುಗಡೆಯಾಗಿದೆ. ಪ್ರತಿ ಬಾರಿ ಇದೇ ಸಮಸ್ಯೆ ಆಗ್ತಿದ್ದು, ಅಧಿಕಾರಿಗಳ ಗಮನಕ್ಕೆ ತಂದು ಸಾಕಾಗಿದೆ. ಜಮೀನುಗಳು ಮುಳುಗಿವೆ. ಭತ್ತದ ಗದ್ದಗೆ ನೀರು ನುಗ್ಗಿದೆ. ಭತ್ತದ ಸಸಿಗಳು ನೀರಿನಲ್ಲಿ ತೇಲಿಕೊಂಡು ಬರುತ್ತಿವೆ. ನಮ್ಮ ಮೋಟರ್‌ಗಳು ನೀರಿನಲ್ಲಿ ಮುಳುಗಿವೆ. ನೀರು ಸದ್ಯ ಮೂರ್ನಾಲ್ಕು ಅಡಿ ಇದೆ. ಸಮಸ್ಯೆ ಆಗ್ತಿದೆ. ಸಿಸಿ ರಸ್ತೆ ಮಾಡಿದ್ದಾರೆ. ಸೇತುವೆ ಒಂದನ್ನು ಎತ್ತರ ಮಾಡಿದ್ರೇ ಸಾಕು ಸಮಸ್ಯೆ ದೂರವಗಲಿದೆ ಎಂದು ತಿಳಿಸಿದರು.



ಉದಯವಾಹಿನಿ ಚಿತ್ರ

> ಕೆಲ ತರಕಾರಿ ಬೆಳೆದಿದ್ದರು. ತಕ್ಕಮಟ್ಟಿಗೆ ರೈತರಿಗೆ ಸಮಸ್ಯೆ ಆಗಿದೆ. ಕಳೆದ ದಿನ ಬೆಳಗ್ಗೆ ಒಂದು ಲಕ್ಷ ಕ್ಯೂಸೆಕ್ ನೀರು ನದಿಗೆ ಬಿಡಲಾಗಿತ್ತು. ಮಧ್ಯಾಹ್ನ 44 ಸಾವಿರಕ್ಕೆ ಬಂತು. ಇದೀಗ ನದಿಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದೆ ಎಂದು ತಿಳಿಸಿದರು.-ತಹಶೀಲ್ದಾರ್ ಸಂತೋಷ್ ಕುಮಾರ್

> ಭಕ್ತರು ನದಿಪಾತ್ರಕ್ಕೆ ಬರಬಾರದು ಎಂದು ಅನೌನ್ಸ್ ಮಾಡಲಾಗುತ್ತಿದೆ. ಗೇಟ್‌ಗಳನ್ನು ಅಳವಡಿಸಲಾಗಿದೆ. ಅಲ್ಲದೆ ಭಕ್ತರು ನದಿ ಬಳಿ ತೆರಳದಂತೆ ಕಾಯಲು ದೇವಾಲಯದ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ. ಎಷ್ಟೇ ನೀರು ಬಂದ್ರು, ಯಾರಿಗು ಏನೇ ತೊಂದರೆಯಾಗಿಲ್ಲ ಎಂದು ಹೇಳಿದರು.-ಸ್ಥಳೀಯ ಹನುಮಂತಪ್ಪ

> ಜನರು ನದಿ ಪಾತ್ರಕ್ಕೆ ತೆಳದಂತೆ ಹರಿಹರ ನಗರಸಭೆ ಹಾಗೂ ಉಕ್ಕಡಗಾತ್ರಿ, ಗ್ರಾಮ ಪಂಚಾಯಿತಿಯಿಂದ ಅನೌನ್ಸ್ ಮಾಡಿಸಲಾಗಿದೆ. ಉಕ್ಕಡಗಾತ್ರಿ ಭಾಗದಲ್ಲಿ ಜಮೀನುಗಳಿಗೆ ನೀರು ನುಗ್ಗಿದೆ. ರೈತರು ಭತ್ತವನ್ನು ನಾಟಿ ಮಾಡಿದ್ದರು.

> ಕರಿಬಸವೇಶ್ವರ ಅಜ್ಜನ ದರ್ಶನಕ್ಕೆ ಏನು ಸಮಸ್ಯೆ ಇಲ್ಲ. ಸ್ನಾನಘಟ್ಟ, ಜವಳಘಟ್ಟ ಮುಳುಗಡೆಯಾಗಿದೆ. ದೂರದಲ್ಲಿ ಕೂತು ಭಕ್ತರು ಸ್ನಾನ ಮಾಡಬೇಕು. ಕ್ಷೇತ್ರದಲ್ಲಿರುವ 25-30 ಅಂಗಡಿ ಮುಳುಗಿವೆ. ನೀರು ಬರುವ ಮುನ್ನ ಅಂಗಡಿಯವರಿಗೆ ತಿಳಿಸಲಾಗುತ್ತದೆ. ಅ ಕಾರಣ ಏನು ಸಮಸ್ಯೆ ಆಗಿಲ್ಲ.

## ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪೋಷಕರ ಸಕ್ರಿಯ ಪಾತ್ರ ಅಗತ್ಯ: ಲಾಲಸಾಬ್ ಉಸ್ತಾದ್

• **ಉದಯವಾಹಿನಿ, ಹುಣಶ್ಯಾಳ (ಸಿಂದಗಿ):**

ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಕೇವಲ ಶಾಲೆಯ ಶಿಕ್ಷಣವಷ್ಟೇ ಸಾಲದು; ಪೋಷಕರ ಸಕ್ರಿಯ ಪಾತ್ರ ಹಾಗೂ ಸೂಕ್ತ ಮಾರ್ಗದರ್ಶನವೂ ಅತ್ಯಗತ್ಯ ಎಂದು ಸಿಂದಗಿ ತಾಲ್ಲೂಕಿನ ಹುಣಶ್ಯಾಳ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರಾದ ಶ್ರೀ ಲಾಲಸಾಬ್ ಉಸ್ತಾದ್ ಅಭಿಪ್ರಾಯಪಟ್ಟಿದ್ದಾರೆ.ಕರ್ನಾಟಕ ಸರ್ಕಾರದ ಶಾಲಾ ಶಿಕ್ಷಣ ಇಲಾಖೆಯ ಸಿಂದಗಿ ತಾಲ್ಲೂಕಿನ ಹುಣಶ್ಯಾಳ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅತ್ಯಂತ ಯಶಸ್ವಿಯಾಗಿ ಆಯೋಜಿಸಲಾಗಿದ್ದ ಪೋಷಕರು ಮತ್ತು ಶಿಕ್ಷಕರ ಸಭೆಯಲ್ಲಿ ಮುಖ್ಯ ಭಾಷಣಕಾರರಾಗಿ ಭಾಗವಹಿಸಿ ಅವರು ಮಾತನಾಡಿದರು.ತಮ್ಮ ಸುದೀರ್ಘ ಭಾಷಣದಲ್ಲಿ, ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಪೋಷಕರ ಜವಾಬ್ದಾರಿಯನ್ನು ನೆನಪಿಸಿದ ಅವರು, ಮಕ್ಕಳು ದಿನನಿತ್ಯ ಶಾಲೆಗೆ ನಿಯಮಿತವಾಗಿ ಹಾಜರಾಗುವಂತೆ ಪೋಷಕರು ನಿಗಾ ವಹಿಸಬೇಕು. ಶಾಲೆಯಲ್ಲಿ ಕಲಿಯುವ ಶಿಸ್ತು, ಅವರ ಭವಿಷ್ಯದ ಅಡಿಪಾಯವಾಗಿದ್ದು, ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಪೋಷಕರು ಸಂಪೂರ್ಣ ಸಹಕಾರ ನೀಡಬೇಕು ಎಂದು ಕರೆ ನೀಡಿದರು.ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕ ವೃಂದ, ಪದಾಧಿಕಾರಿಗಳು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಪೋಷಕರು ಭಾಗವಹಿಸಿದ್ದರು. ಸಭೆಯ ಕೊನೆಯಲ್ಲಿ ಶಾಲೆಯ ಮೂಲಸೌಕರ್ಯ ಸುಧಾರಣೆ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ಇನ್ನಷ್ಟು ಪರಿಣಾಮಕಾರಿಗೊಳಿಸುವ ಕುರಿತು ಪೋಷಕರಿಂದ ಮುಕ್ತವಾಗಿ ಮುಖ್ಯ ಅನಿಸಿಕೆ ಮತ್ತು ಸಲಹೆಗಳನ್ನು ಪಡೆದುಕೊಳ್ಳಲಾಯಿತು.

ಈ ಸಂಧರ್ಭದಲ್ಲಿ ಮುಖ್ಯಗುರುಗಳು ಅದಮ್ ಸಾಲೋಡಗಿ, ಆಬೀದ ಸಾಲೋಡಗಿ, ಮಹಿಬೂಬ್ ಸಿಪಾಯಿ ಹಾಗೂ ಪೋಷಕರು ಪಾಲಕರು ಹಾಜರಿದ್ದರು..


ಉದಯವಾಹಿನಿ ಚಿತ್ರ

## ಸರ್ಕಾರದ ಪರಿಶೀಲನೆ ಶೇ. 80 ಪೂರ್ಣ-ಉಮಾನಾಥ ಶೆಟ್ಟಿ ಪೆರ್ನೆ

• **ಉದಯವಾಹಿನಿ, ಪುತ್ತೂರು:**

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿರುವ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾಗಿರುವ ಗೃಹಜ್ಯೋತಿ ಯೋಜನೆಯನ್ನು ಮರು ಪರಿಶೀಲನೆಗೊಳಿಸುವ ಕಾರ್ಯ ಪುತ್ತೂರಿನಲ್ಲಿ ಮೆಸ್ಕಾಂ ಇಲಾಖೆಯ ಮೂಲಕ ನಡೆಯುತ್ತಿದ್ದು, ಈಗಾಗಲೇ ಶೇ. 80ರಷ್ಟು ಪೂರ್ಣಗೊಂಡಿದೆ. ಶೇ. 20ರಷ್ಟು ಬಾಕಿಯಾಗಿದ್ದು ತಕ್ಷಣವೇ ಎಲ್ಲಾ ಫಲಾನುಭವಿಗಳು ತಮ್ಮ ದಾಖಲೆಗಳೊಂದಿಗೆ ಪರಿಶೀಲನೆಗೆ ಒಳಪಟ್ಟು ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಪುತ್ತೂರು ತಾಲ್ಲೂಕು ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಉಮಾನಾಥ ಶೆಟ್ಟಿ ಪೆರ್ನೆ ತಿಳಿಸಿದ್ದಾರೆ.

ತಾಲ್ಲೂಕಿನಾದ್ಯಂತ ಒಟ್ಟು 60,050 ಮಂದಿ ಗೃಹಜ್ಯೋತಿ ಉಚಿತ ಯೋಜನೆಯ ಫಲಾನುಭವಿಗಳಾಗಿದ್ದು, ತಾಲ್ಲೂಕಿಗೆ ಕಳೆದ 3 ವರ್ಷಗಳಲ್ಲಿ ರೂ. 120,60,01,000 ಪಾವತಿಸಲಾಗಿದೆ. ಕಳೆದ ವರ್ಷ 10 ಸಾವಿರ ಫಲಾನುಭವಿಗಳು ಹೆಚ್ಚುವರಿಯಾಗಿ ಸೇರ್ಪಡೆಯಾಗಿದ್ದಾರೆ. ಕಳೆದ ಒಂದು ತಿಂಗಳಿನಿಂದ ಗೃಹಜ್ಯೋತಿ ಯೋಜನೆಯ ಫಲಾನುಭವಿಗಳ ಮರು ಪರಿಶೀಲನೆ ಕಾರ್ಯ ನಡೆಯುತ್ತಿದ್ದು, ಆಗಸ್ಟ್ ಅಂತ್ಯದ ವರೆಗೆ ಪರಿಶೀಲನೆಗೆ ಅವಕಾಶ ಕಲ್ಪಿಸಲಾಗಿದೆ. ಮೆಸ್ಕಾ ಇಲಾಖೆಯ ಸಿಬ್ಬಂದಿಗಳು ಮೆಸ್ಕಾಂ ಕಚೇರಿ, ಗ್ರಾಮ ಪಂಚಾಯತ್ ಕಚೇರಿ ಹಾಗೂ ಮನೆ ಮನೆಗಳಿಗೆ ತೆರಳಿ ಪರಿಶೀಲನೆ ನಡೆಸುತ್ತಿದ್ದಾರೆ.



ಉದಯವಾಹಿನಿ ಚಿತ್ರ

ಗ್ರಾಮಾಂತರ ಪ್ರದೇಶಗಳಲ್ಲಿ ಈಗಾಗಲೇ ಶೇ. 70ರಷ್ಟು ಪರಿಶೀಲನೆ ಕಾರ್ಯ ಪೂರ್ಣಗೊಂಡಿದೆ. ಆದಾಗ್ಯೂ ಗ್ರಾಮಾಂತರದಲ್ಲಿ ಇನ್ನೂ 20 ಸಾವಿರ ಫಲಾನುಭವಿಗಳು ಇನ್ನೂ ಪರಿಶೀಲನೆಗೆ ಒಳಪಡಲು ಬಾಕಿಯಾಗಿದ್ದಾರೆ. ನಗರ ಪ್ರದೇಶದಲ್ಲಿ 4613 ಫಲಾನುಭವಿಗಳು ಇನ್ನೂ ಪರಿಶೀಲನೆಗೆ ಒಳಪಟ್ಟಿಲ್ಲ. ಗ್ರಾಮಾಂತರ ಮತ್ತು ನಗರ ಸೇರಿದಂತೆ ಒಟ್ಟು 24613 ಮಂದಿ ಪರಿಶೀಲನೆಗೆ ಬಾಕಿ ಉಳಿದಿದ್ದಾರೆ. ಶೇ. 100 ಪರಿಶೀಲನೆಗೆ ಒಳಪಡಿಸುವ ನಿಟ್ಟಿನಲ್ಲಿ ಬಾಕಿ ಉಳಿದಿರುವ ಎಲ್ಲರೂ ಸಹಕರಿಸಿ ಯೋಜನೆಯನ್ನು ಸದುಪಯೋಗ ಪಡಿಸಿಕೊಳ್ಳಬೇಕಾಗಿದೆ ಎಂದು ತಿಳಿಸಿದ್ದಾರೆ.

## ಸಿದ್ದರಾಮಯ್ಯ ಅವರಿಗೆ ಯಾವುದೇ ಅಸಮಾಧಾನ ಇಲ್ಲ: ಯತೀಂದ್ರ ಸ್ಪಷ್ಟನೆ

• **ಉದಯವಾಹಿನಿ, ಬೀದರ್:**


ಉದಯವಾಹಿನಿ ಚಿತ್ರ

ಸಂಪುಟ ವಿಸ್ತರಣೆಯ ಬಗ್ಗೆ ಸಿದ್ದರಾಮಯ್ಯ ಅವರಿಗೆ ಯಾವುದೇ ಅಸಮಾಧಾನ ಇಲ್ಲ. ಯಾವುದೇ ಸರ್ಕಾರದಲ್ಲಿ ಸಚಿವ ಸಂಪುಟ ವಿಸ್ತರಣೆಯಾದಾಗ ಕೆಲ ಸಚಿವಾಕಾಂಕ್ಷಿಗಳಿಗೆ ಅವಕಾಶ ಸಿಗುವುದಿಲ್ಲ. ಆಗ ಅವರ ಬೆಂಬಲಿಗರು ಹಾಗೂ ಕಾರ್ಯಕರ್ತರು ಪ್ರತಿಭಟನೆ ಮಾಡುವುದು ಸಹಜ ಎಂದು ಸಚಿವ ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಬೀದರ್‌ನಲ್ಲಿ ಮಾತನಾಡಿದ ಅವರು, ಅಂತಿಮವಾಗಿ ತೀರ್ಮಾನ ತೆಗೆದುಕೊಳ್ಳುವುದು ಹೈಕಮಾಂಡ್. ಆ ತೀರ್ಮಾನವನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಸಚಿವ ಸಂಪುಟದಲ್ಲಿ ಯಾವುದೇ ಹಿರಿಯ ನಾಯಕರನ್ನು ಕಡೆಗಣಿಸಿಲ್ಲ. ಹಿರಿಯರು ಹಾಗೂ ಕಿರಿಯರು ಎಲ್ಲರಿಗೂ ಅವಕಾಶ ನೀಡುವ ಪ್ರಯತ್ನ ಮಾಡಲಾಗುತ್ತದೆ. ಹೀಗಾಗಿ ಕೆಲವರನ್ನು ಕೈಬಿಡಬೇಕಾಗುತ್ತದೆ. ಅದರಿಂದ ಸಣ್ಣಪುಟ್ಟ ಅಸಮಾಧಾನ ಆಗುವುದು ಸಹಜ ಎಂದು ಹೇಳಿದರು.

ಸಚಿವ ಸಂಪುಟದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ಸಿಗದ ವಿಚಾರವಾಗಿ ಮಾತನಾಡಿದ ಯತೀಂದ್ರ, ಮಹಿಳೆಯರಿಗೂ ಒಂದು ಸಚಿವ ಸ್ಥಾನ ನೀಡಲಾಗುತ್ತದೆ. ಕೊನೆಯ ಕ್ಷಣದಲ್ಲಿ ಒಂದು ಸ್ಥಾನವನ್ನು ಖಾಲಿ ಇಡಲಾಗಿದೆ. ಈ ಬಗ್ಗೆ ಅಂತಿಮ ತೀರ್ಮಾನವನ್ನು ಹೈಕಮಾಂಡ್ ತೆಗೆದುಕೊಳ್ಳಲಿದೆ ಎಂದು ತಿಳಿಸಿದರು. ಗಾಯತ್ರಿ ಶಾಂತೇಗೌಡ ಅವರು ಯಾವುದೇ ಅಸಮಾಧಾನ ವ್ಯಕ್ತಪಡಿಸಿಲ್ಲ. ಕೊನೆಯ ಕ್ಷಣದಲ್ಲಿ ತಮ್ಮ ಹೆಸರನ್ನು ಪಟ್ಟಿಯಿಂದ ಯಾಕೆ ಕೈಬಿಟ್ಟಿದ್ದಾರೆ ಎಂಬುದು ಗೊತ್ತಿಲ್ಲ ಎಂದು ಮಾತ್ರ ಹೇಳಿದ್ದಾರೆ. ಕುರುಬ ಸಮುದಾಯದ ಇಬ್ಬರಿಗೆ ಹಾಗೂ ಅಲ್ಪಸಂಖ್ಯಾತ ಸಮುದಾಯದ ಮೂವರಿಗೆ ಸಚಿವ ಸ್ಥಾನ ನೀಡಲಾಗಿದೆ ಎಂದು ಹೇಳಿದರು.ಇದನ್ನು ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೆಲವರಿಗೆ ಸಚಿವ ಸ್ಥಾನ ಸಿಗದಿರಬಹುದು. ಆದರೆ, ಅವರಿಗೆ ನೀಡಲು ಇನ್ನೂ ಹಲವು ನಿಗಮ-ಮಂಡಳಿ ಸೇರಿದಂತೆ ವಿವಿಧ ಸ್ಥಾನಮಾನಗಳಿವೆ. ಇರುವ 34 ಸಚಿವ ಸ್ಥಾನಗಳಲ್ಲೇ ಸಮುದಾಯ, ಪ್ರಾದೇಶಿಕ ಸಮತೋಲನ ಹಾಗೂ ಹೊಸಬರಿಗೂ ಅವಕಾಶ ಕಲ್ಪಿಸಬೇಕಾಗುತ್ತದೆ ಎಂದು ಹೇಳಿದರು.

ಯಾವ ಸರ್ಕಾರಕ್ಕೂ ಶೇ.100ರಷ್ಟು ಪ್ರಾತಿನಿಧ್ಯ ನೀಡಲು ಸಾಧ್ಯವಿಲ್ಲ. ಕೆಲವರನ್ನು ಕೈಬಿಡಲೇಬೇಕಾಗುತ್ತದೆ. ಸಿದ್ದರಾಮಯ್ಯ ರಾಜಕೀಯ ನಿವೃತ್ತಿಯಾದರೂ ಕಾಂಗ್ರೆಸ್ ಪಕ್ಷಕ್ಕೆ ಯಾವುದೇ ಹೊಡೆತ ಬೀಳುವುದಿಲ್ಲ ಎಂದು ಯತೀಂದ್ರ ಸಿದ್ದರಾಮಯ್ಯ ಹೇಳಿದರು.

## ರಾಜ್ಯ ಹೆದ್ದಾರಿ ತಡೆದು ಉಗ್ರ ಪ್ರತಿಭಟನೆ
### ಜಿಲ್ಲಾಡಳಿತಕ್ಕೆ ಉಮೇಶ್ ಕೆ. ಮುದ್ನಾಳ್ ಎಚ್ಚರಿಕೆ

• **ಉದಯವಾಹಿನಿ, ಯಾದಗಿರಿ:**


ಉದಯವಾಹಿನಿ ಚಿತ್ರ

ನಗರದ ಹೊರವಲಯದಲ್ಲಿರುವ ಯಾದಗಿರಿ ದೊಡ್ಡ ಕೆರೆಗೆ ತಕ್ಷಣ ನೀರು ಹರಿಸಬೇಕು. ಇಲ್ಲವಾದರೆ ರಾಜ್ಯ ಹೆದ್ದಾರಿ ತಡೆದು ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಸಾಮಾಜಿಕ ಹೋರಾಟಗಾರ ಉಮೇಶ್ ಕೆ. ಮುದ್ನಾಳ್ ಜಿಲ್ಲಾಡಳಿತಕ್ಕೆ ಎಚ್ಚರಿಕೆ ನೀಡಿದರು. ದೊಡ್ಡ ಕೆರೆಯಲ್ಲೇ ರೈತರೊಂದಿಗೆ ಧಿಢೀರ್ ಪ್ರತಿಭಟನೆ ನಡೆಸಿದ ಅವರು, ಮೂರು ವರ್ಷಗಳ ಹಿಂದೆ ಸನ್ನತಿ ಬ್ರಿಜ್-ಕಂ-ಬ್ಯಾರೇಜ್‌ನಿಂದ ಯಾದಗಿರಿ ದೊಡ್ಡ ಕೆರೆಗೆ ನೀರು ತುಂಬಿಸುವ ಉದ್ದೇಶದಿಂದ ಕೋಟಿ ಕೋಟಿ ರೂಪಾಯಿ ವೆಚ್ಚದಲ್ಲಿ ಪೈಪ್‌ಲೈನ್ ಅಳವಡಿಸಿ ಉದ್ಘಾಟನೆ ಮಾಡಲಾಗಿತ್ತು. ಆದರೆ ಇದುವರೆಗೆ ಒಂದು ಹನಿ ನೀರೂ ಕೆರೆಗೆ ಹರಿಸದಿರುವುದು ಜಿಲ್ಲಾಡಳಿತದ ನಿರ್ಲಕ್ಷ್ಯದ ಪರಮಾವಧಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಹಾರಾಷ್ಟ್ರದಲ್ಲಿ ಸುರಿಯುತ್ತಿರುವ ಭಾರೀ ಮಳೆಯಿಂದ ಭೀಮಾ ನದಿಯಲ್ಲಿ ಸುಮಾರು 50 ಸಾವಿರ ಕ್ಯೂಸೆಕ್ ನೀರು ಹರಿಯುತ್ತಿದ್ದು, ಹೆಚ್ಚಿನ ಪ್ರಮಾಣದ ನೀರು ತೆಲಂಗಾಣದತ್ತ ಹರಿದು ಹೋಗುತ್ತಿದೆ. ಗುರುಸೂಣಿಗಿ ಬ್ರಿಜ್-ಕಂ-ಬ್ಯಾರೇಜ್‌ನಿಂದ ಸುಮಾರು 35 ಕೆರೆಗಳಿಗೆ ಕಳೆದ ಮೂರು ದಿನಗಳಿಂದ ನೀರು ಹರಿಸಲಾಗುತ್ತಿದೆ. ಆದರೆ ಸನ್ನತಿ ಬ್ರಿಜ್-ಕಂ-ಬ್ಯಾರೇಜ್‌ನಿಂದ ಯಾದಗಿರಿ ದೊಡ್ಡ ಕೆರೆಗೆ ನಿರ್ಮಿಸಿರುವ ಪೈಪ್ ಲೈನ್ ಮೂಲಕ ಇನ್ನೂ ನೀರು ಹರಿಸದಿರುವುದು ಅಸಮಂಜಸ ಎಂದು ಹೇಳಿದರು. ದೊಡ್ಡ ಕೆರೆಯ ಕೆಳಭಾಗದ ರೈತರು ನೀರಿನ ಕೊರತೆಯಿಂದ ಬಿತ್ತನೆ ಹಾಗೂ ವಿವಿಧ ಬೆಳೆಗಳ ಕೃಷಿ ಕೈಗೊಳ್ಳಲು ಸಾಧ್ಯವಾಗದ ಸ್ಥಿತಿಯಲ್ಲಿದ್ದಾರೆ. ಕೆರೆಗೆ ನೀರು ತುಂಬಿಸಿದರೆ ಅಂತರ್ಜಲ ಮಟ್ಟ ಹೆಚ್ಚಾಗಿ ಜನ-ಜಾನುವಾರುಗಳ ಕುಡಿಯುವ ನೀರಿನ ಸಮಸ್ಯೆಯೂ ಪರಿಹಾರವಾಗಲಿದೆ ಎಂದು ತಿಳಿಸಿದರು.

## ಗುರುಗಂಗಾ ಹಳ್ಳ ವಿಷಕಾರಿ ತ್ಯಾಜ್ಯ : ಕಾರ್ಖಾನೆ ವಿರುದ್ಧ ಬೃಹತ್ ಪ್ರತಿಭಟನೆ

• **ಉದಯವಾಹಿನಿ, ಹುಮನಾಬಾದ್:**

ಹೊರವಲಯದ ಕೈಗಾರಿಕೆ ಪ್ರದೇಶದ ರಾಸಾಯನಿಕ ಕಂಪನಿಗಳಿಂದ ಮಾಣಿಕನಗರ ಪವಿತ್ರ ಗುರುಗಂಗಾ ಹಳ್ಳಕ್ಕೆ ಸೇರುತ್ತಿರುವ ವಿಷಕಾರಿ ತ್ಯಾಜ್ಯವನ್ನು ಶಾಶ್ವತವಾಗಿ ತಡೆಗಟ್ಟುವಂತೆ ಒತ್ತಾಯಿಸಿ ಶ್ರೀ ಮಾಣಿಕಪ್ರಭು ಸಂಸ್ಥಾನದ ಕಾರ್ಯದರ್ಶಿ ಆನಂದರಾಜ ಪ್ರಭು ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು. ಶ್ರೀ ಮಾಣಿಕ ನಗರ ಸಂಸ್ಥಾನದಿಂದ ಆರಂಭವಾದ ಬೃಹತ್ ಪ್ರತಿಭಟನೆಯು ತಹಸೀಲ್ ಕಚೇರಿವರೆಗೆ ನಡೆಯಿತು. ಅಪಾರ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಕೈಗಾರಿಕಾ ಪ್ರದೇಶ ವ್ಯಾಪ್ತಿಯ ಗ್ರಾಮಗಳ ಜನರು ಪಾಲ್ಗೊಂಡಿದ್ದರು. ಕೈಯಲ್ಲಿ ಕಪ್ಪು ಧ್ವಜ ಹಿಡಿದ ಪ್ರತಿಭಟನಾಕಾರರು 'ಪ್ರದೂಷಣ ತಡೆಸಿ-ಗುರುಗಂಗಾ ಉಳಿಸಿ' ಎಂಬ ಘೋಷಣೆಯೊಂದಿಗೆ ಕಾರ್ಖಾನೆಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.ಹುಮನಾಬಾದ್ ಕ್ಷೇತ್ರದ ಶಾಸಕ ಡಾ. ಸಿದ್ದು ಪಾಟೀಲ್, ವಿಧಾನ ಪರಿಷತ್ ಸದಸ್ಯ ಭೀಮರಾವ್ ಪಾಟೀಲ್ ಅವರು ಪ್ರತಿಭಟನೆಗೆ ಬೆಂಬಲಿಸಿ ಭಾಗಿಯಾದರು. ಬಳಿಕ ತಹಶೀಲ್ದಾರ್ ಅವರಿಗೆ ಪತ್ರ ಸಲ್ಲಿಸಿದರು.

ಬಳಿಕ ಪ್ರಮುಖರು ಮಾತನಾಡಿ, ''ಕಳೆದ ಸುಮಾರು ಒಂದು ದಶಕದಿಂದ ಹುಮನಾಬಾದ್ ಕೈಗಾರಿಕಾ ಪ್ರದೇಶದ ಸುತ್ತಮುತ್ತಲಿನ ಕೆಲವು ಕೈಗಾರಿಕೆಗಳಿಂದ ಸಂಸ್ಕರಿಸದ ವಿಷಕಾರಿ ಕೈಗಾರಿಕಾ ತ್ಯಾಜ್ಯವನ್ನು ಗುರುಗಂಗಾ ಹಳ್ಳಕ್ಕೆ ಅಕ್ರಮವಾಗಿ ಹರಿಸಲಾಗುತ್ತಿದೆ. ಇದರಿಂದ ಹಳ್ಳದ ನೀರು ಕಪ್ಪು ಬಣ್ಣಕ್ಕೆ ತಿರುಗಿದ್ದು, ದುರ್ವಾಸನೆ, ತೈಲಯುಕ್ತ ಪದರ ನಿರ್ಮಾಣ ಹಾಗೂ ಜಲಚರಗಳ ಸಾವಿನಂತಹ ಆತಂಕಕಾರಿ ಪರಿಸ್ಥಿತಿ ಉಂಟಾಗಿದೆ'' ಎಂದು ಆತಂಕ ವ್ಯಕ್ತಪಡಿಸಿದರು. ಈ ಮಾಲಿನ್ಯವು ಭೂಗರ್ಭಜಲಕ್ಕೂ ವ್ಯಾಪಿಸಿದ್ದು, ಕೈಗಾರಿಕಾ ಪ್ರದೇಶ ವ್ಯಾಪ್ತಿಯ ಗ್ರಾಮಗಳಾದ ಮಾಣಿಕನಗರ, ಹುಮನಾಬಾದ್, ಗಡವಂತಿ, ಮೊಳಕೇರಾ, ಧುಮ್ಮನ್‌ಸೂರು ಸೇರಿದಂತೆ ಸುತ್ತಮುತ್ತಲಿನ ಸಾವಿರಾರು ಜನರು ಅವಲಂಬಿಸಿರುವ ಕುಡಿಯುವ ನೀರಿನ ಮೂಲಕ್ಕೆ ಗಂಭೀರ ಅಪಾಯ ಎದುರಾಗಿದೆ.


ಉದಯವಾಹಿನಿ ಚಿತ್ರ

> ಇದರಿಂದ ಸಾರ್ವಜನಿಕರು ಚರ್ಮರೋಗ, ಜೀರ್ಣಾಂಗದ ಸೋಂಕು, ಯಕೃತ್ ಹಾಗೂ ಮೂತ್ರಪಿಂಡದ ಸಮಸ್ಯೆ, ನರಮಂಡಲದ ತೊಂದರೆಗಳು ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುವ ಸಾಧ್ಯತೆ ಇದೆ ಎಂದರು.

## ಅರ್ಜಿಗಳನ್ನು ಶೀಘ್ರ ಭರ್ತಿ ಮಾಡಿ ಸಲ್ಲಿಸಿ: ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಮನವಿ

• **ಉದಯವಾಹಿನಿ, ಯಾದಗಿರಿ:**

ರಾಜ್ಯದಲ್ಲಿ ನಡೆಯುತ್ತಿರುವ ವಿಶೇಷ ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆಗೆ ಸಾರ್ವಜನಿಕರು ಹೆಚ್ಚಿನ ಸಹಕಾರ ನೀಡಬೇಕು ಎಂದು ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಮನವಿ ಮಾಡಿದರು. ನಗರದಲ್ಲಿರುವ ತಮ್ಮ ನಿವಾಸದಲ್ಲಿ ಎಸ್‌ಐಆರ್ ಅರ್ಜಿಯನ್ನು ಸ್ವತಃ ಭರ್ತಿ ಮಾಡಿ ಸಂಬಂಧಿಸಿದ ಅಧಿಕಾರಿಗಳಿಗೆ ಸಲ್ಲಿಸಿದ ಬಳಿಕ ಅವರು ಮಾತನಾಡಿ, ಚುನಾವಣಾ ಆಯೋಗದ ಸೂಚನೆಯಂತೆ ನಡೆಯುತ್ತಿರುವ ವಿಶೇಷ ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆಯನ್ನು ಪ್ರತಿಯೊಬ್ಬ ಮತದಾರರು ಗಂಭೀರವಾಗಿ ಪರಿಗಣಿಸಬೇಕು ಎಂದು ಹೇಳಿದರು.

ಮತದಾರರಿಗೆ ವಿತರಿಸಲಾಗುತ್ತಿರುವ ಅರ್ಜಿಗಳನ್ನು ಅಗತ್ಯ ಮಾಹಿತಿಯೊಂದಿಗೆ ಸರಿಯಾಗಿ ಭರ್ತಿ ಮಾಡಿ, ನಿಗದಿತ ಅವಧಿಯೊಳಗೆ ಚುನಾವಣಾ ಅಧಿಕಾರಿಗಳಿಗೆ ಸಲ್ಲಿಸಬೇಕು. ಸಕಾಲದಲ್ಲಿ ಅರ್ಜಿ ಸಲ್ಲಿಸುವುದರಿಂದ ಮತದಾರರ ಮಾಹಿತಿಯನ್ನು ಸರಿಯಾಗಿ ದಾಖಲಿಸಲು ಅನುಕೂಲವಾಗಲಿದ್ದು, ಮುಂದಿನ ದಿನಗಳಲ್ಲಿ ಯಾವುದೇ ತೊಂದರೆ ಉಂಟಾಗುವುದಿಲ್ಲ ಎಂದು ತಿಳಿಸಿದರು. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಸಾರ್ವಜನಿಕರು ಎಸ್‌ಐಆರ್ ಅರ್ಜಿಗಳನ್ನು ಆದಷ್ಟು ಬೇಗ ಭರ್ತಿ ಮಾಡಿ ನಿಗದಿತ ಅವಧಿಯೊಳಗೆ ಸಲ್ಲಿಸಿ, ಮತದಾರರ ಪರಿಷ್ಕರಣೆ ಕಾರ್ಯಕ್ಕೆ ಸಹಕರಿಸುವಂತೆ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಮನವಿ ಮಾಡಿದರು.

# ವ್ಯಾಪಕ ಮಳೆ ಅಪಾಯದ ಮಟ್ಟ ಮೀರಿ ಹರಿಯುತ್ತಿರುವ ವರದಾ ನದಿ

### ವರದಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿರುವುದರಿಂದ 8-10 ಗ್ರಾಮಗಳು ಸಂಪರ್ಕ ಕಳೆದುಕೊಂಡಿವೆ.

• **ಉದಯವಾಹಿನಿ ಹಾವೇರಿ:**


ಕಳೆದ ಮೂರ್ನಾಲ್ಕು ದಿನಗಳಿಂದ ವರದಾ ಜಲಾನಯದ ಪ್ರದೇಶದಲ್ಲಿ ವ್ಯಾಪಕ ಮಳೆಯಾಗುತ್ತಿರುವುದರಿಂದ ನದಿಯು ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಸವಣೂರು ತಾಲ್ಲೂಕು ಕಳಸೂರು ಗ್ರಾಮದ ಬ್ರಿಡ್ಜ್ ಕಂ ಸೇತುವೆ ಈಗಾಗಲೇ ಜಲಾವೃತಗೊಂಡ ಪರಿಣಾಮ ಕಳಸೂರು, ಹತ್ತಿಮತ್ತೂರು, ಮಂಟಗಣಿ,ತೊಂಡೂರು, ಹೊಸಳ್ಳಿ ಸೇರಿದಂತೆ 8-10 ಗ್ರಾಮಗಳು ಸಂಪರ್ಕ ಕಳೆದುಕೊಂಡಿವೆ.

ಹಾವೇರಿ, ಕಳಸೂರು, ತೊಂಡೂರು ಹೊಸಳ್ಳಿ ಸೇರಿದಂತೆ ಹತ್ತಾರು ಗ್ರಾಮಗಳ ಜನರು ಈ ಸೇತುವೆ ಕಂ ಬ್ಯಾರೇಜ್ ಅನ್ನೇ ಅವಲಂಬಿಸಿದ್ದಾರೆ.

**1 : ಪ್ರತಿವರ್ಷ ಸಮಸ್ಯೆ ಇದ್ದಿದ್ದೆ**
**2 : ಮನವಿ ನೀಡಿದಾಗ ಭರವಸೆ**
**3 : ಬರುವುದು ವೋಟ್ ಕೇಳಲು**

ಇಲ್ಲಿ ಓಡಾಡುವುದರಿಂದ ಈ ಗ್ರಾಮಗಳ ನಡುವಿನ ಅಂತರ ಕಡಿಮೆಯಾಗುತ್ತೆ. ಸೇತುವೆ ಭರ್ತಿಯಾದರೆ ಸಾಕು ಸುತ್ತಿಬಳಸಿ ಓಡಾಡಬೇಕು. ಕರ್ಜಗಿ ಮೇಲೆ ಸುಮಾರು 30ಕ್ಕೂ ಅಧಿಕ ಕಿ.ಮೀ ಸುತ್ತುಬಳಸಿ ಹಾವೇರಿಗೆ ಬರಬೇಕಾಗುತ್ತದೆ ಎಂದು ಸ್ಥಳೀಯರು ಬೇಸರ ಹೊರಹಾಕಿದ್ದಾರೆ.

ಮಳೆಗಾಲ ಬಂದಾಗ ಸವಣೂರು ತಾಲೂಕಿನ ಕೆಲವು ಗ್ರಾಮಗಳಿಗೆ ಈ ಸಮಸ್ಯೆ ಇದ್ದಿದ್ದೆ. ಸೇತುವೆ ಬಳಿ ನೀರು ಕಡಿಮೆ ಇದ್ದರೆ ದಾಟುತ್ತೇವೆ. ಇಲ್ಲದಿದ್ದರೆ ಸುತ್ತುಬಳಸಿ ಹಾವೇರಿಗೆ ಹೋಗುತ್ತೇವೆ. ಇದು ನಮಗೆ ಅಭ್ಯಾಸವಾಗಿದೆ. ಸೇತುವೆ ಕಂ ಬ್ಯಾರೇಜ್ ಎತ್ತರ ಹೆಚ್ಚಿಸುವಂತೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಸರ್ಕಾರಕ್ಕೆ, ಜನಪ್ರತಿನಿಧಿಗಳಿಗೆ ಹಾಗೂ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದೇವೆ. ಮನವಿ ನೀಡಿದಾಗ ಭರವಸೆ ನೀಡುತ್ತಾರೆ. ಬಳಿಕ ಮರೆತುಬಿಡುತ್ತಾರೆ. ನಮ್ಮ ಕಡೆ ಮತ್ತೆ ಬರುವುದು ವೋಟ್ ಕೇಳಲು ಮಾತ್ರ. ಈ ಸೇತುವೆಗೆ ಹೊಂದಿಕೊಂಡ ಸವಣೂರು ಏತನೀರಾವರಿ ಯೋಜನೆ ಇದೆ. ಈ ಯೋಜನೆಯಿಂದ 30 ಗ್ರಾಮಗಳಿಗೆ ನೀರು ಸರಬರಾಜಾಗುತ್ತದೆ. ಈ ಬಾಂದಾರ ಮತ್ತು ಸೇತುವೆ ಎತ್ತರ ಏರಿಕೆ ಮಾಡಿದರೆ ಬಾಂದಾರದಲ್ಲಿ ಅಧಿಕ ನೀರು ಸಂಗ್ರಹವಾಗುತ್ತೆ. ಅಲ್ಲದೇ ಸೇತುವೆ ಮೇಲೆ ಓಡಾಡಲು ಕೂಡ ಅನಕೂಲವಾಗುತ್ತದೆ. ಈ ಬಗ್ಗೆ ಜನಪ್ರತಿನಿಧಿಗಳು ಗಮನ ಹರಿಸುತ್ತಿಲ್ಲ ಎಂದು ಗ್ರಾಮಸ್ಥರು ಬೇಸರ ವ್ಯಕ್ತಪಡಿಸಿದ್ದಾರೆ.ಮಳೆಯಿಂದ ಮಂಟಗಣಿ - ಕಳಸೂರು ಬ್ರಿಡ್ಜ್ ಬಂದಾಗಿದೆ. ಆಳುಗಳನ್ನು ಕರೆದುಕೊಂಡು ಹೋಗಲಾಗುತ್ತಿಲ್ಲ. ನಮ್ಮ ಜಮೀನುಗಳು ಆ ಕಡೆ ಇವೆ. ಸೇತುವೆ ಎತ್ತರ ಹೆಚ್ಚಳವಾದರೆ ಈ ಸಮಸ್ಯೆ ಇರುವುದಿಲ್ಲ. ಪ್ರತಿಸಲ ಹೇಳುವುದೇ ಆಗಿದೆ. ಹೇಳಿ ಹೇಳಿ ನಮಗೆ ಸಾಕಾಗಿದೆ. ಕಳಸೂರು, ಕೊಳೂರು, ದೇವಗಿರಿ ಹಾಗೂ ಹಾವೇರಿಗೆ ಓಡಾಡಲೂ ಮತ್ತು ಈ ಗ್ರಾಮಗಳಿಗೆ ಸವಣೂರಿಗೆ ಹೋಗಲು ಅನುಕೂಲವಾಗುತ್ತದೆ. ಈ ಬ್ರಿಡ್ಜ್ ಎತ್ತರ ಮಾಡಿಕೊಟ್ಟರೆ ತುಂಬಾ ಅನುಕೂಲವಾಗುತ್ತದೆ. ಈ ಬ್ರಿಡ್ಜ್ ಮೇಲೆ ಹೋದರೆ ಈ ಗ್ರಾಮಗಳಿಗೆ 8-10 ಕಿ.ಮೀ ದೂರವಾಗುತ್ತದೆ. ಬ್ರಿಡ್ಜ್ ಸಂಪರ್ಕ ಕಳೆದುಕೊಂಡರೆ ನಾವು ಸುತ್ತಿಬಳಿಸಿ 15 ಕಿ.ಮೀ ದೂರವಾಗುತ್ತದೆ. ಕಳೆದ 10 ವರ್ಷದಿಂದ ಈ ಸಮಸ್ಯೆ ಇದೆ. ಸಂಬಂಧಪಟ್ಟ ಅಧಿಕಾರಿಗಳಿಗೂ ಮನವಿ ನೀಡಿದ್ದೇವೆ.


ಉದಯವಾಹಿನಿ ಚಿತ್ರ

> 8 ವರ್ಷದಿಂದ ಹೇಳುತ್ತಲ್ಲೇ ಇದ್ದೇವೆ. ಆದರೂ, ಎತ್ತರ ಮಾಡುತ್ತಿಲ್ಲ. ಪರಿಣಾಮ ಮಳೆ ಬಂದಾಗ ಸಂಪರ್ಕ ಕಡಿತಗೊಳ್ಳುತ್ತದೆ. ಈ ಕಡೆ ರೈತರ ಹೊಲಗಳು ಆ ಕಡೆ ಇವೆ. ಇಲ್ಲಿಂದ ದನ - ಆಳು - ಕಾಳು ಕರೆದುಕೊಂಡು ಹೋಗಲು ತೊಂದರೆಯಾಗುತ್ತದೆ ಎಂದು ಅಳಲು ತೋಡಿಕೊಂಡರು.-ರೈತ ರಾಜುಗೌಡ

> ಈ ನದಿ ಅಪಾಯದ ಮಟ್ಟ ಮೀರಿ ಹರಿದರೆ ದೇವಗಿರಿ ಮತ್ತು ಕಳಸೂರು ನಡುವಿನ ಸೇತುವೆ ಮೇಲೆ ನೀರು ಹರಿಯಲಾರಂಭಿಸುತ್ತದೆ. ಈ ಸೇತುವೆ ಎತ್ತರ ಹೆಚ್ಚಿಸಿದರೆ ನಮಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಹತ್ತಿಮತ್ತೂರು, ಕಲಕೋಟಿ, ಕರ್ಜಗಿ ಸುತ್ತಿಬಳಸಿ ಹಾವೇರಿಗೆ ಬರಬೇಕಾಗುತ್ತದೆ. ಈ ಓವರ್ ಬ್ರಿಡ್ಜ್ ಎತ್ತರ ಹೆಚ್ಚಳ ಮಾಡಿದರೆ ನಮಗೆ ಅನುಕೂಲವಾಗುತ್ತೆ.-ರೈತ ಚಂದ್ರಪ್ಪ

> ಪ್ರತಿವರ್ಷ ಮಳೆಗಾಲ ಬಂದಾಗ 8-10 ದಿನ ಇದೇ ರೀತಿ ಇರುತ್ತದೆ. ಕೆಲವೊಮ್ಮೆ ತಿಂಗಳು ಕಾಲ ನೀರು ಇದ್ದು ಇಲ್ಲಿಂದ ದನಕರುಗಳು ಆ ಕಡೆ ದಂಡೆಗೆ ಹೋಗಲಾಗುವುದಿಲ್ಲ. ಆ ಕಡೆ ದಂಡೆಯಿಂದ ಈ ಕಡೆ ಯಾರಿಗೂ ಬರಲಾಗುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

## ಮಿನಿ ನ್ಯೂಸ್

### ಮಂಗಳೂರು-ಬೆಂಗಳೂರು ರೈಲು ಮಾರ್ಗ ಸಂಚಾರಕ್ಕೆ ರೆಡಿ

• **ಉದಯವಾಹಿನಿ, ಮಂಗಳೂರು:**

ಮಂಗಳೂರು ಬೆಂಗಳೂರು ರೈಲು ಮಾರ್ಗದ ಎಡಕುಮೇರಿ ಸಿರಿಬಾಗಿಲು ನಡುವೆ ರೈಲು ಮಾರ್ಗಕ್ಕೆ ಮಣ್ಣು ಕುಸಿತ ತೆರವು ಕಾರ್ಯಾಚರಣೆ ಪೂರ್ಣಗೊಂಡಿದ್ದು, ಸೋಮವಾರ ರಾತ್ರಿ ಬಳಿಕ ರೈಲು ಸಂಚಾರ ಮರು ಆರಂಭಗೊಂಡಿದೆ. ದುರಸ್ತಿ ಕಾರ್ಯಾಚರಣೆ ಬಳಿಕ ರೈಲು ಮಾರ್ಗವನ್ನು ಸೋಮವಾರ ರಾತ್ರಿ ಸಂಚಾರಕ್ಕೆ ಸೂಕ್ತವಾಗಿದೆ ಎಂದು ಪ್ರಮಾಣೀಕರಿಸಲಾಯಿತು.10 ಕಿ.ಮೀ. ತಾತ್ಕಾಲಿಕ ವೇಗದ ನಿರ್ಬಂಧ ಘಟನಾ ಸ್ಥಳದಲ್ಲಿ ಸುರಕ್ಷತಾ ದೃಷ್ಟಿಯಿಂದ ಮುನ್ನೆಚ್ಚರಿಕೆ ಕ್ರಮವಾಗಿ ಘಂಟೆಗೆ 10 ಕಿ.ಮೀ. ತಾತ್ಕಾಲಿಕ ವೇಗದ ನಿರ್ಬಂಧ ಜಾರಿಯಲ್ಲಿದೆ. ರೈಲು ಸಂಚಾರದ ಸಾಮಾನ್ಯ ವೇಳಾ ಪಟ್ಟಿಗಳನ್ನು ಹಂತಹಂತವಾಗಿ ಮರು ಹೊಂದಿಸಲಾಗುತ್ತದೆ, ಕೆಲ ವಿಳಂಬಗಳು ಮುಂದುವರಿದು ಬಳಿಕ ಎಂದಿನಂತೆ ರೈಲು ಸೇವೆ ಮುಂದುವರಿಯಲಿದೆ ಎಂದು ರೈಲು ಅಧಿಕಾರಿಗಳು ತಿಳಿಸಿದ್ದಾರೆ.

ದುರಸ್ತಿ ಕಾರ್ಯಾಚರಣೆ ಸ್ಥಳಕ್ಕೆ ಡಿಆರ್‌ಎಂ ಮುದಿತ್ ಮಿತ್ತಲ್ ಹಾಗೂ ಅಧಿಕಾರಿಗಳ ತಂಡ ಭೇಟಿ ನೀಡಿ ಕಾರ್ಯಾಚರಣೆ ಬಗ್ಗೆ ಪರಿಶೀಲನೆ ನಡೆಸಿ ನಿರ್ದೇಶನಗಳನ್ನು ನೀಡಿದರು. ಕಾರ್ಯಾಚರಣೆ ಪೂರ್ಣವಾದ ಬಳಿಕ ಪರೀಕ್ಷಾರ್ಥ ಎಂಜಿನ್ ಓಡಿಸಲಾಯಿತು.

### ಶಾಸಕ ಎನ್‌ವೈ ಗೋಪಾಲಕೃಷ್ಣಗೆ ತಪ್ಪಿದ ಮಂತ್ರಿಗಿರಿ ಟೈರಿಗೆ ಬೆಂಕಿಯಿಟ್ಟು ಬೆಂಬಲಿಗರ ಆಕ್ರೋಶ

• **ಉದಯವಾಹಿನಿ, ಚಿತ್ರದುರ್ಗ:**

ಮೊಳಕಾಲ್ಮೂರು ಕ್ಷೇತ್ರದ ಹಿರಿಯ ಶಾಸಕ ಎನ್‌ವೈ ಗೋಪಾಲಕೃಷ್ಣಗೆ ಮಂತ್ರಿಗಿರಿ ಕೈತಪ್ಪಿದ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕಿನ ರಾಂಪುರ ಗ್ರಾಮದಲ್ಲಿ ಅವರ ಬೆಂಬಲಿಗರು ಬೃಹತ್ ಪ್ರತಿಭಟನೆ ನಡೆಸಿದ್ದಾರೆ.

ರಾಂಪುರ ಬಸ್ ನಿಲ್ದಾಣ ಬಳಿ ಸಾರಿಗೆ ಬಸ್ ತಡೆದು ಕಿಡಿಕಾರಿದ ಪ್ರತಿಭಟನಾಕಾರರು, ಟೈರಿಗೆ ಬೆಂಕಿಯಿಟ್ಟು ಆಕ್ರೋಶ ವ್ಯಕ್ತಪಡಿಸಿದರು. ಕೈನಲ್ಲಿ ವಿಷದ ಬಾಟಲಿ ಹಾಗೂ ಪೆಟ್ರೋಲ್ ಪ್ರದರ್ಶಿಸಿದ ಪ್ರತಿಭಟನಾಕಾರರು ಎನ್‌ವೈ ಗೋಪಾಲಕೃಷ್ಣಗೆ ಮಂತ್ರಿಗಿರಿ ನೀಡಬೇಕು. ಸಚಿವ ಸ್ಥಾನ ನೀಡದಿದ್ದರೆ ವಿಷ ಸೇವಿಸುತ್ತೇವೆ. ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೈಡ್ರಾಮಾ ಮಾಡಿದ್ದಾರೆ.


ಉದಯವಾಹಿನಿ ಚಿತ್ರ

### ವೈದ್ಯನ ಕೊಂದ ವೈದ್ಯ ಪತ್ನಿ ಆಸ್ಪತ್ರೆಯಿಂದಲೇ ಸೀದಾ ಜೈಲಿಗೆ!

• **ಉದಯವಾಹಿನಿ, ಧಾರವಾಡ:**

ಇಲ್ಲಿನ ವೈದ್ಯ ಕಿರಣ್ ಹೊನ್ನಣ್ಣವರ ಕೊಲೆ ಮಾಡಿದ್ದ ಪತ್ನಿ ಈಗ ಜೈಲುಪಾಲಾಗಿದ್ದಾಳೆ. ಕಳೆದ ಜುಲೈ 15 ರ ರಾತ್ರಿ, ಧಾರವಾಡ ನಗರದ ಬಾರಾಕೋಟ್ರಿ ಬಳಿಯ ರಂಕಾ ಸ್ಟೇಲ್ಲೊ ಅಪಾರ್ಟ್‌ಮೆಂಟ್ ನಲ್ಲಿ ವೈದ್ಯ ಕಿರಣ್ ಪತ್ನಿ ಪ್ರಿಯಾಂಕಾ ಕೊಲೆ ಮಾಡಿದ್ದಳು. ಅಲ್ಲದೇ ತಾನೂ ಆತ್ಮಹತ್ಯೆ ಮಾಡಿಕೊಂಡು ಸಾಯಲು ಪ್ರಯತ್ನ ಪಟ್ಟಿದ್ದಳು.

ಹೆಚ್ಚಿನ ಪ್ರಮಾಣದಲ್ಲಿ ಇನ್ಸುಲಿನ್ ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದ ಕಿರಣ್‌ನ ಪತ್ನಿ ಪ್ರಿಯಾಂಕಾ, ಅದೃಷ್ಟವಶಾತ್ ಸಾವಿನ ದವಡೆಯಿಂದ ಪಾರಾದರು. ಪೊಲೀಸರು ಕೊನೆಗೆ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಿದ್ದರು.

ಸದ್ಯ ಪತಿಯ ಕೊಲೆ ಮಾಡಿದ್ದ ಪ್ರಿಯಾಂಕಾ ಆರೋಗ್ಯ ಸುಧಾರಿಸಿದ ಹಿನ್ನೆಲೆ ಜೈಲಿಗಟ್ಟಿದ್ದಾರೆ. ಪತಿ ಕಿರಣ್ ಕೊಲೆ ಆರೋಪದ ಮೇಲೆ ಪತ್ನಿಗೆ ಪೊಲೀಸರು ನ್ಯಾಯಾಂಗ ಬಂಧನಕ್ಕೆ ನೀಡಿದ್ದಾರೆ. ಆದರೆ ಪತಿಯ ಕೊಲೆ ಹೇಗೆ ಮಾಡಿದಳು ಎಂದು ಬಾಯಿ ಬಿಡದ ಪ್ರಿಯಾಂಕಾ, ತಾನೂ ಎರಡು ತೊಡೆಗೆ ಮತ್ತು ಹೊಟ್ಟೆಗೆ ಇನ್ಸುಲಿನ್ ತೆಗೆದುಕೊಂಡು ಸಾವನ್ನಪ್ಪಲು ಪ್ರಯತ್ನ ಮಾಡಿದ ಬಗ್ಗೆ ಮಾತ್ರ ಬಾಯಿ ಬಿಟ್ಟಿದ್ದಾಳೆ. ಧಾರವಾಡ ಉಪನಗರ ಠಾಣಾ ವ್ಯಾಪ್ತಿಯಲ್ಲಿ ಈ ಕೊಲೆ ನಡೆದಿತ್ತು.

### ತಿರಂಗಾ ಯಾತ್ರೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಭಾಗಿ

• **ಉದಯವಾಹಿನಿ, ಪುತ್ತೂರು:**

ಪುತ್ತೂರು ವಿಧಾನಸಭಾ ಕ್ಷೇತ್ರ ತಿರಂಗ ಯಾತ್ರೆ ಸಮಿತಿಯ ವತಿಯಿಂದ ಆ. 7ರಂದು ಸಂಜೆ 3ಕ್ಕೆ ಪುತ್ತೂರಿನಲ್ಲಿ ಬೃಹತ್ ತಿರಂಗ ಯಾತ್ರೆ ನಡೆಯಲಿದ್ದು, ಸಮಾರಂಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭಾಗ ವಹಿಸಲಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ತಿಳಿಸಿದರು.

ಪುತ್ತೂರಿನಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಪ್ರಧಾನಿ ಮೋದಿಯವರು ಹರ್ ಘರ್ ತಿರಂಗಾ ಅಭಿಯಾನ ಕೈಗೊಂಡ ಬಳಿಕ ದೇಶದ 23 ಕೋಟಿ ಮನೆಗಳಲ್ಲಿ ರಾಷ್ಟ್ರಧ್ವಜ ಹಾರಾಡಿದ್ದು, ಕಳೆದ ವರ್ಷ 75 ಲಕ್ಷ ಯುವಕರು ರಾಷ್ಟ್ರಧ್ವಜದೊಂದಿಗೆ ಸೆಲ್ಫಿ ತೆಗೆದು ಸರಳ್ ಆಪ್ ಮೂಲಕ ಅಪ್ ಲೋಡ್ ಮಾಡಿದ್ದರು.

ಹೊಸದಿಲ್ಲಿಯ ಜಂತರ್-ಮಂಥರ್‌ನಲ್ಲಿ ಕಾಂಗ್ರೇಜ್ ಪಾರ್ಟಿಯವರು ಪಾಕಿಸ್ಥಾನಿಗಳು, ವಿದೇಶಿ ಕೈವಾಡದೊಂದಿಗೆ ನಡೆಸಿದ ಪ್ರತಿಭಟನಾಕಾರಿಗೆ ಉತ್ತರ ನೀಡಿ ಪ್ರಧಾನಿಗಳಿಗೆ ಶಕ್ತಿ ತುಂಬುವ ಕಾರ್ಯ ಮಾಡಬೇಕಿದೆ. ದೇಶದ ಸೈನಿಕರು, ರೈತರ ಗೌರವದ ಜತೆಗೆ ರಾಷ್ಟ್ರಧ್ವಜದ ಗೌರವಾರ್ಥ ಈ ತಿರಂಗಾ ಯಾತ್ರೆಯನ್ನು ಕೈಗೊಂಡಿದ್ದೇವೆ. ಈ ಯಾತ್ರೆಯ ಮೂಲಕ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಬಿಟ್ಟು ಎಲ್ಲರನ್ನು ಒಟ್ಟು ಮಾಡುವ ಕಾರ್ಯ ನಡೆಯಲಿದೆ ಎಂದರು.

ಈ ಯಾತ್ರೆಯಲ್ಲಿ ಪುತ್ತೂರಿನ ದೇಶಭಕ್ತರು, ಯುವಕರು, ಮಾಜಿ ಸೈನಿಕರು ಸೇರಿ ಸುಮಾರು 5 ಸಾವಿರ ಮಂದಿ ಪಾಲ್ಗೊಳ್ಳುವ ನಿಟ್ಟಿನಲ್ಲಿ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದು, ಬಿಜೆಪಿ ರಾಜ್ಯಾಧ್ಯಕ್ಷರ ಜತೆಗೆ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಜಿಲ್ಲೆಯ ವಿವಿಧ ಹಿರಿಯ ನಾಯಕರು ಪಾಲ್ಗೊಳ್ಳಲಿದ್ದಾರೆ. ಸಂಜೆ 3ಕ್ಕೆ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಗದ್ದೆಯಿಂದ ಯಾತ್ರೆ ಪ್ರಾರಂಭಗೊಂಡು ಕಿಲ್ಲೆ ಮೈದಾನದಲ್ಲಿ ಸಮಾವೇಶಗೊಳ್ಳಲಿದೆ. ಪ್ರತಿಯೊಬ್ಬರು ಕೂಡ ರಾಷ್ಟ್ರಧ್ವಜ ಹಿಡಿದು ಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಉದಯವಾಹಿನಿ ಚಿತ್ರ


## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ದೈಹಿಕ ಲಾಭಕ್ಕಾಗಿ ವಿಶೇಷವಾಗಿ ಮಾನಸಿಕ ದೃಢತೆಗಾಗಿ ಧ್ಯಾನ ಯೋಗ ಪ್ರಾರಂಭಿಸಿ. ನೀವು ನಿಮ್ಮ ಮನೆಯ ಸದಸ್ಯರನ್ನು ಎಲ್ಲಿಗಾದರೂ ಸುತ್ತಾಡಲು ಕರೆದುಕೊಂಡು ಹೋಗಬಹುದು ಮತ್ತು ನಿಮ್ಮ ಸಾಕಷ್ಟು ಹಣವು ಖರ್ಚಾಗಬಹುದು ಮಕ್ಕಳಿಂದ ಅನಿರೀಕ್ಷಿತ ಸುದ್ದಿ ಸಂತೋಷದ ಕ್ಷಣಗಳನ್ನು ತರುತ್ತದೆ.

**ವೃಷಭ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ. ನಿಮ್ಮ ಹೆಚ್ಚುವರಿ ಹಣವನ್ನು ಒಂದು ಸುರಕ್ಷಿತ ಸ್ಥಳದಲ್ಲಿರಿಸಿ ಹಾಗೂ ಇದು ಮುಂದಿನ ಕಾಲದಲ್ಲಿ ನಿಮಗೆ ಒಳ್ಳೆಯ ಆದಾಯ ತರುತ್ತದೆ.

**ಮಿಥುನ** ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೂಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ನೀವು ಜನರು ನಿಮ್ಮಿಂದ ಏನು ಬಯಸುತ್ತಾರೆಂದು ನಿಖರವಾಗಿ ತಿಳಿದಿರುವಂತೆ ತೋರುತ್ತದೆ –ಆದರೆ ಇಂದು ನಿಮ್ಮ ಖರ್ಚುಗಳಲ್ಲಿ ತುಂಬಾ ಉದಾರಿಯಾಗದಿರಲು ಪ್ರಯತ್ನಿಸಿ.

**ಕರ್ಕಾಟಕ** ಅನಗತ್ಯ ಆಲೋಚನೆಗಳು ಮನಸ್ಸನ್ನು ಆವರಿಸಬಹುದು. ಖಾಲಿ ಮೆದುಳು ದೆವ್ವಗಳ ಕಾರ್ಖಾನೆಯಾದ್ದರಿಂದ ದೈಹಿಕ ವ್ಯಾಯಾಮದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಲು ಪ್ರಯತ್ನಿಸಿ. ಭೂಮಿಯನ್ನು ಖರೀದಿಸಿದ ಈಗ ಅದನ್ನು ಮಾರಾಟ ಮಾಡಲು ಬಯಸುವ ಜನರು ಉತ್ತಮ ಖರೀದಿದಾರರನ್ನು ಕಾಣಬಹುದು.

**ಸಿಂಹ** ಸಂತಸದ ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತದೆ. ಇಂದು ನೀವು ಆಲ್ಕೊಹಾಲ್ಯುಕ್ತ ಮದ್ಯವನ್ನು ಸೇವಿಸಬಾರದು, ಮಾದಕತೆಯ ಸಂದರ್ಭದಲ್ಲಿ ನೀವು ಯಾವುದೇ ಬೆಲೆಬಾಳುವ ವಸ್ತುಗಳನ್ನು ಕಳೆದುಕೊಳ್ಳಬಹುದು.

**ಕನ್ಯಾ** ನೀವು ಜೀವನವನ್ನು ಸಂತೋಷದಿಂದ ಅನುಭವಿಸಲು ಸಿದ್ಧವಾಗುತ್ತಿದ್ದ ಹಾಗೆ ನಿಮಗೆ ಸಂತೋಷ ಆನಂದ. ದೀರ್ಘಕಾಲದ ದೃಷ್ಟಿಕೋನದಿಂದ ಹೂಡಿಕೆ ಮಾಡಬೇಕು. ಇತ್ತೀಚೆಗೆ ನಿಮ್ಮ ವೈಯಕ್ತಿಕ ಜೀವನ ನಿಮ್ಮ ಗಮನದ ಕೇಂದ್ರಬಿಂದುವಾಗಿದೆ ಆದರೆ ಇಂದು ನೀವು ಸಾಮಾಜಿಕ ಕೆಲಸ, ದಾನದ ಮೇಲೆ ಗಮನ ಹರಿಸುತ್ತೀರಿ.

**ತುಲಾ** ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ಸಂಬಂಧಗಳೊಂದಿಗಿನ ಸಂಬಂಧಗಳು ಹಾಗೂ ಬಂಧಗಳ ನವೀಕರಣದ ಒಂದು ದಿನ. ನ್ಯಾಯಯುತವಾದ ಮತ್ತು ಉದಾರ ಪ್ರೀತಿಯಿಂದ ಪುರಸ್ಕೃತಗೊಳ್ಳುವ ಸಾಧ್ಯತೆಯಿದೆ.

**ವೃಶ್ಚಿಕ** ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ಹೊಸ ಆರ್ಥಿಕ ಒಪ್ಪಂದ ಕುದುರಿಸಲಾಗುತ್ತದೆ ಕುಟುಂಬದ ಸದಸ್ಯರು ನಿಮ್ಮ ಪ್ರಯತ್ನ ಸಮರ್ಪಣೆಯನ್ನು ಪ್ರಶಂಸಿಸುತ್ತಾರೆ ಈ ದಿನ ಒಂದು ಸುಂದರ ಸಂದೇಶದೊಂದಿಗೆ ಸಂತೋಷದಿಂದ ತುಂಬಿದೆ.

**ಧನಸ್ಸು** ನಿಮ್ಮ ಹಾಸ್ಯಪ್ರಜ್ಞೆ ಇನ್ನೊಬ್ಬರಿಗೆ ಸಂತೋಷ ವಸ್ತುಗಳನ್ನು ಹೊಂದುವುದರಲ್ಲದೇ ನಮ್ಮೊಳಗೇ ಇದೆಯೆಂದು ಅರ್ಥ ಮಾಡಿಸುವುದರಿಂದ ಅವರು ಸ್ವತಃ ಈ ಕೌಶಲ್ಯವನ್ನು ಹೊಂದಲು ಪ್ರೋತ್ಸಾಹಿಸಿದಂತಾಗುತ್ತದೆ. ತೀರಾ ಖರ್ಚು ಮಾಡುವ ಮತ್ತು ಮನರಂಜನೆಗೆ ತುಂಬಾ ಖರ್ಚ ಮಾಡುವ ನಿಮ್ಮ ಪ್ರವೃತ್ತಿಗೆ ಕಡಿವಾಣ ಹಾಕಿ.

**ಮಕರ** ಯೋಗ ಮತ್ತು ಧ್ಯಾನ ನೀವು ಒಳ್ಳೆಯ ದೇಹರಚನೆ ಕಾಯ್ದುಕೊಳ್ಳಲು ಮಾನಸಿಕವಾಗಿ ಸದೃಢವಾಗಿರಲು ಸಹಾಯ ಮಾಡುತ್ತದೆ. ಹಣಕಾಸು ಲಾಭಗಳು ವಿವಿಧ ಮೂಲಗಳಿಂದ ಬರುತ್ತದೆ. ಥಿಯೇಟರ್ ಅಥವಾ ನಿಮ್ಮ ಸಂಗಾತಿಯ ಜೊತೆಗಿನ ಊಟ ನಿಮ್ಮನ್ನು ಒಂದು ಶಾಂತವಾದ ಮತ್ತು ಅದ್ಭುತ ಲಹರಿಯಲ್ಲಿರಿಸುವಂತೆ ತೋರುತ್ತದೆ.

**ಕುಂಭ** ತುಂಬಾ ಉತ್ಸಾಹ ಮತ್ತು ಸ್ಫೋಟಕ ಭಾವೋದ್ರೇಕಗಳು ನಿಮ್ಮ ನರಮಂಡಲಕ್ಕೆ ಹಾನಿ ಮಾಡಬಹುದು. ಇದನ್ನು ತಪ್ಪಿಸಲು ನಿಮ್ಮ ಭಾವನೆಗಳನ್ನು ನಿಯಂತ್ರಿಸಿ. ಇಂದು ನೀವು ಹಣಕ್ಕೆ ಸಂಬಂಧಿಸಿದ ಸಮಸ್ಯೆಯ ಕಾರಣದಿಂದ ತೊಂದರೆಗೊಳಗಾಗಬಹುದು. ಇದಕ್ಕಾಗಿ ನೀವು ನಿಮ್ಮ ಯಾವುದೇ ವಿಶ್ವಾಸಾರ್ಹರಿಂದ ಸಲಹೆಯನ್ನು ತೆಗೆದುಕೊಳ್ಳಬೇಕು.

**ಮೀನ** ಲೆಕ್ಕವಿಲ್ಲದಷ್ಟು ಗಾಬರಿಗಳು ನಿಮ್ಮ ಪ್ರತಿರೋಧಕತೆ ಆಲೋಚನಾ ಶಕ್ತಿಯನ್ನು ದುರ್ಬಲಗೊಳಿಸಬಹುದು. ಸಕಾರಾತ್ಮಕ ಚಿಂತನೆಯ ಜೊತೆ ಈ ರೋಗದ ವಿರುದ್ಧ ಹೋರಾಡಲು ಪ್ರಯತ್ನಿಸಿ. ಹಣದ ಚಲನೆ ದಿನವಿಡೀ ಮುಂದುವರಿಯುತ್ತದೆ ಮತ್ತು ದಿನದ ಅಂತ್ಯದ ನಂತರ ನೀವು ಉಳಿಸಲು ಸಾಧ್ಯವಾಗುತ್ತದೆ.

# ದ್ವಿಚಕ್ರ ವಾಹನ ಬಿದ್ದು; ವ್ಯಕ್ತಿ ಸಾವು

• **ಉದಯವಾಹಿನಿ, ಚಿತ್ತಾಪುರ;**

ತಾಲ್ಲೂಕಿನ ಬೆಳಗುಂಪಾ ಗ್ರಾಮದ ಸಮೀಪದಲ್ಲಿರುವ ಹಳ್ಳದ ಮೇಲಿಂದ ದ್ವಿಚಕ್ರ ವಾಹನದೊಂದಿಗೆ ಬಿದ್ದು ಸ್ಥಳದಲ್ಲೇ ಓರ್ವ ವ್ಯಕ್ತಿ ಮೃತ ಪಟ್ಟಿರುವ ಘಟನೆ ಜರುಗಿದೆ. ವಿಶ್ವರಾಧ್ಯ ಸಾಬಣ್ಣ ಸಂಗಾವಿ 35 ಮೃತಪಟ್ಟ ದುರ್ದೈವಿ. ನಿನ್ನೆ ರಾತ್ರಿ 8 ಗಂಟೆ ಸುಮಾರಿಗೆ ಇವಣಿ ಕಡೆಯಿಂದ ಸ್ವಂತ ಗ್ರಾಮ ಬೆಳಗುಂಪಾಗೆ ಹೋಗುತ್ತಿದ್ದಾಗ ಈ ಘಟನೆ ಜರುಗಿದೆ ಎಂದು ತಿಳಿದು ಬಂದಿದೆ. ಸುದ್ದಿ ತಿಳಿಯುತ್ತಿದ್ದಂತೆ ಸಿಪಿಐ ಜಗದೇವಪ್ಪ ಪಾಳಾ, ಪಿಎಸ್'ಐ ಗೌತಮ್, ಸಿಬ್ಬಂದಿಗಳಾದ ವೀರಶೆಟ್ಟಿ, ಸಂತೋಷ, ಬಸವಣ್ಣ ಅವರು ಸ್ಥಳಕ್ಕೆ ಭೇಟಿ ನೀಡಿ ಪರೀಶಿಲನೆ ನಡೆಸಿದರು. ಈ ಕುರಿತು ಮಾಡಬೂಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

# ವಿಜಯನಗರ ಲಾಕ್‌ಅಪ್ ಡೆತ್ ಕೇಸ್ ಕರ್ತವ್ಯದಲ್ಲಿದ್ದ ಇಬ್ಬರು ಪೊಲೀಸರ ಬಂಧನ

• **ಉದಯವಾಹಿನಿ, ಹೊಸಪೇಟೆ:**

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ಠಾಣೆಯಲ್ಲಿ ನಡೆದ 38 ವರ್ಷದ ದಿನಗೂಲಿ ಕಾರ್ಮಿಕನ ಕಸ್ಟಡಿಯಲ್ ಡೆತ್ (ಲಾಕ್‌ಅಪ್ ಡೆತ್) ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಡ್ ಕಾನ್‌ಸ್ಟೆಬಲ್ ಸೇರಿದಂತೆ ಇಬ್ಬರು ಪೊಲೀಸ್ ಸಿಬ್ಬಂದಿಯನ್ನು ಆಗಸ್ಟ್ 3 ರಂದು ಬಂಧನಕ್ಕೊಳಪಡಿಸಲಾಗಿದೆ.ಬಂಧಿತರನ್ನು ಹೆಡ್ ಕಾನ್‌ಸ್ಟೆಬಲ್ ಇಟಗಿ ರಾಘವೇಂದ್ರ ಮತ್ತು ಪೊಲೀಸ್ ಕಾನ್‌ಸ್ಟೆಬಲ್ ವೆಂಕಟೇಶ್ ಎಂದು ಗುರುತಿಸಲಾಗಿದೆ.ಹರಪನಹಳ್ಳಿ ಮೂಲದ, ಪ್ರಸ್ತುತ ಹಗರಿಬೊಮ್ಮನಹಳ್ಳಿಯಲ್ಲಿ ವಾಸಿಸುತ್ತಿದ್ದ ಖಲೀಲುಲ್ಲಾ (ಖಲೀಲ್) ಮೃತಪಟ್ಟ ದುರ್ದೈವಿ. ಮೂಲಗಳ ಪ್ರಕಾರ, ಕೌಟುಂಬಿಕ ಕಲಹಕ್ಕೆ ಸಂಬಂಧಿಸಿದ ದೂರಿನ ಹಿನ್ನೆಲೆಯಲ್ಲಿ ಶನಿವಾರ ರಾತ್ರಿ ಖಲೀಲ್ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದರು.ಪೊಲೀಸ್ ಠಾಣೆಗೆ ಕರೆತರುವ ವೇಳೆ ಖಲೀಲ್ ಮತ್ತು ಪೊಲೀಸರ ನಡುವೆ ವಾಗ್ವಾದ ಹಾಗೂ ತಳ್ಳಾಟ ನಡೆದಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.ವಶದಲ್ಲಿದ್ದ ವೇಳೆ ಖಲೀಲ್ ಅವರ ಆರೋಗ್ಯ ಏಕಾಏಕಿ ಹದಗೆಟ್ಟಿದ್ದು, ತಕ್ಷಣ ಸಮೀಪದ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ವೈದ್ಯರು ಅವರನ್ನು ಆಸ್ಪತ್ರೆಗೆ ತಲುಪುವಷ್ಟರಲ್ಲೇ ಮೃತಪಟ್ಟಿದ್ದಾರೆ ಎಂದು ಘೋಷಿಸಿದ್ದಾರೆ.ಈ ಘಟನೆ ಬಳಿಕ ಪೊಲೀಸ್ ಠಾಣೆ ಎದುರು ಖಲೀಲ್ ಕುಟುಂಬಸ್ಥರು ಸಂಬಂಧಿಕರು ದೊಡ್ಡ ಸಂಖ್ಯೆಯಲ್ಲಿ ಜಮಾಯಿಸಿ, ಇದು ಕಸ್ಟೋಡಿಯಲ್ ಡೆತ್ ಎಂದು ಆರೋಪಿಸಿ ತಪ್ಪಿತಸ್ಥ ಪೊಲೀಸ್ ಸಿಬ್ಬಂದಿಯನ್ನು ತಕ್ಷಣ ಬಂಧಿಸಿ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.ಕುಟುಂಬದ ಆರೋಪದ ಮೇರೆಗೆ ಕರ್ತವ್ಯದಲ್ಲಿದ್ದ ಇಬ್ಬರು ಪೊಲೀಸ್ ಸಿಬ್ಬಂದಿಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದ್ದು, ಬಳಿಕ ಅವರನ್ನು ಬಂಧಿಸಲಾಗಿದೆ.

# ನಾನು ರಾಜೀನಾಮೆ ಕೊಡಲ್ಲ: ಗೋಪಾಲಕೃಷ್ಣ ಟಾಂಗ್!

• **ಉದಯವಾಹಿನಿ, ಶಿವಮೊಗ್ಗ:**



ಉದಯವಾಹಿನಿ ಚಿತ್ರ

ಸಚಿವ ಸ್ಥಾನ ಕೈತಪ್ಪಿದ ಬೆನ್ನಲ್ಲೇ ಬೆಳಗ್ಗೆ 10 ಗಂಟೆಗೆ ರಾಜೀನಾಮೆ ನೀಡುವುದಾಗಿ ನಿನ್ನೆ ಘೋಷಿಸಿದ್ದರು. ಆದರೆ ಇದೀಗ ಬೇಳೂರು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಟಾಂಗ್ ನೀಡುವುದರ ಜೊತೆಗೆ ತಾವು ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡಲ್ಲ ಎಂದು ಉಲ್ಟಾ ಹೊಡೆದಿದ್ದಾರೆ.ಸಿದ್ದರಾಮಯ್ಯ ಅವರು ಈಗ ಖುಷಿ ಇದ್ದಾರಲ್ಲ. ಹಾಗೆ ನೂರು ವರ್ಷ ಖುಷಿಯಿಂದ ಇರಲಿ. ಅವರ ಅನುಯಯಿಗಳಿಗೆ ಸಿಕ್ಕಿದೆ ಅಲ್ವಾ ಇನ್ನೂ ನೂರು ವರ್ಷ ಚೆನ್ನಾಗಿರಲಿ, ನನಗೆ ಬೇಜಾರಾಗಿದೆ, ನನಗೆ ಕಣ್ಣೀರು ಬರ್ತಿದೆ. ಗ್ಲಾಸ್ ತೆಗೆದು ತೋರಿಸಲಾ ಎಂದು ಪರೋಕ್ಷವಾಗಿ ಮಾಜಿ ಸಿಎಂ ಮೇಲೆ ಬೇಳೂರು ಗೋಪಾಲಕೃಷ್ಣ ಅಸಮಾಧಾನ ಹೊರಹಾಕಿದ್ದಾರೆ ರಾಜೀನಾಮೆ ನೀಡುವವರದ್ದನ್ನು ತಕ್ಷಣವೇ ಪರಿಗಣಿಸಿ ಎಂದಿದ್ದಕ್ಕೆ ನಾನೇನು ಭಯಪಟ್ಟಿಲ್ಲ. ನಾನು ಭಯಪಡುವ ಮನುಷ್ಯ ಅಲ್ಲ. ನಾನೇ ಸಿಎಂ, ಹಾಗಾಗಿ ನಿಮ್ಮ ಜೊತೆ ಇದ್ದೇನೆ ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ. ಅವರಿಗಾಗಿ ನಾನು ರಾಜೀನಾಮೆ ನಿರ್ಣಯವನ್ನು ವಾಪಾಸ್ ಪಡೆದುಕೊಂಡಿದ್ದೇನೆ. ತಾವು ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುವುದಿಲ್ಲ ಎಂದು ಬೇಳೂರು ಗೋಪಾಲಕೃಷ್ಣ ಸ್ಪಷ್ಟಪಡಿಸಿದ್ದಾರೆ.ಇಂದು ಸಭೆಯಿದೆ. ಅಲ್ಲಿ ಯಾರೂ ರಾಜೀನಾಮೆ ಕೊಡಬೇಡಿ ಎಂದು ಹೇಳುತ್ತೇನೆ.

# ಕುರುಬ ಸಮಾಜಕ್ಕೆ ಅನ್ಯಾಯ: ನ್ಯಾಯಯುತ ಪ್ರಾತಿನಿಧ್ಯ ನೀಡುವಂತೆ ರಾಜ್ಯ ಕುರುಬರ ಸಂಘ ಆಗ್ರಹ

• **ಉದಯವಾಹಿನಿ, ಹುಬ್ಬಳ್ಳಿ:**

ರಾಜ್ಯ ಸಚಿವ ಸಂಪುಟ ವಿಸ್ತರಣೆಯಲ್ಲಿ ಕುರುಬ ಸಮಾಜಕ್ಕೆ ಸಮರ್ಪಕ ಪ್ರಾತಿನಿಧ್ಯ ದೊರೆಯದಿರುವುದು ಅತ್ಯಂತ ಬೇಸರ ಮತ್ತು ಅಸಮಾಧಾನಕ್ಕೆ ಕಾರಣವಾಗಿದೆ ಎಂದು ರಾಜ್ಯ ಕುರುಬರ ಸಂಘದ ರಾಜ್ಯಾಧ್ಯಕ್ಷ ಸಿದ್ದಣ್ಣ ತೇಜಿ ಹೇಳಿದ್ದಾರೆ. ನಗರದಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುರುಬ ಸಮಾಜವು ರಾಜ್ಯದ ಅತಿದೊಡ್ಡ ಹಿಂದುಳಿದ ಸಮುದಾಯಗಳಲ್ಲಿ ಒಂದಾಗಿದ್ದು, ಕಾಂಗ್ರೆಸ್ ಪಕ್ಷದ ಸಂಘಟನೆ ಮತ್ತು ಚುನಾವಣಾ ಗೆಲುವಿಗೆ ಮಹತ್ವದ ಕೊಡುಗೆ ನೀಡಿದೆ. ಆದರೂ ಸಚಿವ ಸಂಪುಟದಲ್ಲಿ ಸಮಾಜಕ್ಕೆ ನಿರೀಕ್ಷಿತ ಸ್ಥಾನಮಾನ ನೀಡಲಾಗಿಲ್ಲ. ವಿಶೇಷವಾಗಿ ಉತ್ತರ ಕರ್ನಾಟಕದ ಕುರುಬ ಸಮಾಜದ ಜನಪ್ರತಿನಿಧಿಗಳಿಗೆ ಯಾವುದೇ ಅವಕಾಶ ದೊರೆಯದಿರುವುದು ಸಮುದಾಯದ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ಅವರು ಪ್ರತಿಪಾದಿಸಿದರು. ಇದಲ್ಲದೇ, ಸಚಿವ ಸ್ಥಾನಕ್ಕೆ ಗಾಯತ್ರಿ ಶಾಂತೇಗೌಡ ಅವರ ಹೆಸರು ಪ್ರಕಟವಾಗಿ ನಂತರ



ಉದಯವಾಹಿನಿ ಚಿತ್ರ

ಕೈಬಿಡಲಾಗಿದೆ ಎಂಬ ವರದಿಗಳಿಂದ ಸಮಾಜದಲ್ಲಿ ತೀವ್ರ ನಿರಾಸೆ ಉಂಟಾಗಿದೆ. ಈ ಬಗ್ಗೆ ಸರ್ಕಾರ ಮತ್ತು ಪಕ್ಷದ ಹೈಕಮಾಂಡ್ ಸ್ಪಷ್ಟನೆ ನೀಡಬೇಕು ಎಂದು ಅವರು ಒತ್ತಾಯಿಸಿದರು. ಕುರುಬ ಸಮಾಜಕ್ಕೆ ಅದರ ಜನಸಂಖ್ಯೆ, ರಾಜಕೀಯ ಕೊಡುಗೆ ಹಾಗೂ ಸಾಮಾಜಿಕ ಪ್ರಾತಿನಿಧ್ಯಕ್ಕೆ ಅನುಗುಣವಾಗಿ ಸಚಿವ ಸಂಪುಟದಲ್ಲಿ ಕನಿಷ್ಠ ಐದು ಸ್ಥಾನಗಳನ್ನು ನೀಡಬೇಕಿತ್ತು. ಕೇವಲ ಇಬ್ಬರಿಗೆ ಮಾತ್ರ ಅವಕಾಶ ಕಲ್ಪಿಸಿರುವುದು ನ್ಯಾಯಸಮ್ಮತವಲ್ಲ. ಖಾಲಿ ಇರುವ ಸಚಿವ ಸ್ಥಾನವನ್ನು ಶ್ರೀಮತಿ ಗಾಯತ್ರಿ ಶಾಂತೇಗೌಡ ಅವರಿಗೆ ಅಥವಾ ಉತ್ತರ ಕರ್ನಾಟಕದ ಕುರುಬ ಸಮಾಜದ ಅರ್ಹ ಶಾಸಕರಲ್ಲಿ ಒಬ್ಬರಿಗೆ ನೀಡಬೇಕು ಎಂದು ಅವರು ಇದೇ ವೇಳೆ ಆಗ್ರಹಿಸಿದರು.

ಸಮಾಜದ ನ್ಯಾಯಯುತ ಬೇಡಿಕೆಯನ್ನು ಸರ್ಕಾರ ನಿರ್ಲಕ್ಷಿಸಿದರೆ ರಾಜ್ಯಾದ್ಯಂತ ಕುರುಬ ಸಮಾಜವನ್ನು ಸಂಘಟಿಸಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಮುಂದಿನ ಚುನಾವಣೆಯಲ್ಲಿ ಸಮುದಾಯದ ಅಭಿಪ್ರಾಯವನ್ನು ಪ್ರಜಾಪ್ರಭುತ್ವದ ಮೂಲಕ ವ್ಯಕ್ತಪಡಿಸಲಾಗುವುದು ಎಂದು ಅವರು ಎಚ್ಚರಿಸಿದರು. ಈ ಸಂಬಂಧ ಶೀಘ್ರದಲ್ಲೇ ಮುಖ್ಯಮಂತ್ರಿಗಳನ್ನು ನಿಯೋಗದೊಂದಿಗೆ ಭೇಟಿ ಮಾಡಿ ಸಮುದಾಯದ ಮನವಿಯನ್ನು ಸಲ್ಲಿಸಿ, ನ್ಯಾಯಯುತ ಪ್ರಾತಿನಿಧ್ಯಕ್ಕಾಗಿ ಚರ್ಚೆ ನಡೆಸಲಾಗುವುದು ಎಂದು ಅವರು ತಿಳಿಸಿದರು.

# ಜಿಲ್ಲೆಯಲ್ಲಿ ಮೂರು ವರ್ಷದಲ್ಲಿ 2,944 ಕೋಟಿ ರೂ ವಿನಿಯೋಗ!

## 2023ರ ಚುನಾವಣಾ ಪ್ರಣಾಳಿಕೆಯಲ್ಲಿ ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ ಶಕ್ತಿಯೋಜನೆಗಳನ್ನು ಘೋಷಣೆ ಮಾಡಲಾಗಿತ್ತು

• **ಉದಯವಾಹಿನಿ, ಹೊಸಪೇಟೆ.**

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಾದ ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮಿ, ಶಕ್ತಿಯೋಜನೆ ಹಾಗೂ ಯುವನಿಧಿ ಪಂಚ ಗ್ಯಾರಂಟಿ ಯೋಜನೆಗಳಿಗೆ ವಿಜಯನಗರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರದ ಖಜಾನೆಯಿಂದ 2944 ಕೋಟಿ ರೂ ಅನುದಾನ ವಿನಿಯೋಗ ಮಾಡಲಾಗಿದೆ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ

**1 : ರಾಜ್ಯದ ಕಟ್ಟ ಕಡೆಯ ವ್ಯಕ್ತಿಗೂ**
**2 : 285 ಕೋಟಿ ಪಾವತಿ ಮಾಡಲಾಗಿದೆ**
**3 : ಒಟ್ಟು ರೂ.1,727 ಕೋಟಿ ಹಣ**

ರಾಜ್ಯ ಉಪಾಧ್ಯಕ್ಷ ಪಿ.ಟಿ.ಪರಮೇಶ್ವರ್ ನಾಯ್ಕ್ ತಿಳಿಸಿದರು.

ರಾಜ್ಯ ಸರ್ಕಾರವು 2023ರ ಚುನಾವಣಾ ಪ್ರಣಾಳಿಕೆಯಲ್ಲಿ ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ ಶಕ್ತಿ ಯೋಜನೆಗಳನ್ನು ಘೋಷಣೆ ಮಾಡಲಾಗಿತ್ತು. ಅದರಂತೆ ಸರ್ಕಾರ ರಚನೆಯಾದ ಕೆಲವೇ ದಿನಗಳಲ್ಲಿ ಅನುಷ್ಠಾನಗೊಳಿಸಿ ರಾಜ್ಯದ ಕಟ್ಟ ಕಡೆಯ ವ್ಯಕ್ತಿಗೂ ಯೋಜನೆಗಳ ತಲುಪಿಸುವ ಮೂಲಕ ರಾಜ್ಯ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದಿದೆ. ಈ ಯೋಜನೆಗಳಲ್ಲಿನ ಕೆಲವು ಲೋಪಗಳನ್ನು ಸರಿಪಡಿಸಿಕೊಂಡು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಅರ್ಹ ಫಲಾನುಭವಿಗಳಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ಪಂಚಗ್ಯಾರಂಟಿ ಯೋಜನೆಗಳಲ್ಲಿ ಅತ್ಯಂತ ಮಹತ್ವಾಕಾಂಕ್ಷಿ ಯೋಜನೆಯಾದ ಅನ್ನಭಾಗ್ಯ ಯೋಜನೆಯಡಿ ಜಿಲ್ಲೆಯ



ಉದಯವಾಹಿನಿ ಚಿತ್ರ

> ಬಸ್ ನಿಲ್ದಾಣ, ಜನನಿಬಿಡ ಸಾರ್ವಜನಿಕ ಪ್ರದೇಶಗಳಲ್ಲಿ ಯುವನಿಧಿ ಯೋಜನೆ ನೊಂದಣಿ ಕುರಿತು ಜಾಗೃತಿ ಮೂಡಿಸಲು ಯೋಜನೆ ರೂಪಿಸಲಾಗಿದೆ. ಇದಕ್ಕಾಗಿ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಸೂಕ್ತ ಕ್ರಮವಹಿಸಲಾಗುವುದು ಎಂದು ತಿಳಿಸಿದರು. -ಪಿ.ಟಿ.ಪರಮೇಶ್ವರ್ ನಾಯ್ಕ್

> ಈ ಮರು ಸಮೀಕ್ಷೆ ಪ್ರಕ್ರಿಯೆಯಲ್ಲಿ ವಾಣಿಜ್ಯ ತೆರಿಗೆ, ಆದಾಯ ತೆರಿಗೆ, ಹೊರ ರಾಜ್ಯದ ಫಲಾನುಭವಿಗಳ ಗುರುತಿಸಿ ಅನರ್ಹರನ್ನು ಗ್ಯಾರಂಟಿಗಳಿಂದ ಹೊರಗಿಡುವ ಮೂಲಕ ಅರ್ಹ ಫಲಾನುಭವಿಗಳಿಗೆ ಯೋಜನೆ ತಲುಪಿಸಲಾಗುವುದು ಎಂದು ತಿಳಿಸಿದರು. -ಪಿ.ಟಿ.ಪರಮೇಶ್ವರ್ ನಾಯ್ಕ್

ಸುಮಾರು 3.47 ಲಕ್ಷ ಕುಟುಂಬಗಳಿಗೆ 2023ರ ಆಗಸ್ಟ್‌ನಿಂದ 2024ರ ಡಿಸೆಂಬರ್ ವರೆಗೆ ನೇರವಾಗಿ ಫಲಾನುಭವಿಗಳಿಗೆ ಡಿಬಿಟಿ ಮೂಲಕ ರೂ. 285 ಕೋಟಿ ಪಾವತಿ ಮಾಡಲಾಗಿದೆ. ನಂತರ ಹಣದ ಬದಲಾಗಿ ಪ್ರತಿಫಲಾನುಭವಿಗೆ 5 ಕೆಜಿಯಂತೆ ಪಡಿತರ ಅಕ್ಕಿಯನ್ನು ವಿತರಣೆ ಮಾಡಲಾಗುತ್ತಿದೆ. ಅದರಂತೆ ಗೃಹಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ ನೊಂದಣಿಯಾದ ಒಟ್ಟು 3,21,966 ಫಲಾನುಭವಿಗಳಿಗೆ 2023ರ ಜೂನ್ನಿಂದ 2026ರ ಜೂನ್ವರೆಗೆ 468.26 ಕೋಟಿ ಫಲಾನುಭವಿಗಳ ಪರವಾಗಿ ಸಹಾಯಧನ ನೀಡಲಾಗಿದೆ.

ಗೃಹಲಕ್ಷ್ಮಿ ಯೋಜನೆಯಡಿ ಜಿಲ್ಲೆಯಲ್ಲಿ ಒಟ್ಟಾರೆ 3,02,275 ಪಡಿತರ ಚೀಟಿಗಳಿದ್ದು ಈ ಪೈಕಿ 3.02.017 ಫಲಾನುಭವಿಗಳು ನೊಂದಣಿಯಾಗಿದ್ದಾರೆ. ನೊಂದಣಿಯಾದ ಫಲಾನುಭವಿಗಳಿಗೆ ಗೃಹಲಕ್ಷ್ಮಿ ಯೋಜನೆಯಡಿ 2023ರ ಆಗಸ್ಟ್‌ನಿಂದ 2026 ಮೇ ವರೆಗೆ ಒಟ್ಟು ರೂ.1,727 ಕೋಟಿ ಹಣ ಫಲಾನುಭವಿಗಳ ಖಾತೆಗೆ ನೇರವಾಗಿ ಸಂದಾಯ ಮಾಡಲಾಗಿದೆ. ಜೂನ್ ತಿಂಗಳ ಅನುದಾನ ರೂ.31.38 ಕೋಟಿ ಬಿಡುಗಡೆಯಾಗಿದ್ದು, ಶೀಘ್ರದಲ್ಲೇ ಪಾವತಿಯಾಗಲಿದೆ ಎಂದರು. ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಇಡೀ ದೇಶವೇ ಮೆಚ್ಚಿರುವ

> ಗೃಹಲಕ್ಷ್ಮಿ ಯೋಜನೆಯಡಿ ರಾಜ್ಯಾದ್ಯಂತ ನೊಂದಣಿಯಾಗಿ ಮೃತರಾದ ಬ್ಯಾಂಕ್ ಖಾತೆಗೆ ಸುಮಾರು ರೂ.117 ಕೋಟಿ ಪಾವತಿಯಾಗಿದೆ. ಮೃತರ ಖಾತೆಗೆ ಪಾವತಿಯಾದ ಮೊತ್ತದಲ್ಲಿ ಈಗಾಗಲೇ ರೂ.20 ಕೋಟಿ ಮೊತ್ತವನ್ನು ಸರ್ಕಾರದ ಖಜಾನೆಗೆ ಹಿಂತಿರುಗಿಸಲಾಗಿದೆ. ಬಾಕಿ ಹಣ ವಾಪಾಸು ಪಡೆಯಲು ಪ್ರಯತ್ನ ನಡೆದಿದೆ.

ಯೋಜನೆ ಶಕ್ತಿ ಯೋಜನೆ. ಈ ಯೋಜನೆಯಡಿ ಜಿಲ್ಲೆಯಲ್ಲಿ 2026 ಜೂನ್ವರೆಗೂ 10.29 ಕೋಟಿ ವಯಸ್ಕ ಪ್ರಯಾಣಿಕರು ಹಾಗೂ 47ಲಕ್ಷ ಮಕ್ಕಳು ಪ್ರಯಾಣ ಸೇರಿ ಒಟ್ಟು 10.76 ಕೋಟಿ ಪ್ರಯಾಣಿಕರು ಪ್ರಯಾಣಿಸಿದ್ದು, ಇದಕ್ಕಾಗಿ ರೂ.430 ಕೋಟಿ ಹಣ ಪಾವತಿಸಲಾಗಿದೆ.

ಅದಲ್ಲದೇ ಇತ್ತೀಚೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರದ 6ನೇ ಗ್ಯಾರಂಟಿ ಯೋಜನೆಯಡಿ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಅವಕಾಶ ನೀಡಲಾಗಿದೆ. ಅದರಂತೆ ಜಿಲ್ಲೆಯಲ್ಲಿ ಇದುವರೆಗೂ 14,638 ವಿದ್ಯಾರ್ಥಿಗಳಿಗೆ ಉಚಿತ ಬಸ್ಪಾಸ್ ವಿತರಣೆ ಮಾಡಲಾಗಿದೆ ಎಂದು ತಿಳಿಸಿದರು. ಪಂಚಗ್ಯಾರಂಟಿ ಯೋಜನೆಗಳ ಮತ್ತೊಂದು ಮಹತ್ವಾಕಾಂಕ್ಷಿ ಯೋಜನೆಯಾದ ಯುವನಿಧಿ ಯೋಜನೆಯಡಿ ಇದುವರೆಗೂ ಜಿಲ್ಲೆಯಲ್ಲಿ 12,982 ಫಲಾನುಭವಿಗಳು ನೊಂದಣಿಯಾಗಿದ್ದಾರೆ.

ನೊಂದಣಿಯಾದವರ ಪೈಕಿ 12,688 ಪದವೀಧರರು ಹಾಗೂ 294 ಡಿಪ್ಲೊಮಾ ಪದವೀಧರರು ಸೇರಿದ್ದಾರೆ.

ನೊಂದಣಿಯಾದ ವಿದ್ಯಾರ್ಥಿಗಳಿಗೆ ರೂ.32.93 ಕೋಟಿ ಸಹಾಯಧನ ವಿತರಣೆ ಮಾಡಲಾಗಿದೆ ಎಂದು ತಿಳಿಸಿದ ಅವರು, ಜಿಲ್ಲೆಯಲ್ಲಿ ಯುವನಿಧಿ ಯೋಜನೆಯಡಿ ನೊಂದಣಿ ಪ್ರಕ್ರಿಯೆ ಸಾಕಷ್ಟು ಹಿಂದುಳಿದಿದೆ.

# ಮೆದುಳಿನ ಆರೋಗ್ಯಕ್ಕೆ ಮಾರಕ : ಡಿಹೆಚ್‌ಓ ಡಾ.ಟಿ.ಲಿಂಗರಾಜು

• **ಉದಯವಾಹಿನಿ, ಹೊಸಪೇಟೆ.**

ಮೆದುಳು ಮಾನವ ದೇಹದ ನಿಯಂತ್ರಣ ಕೇಂದ್ರ. ಮೆದುಳಿಗೆ ತೊಂದರೆ ಉಂಟಾದರೆ ಅದು ಕೇವಲ ಒಬ್ಬ ವ್ಯಕ್ತಿಯ ಆರೋಗ್ಯವನ್ನಷ್ಟೇ ಅಲ್ಲ, ಇಡೀ ಕುಟುಂಬದ ಆರ್ಥಿಕ ಹಾಗೂ ಮಾನಸಿಕ ನೆಮ್ಮದಿಯನ್ನೇ ಕಸಿದುಕೊಳ್ಳುತ್ತದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಟಿ. ಲಿಂಗರಾಜು ಅವರು ಕಳವಳ ವ್ಯಕ್ತಪಡಿಸಿದರು.

ನಗರದ ಜಿಲ್ಲಾ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ ಜಿಲ್ಲಾ ಆರೋಗ್ಯ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಹೊಸಪೇಟೆ ಉಪವಿಭಾಗದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಆಯೋಜಿಸಲಾಗಿದ್ದ ವಿಶ್ವ ಮೆದುಳು ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಮಾನಸಿಕ ಒತ್ತಡ,



ಉದಯವಾಹಿನಿ ಚಿತ್ರ

ರಕ್ತದೊತ್ತಡ, ಮಧುಮೇಹ, ದುಶ್ಚಟಗಳು ಅಸಮರ್ಪಕ ಆಹಾರ ಪದ್ಧತಿ ಹಾಗೂ ಶಾರೀರಿಕ ಶ್ರಮ ಅಥವಾ ವ್ಯಾಯಾಮದ ಕೊರತೆಯಿಂದ ಮೆದುಳು ಸಂಬಂಧಿತ ರೋಗಗಳು ಹೆಚ್ಚಾಗುತ್ತಿವೆ. ಪಾರ್ಶ್ವವಾಯು, ಮೆದುಳಿನ ರಕ್ತಸ್ರಾವ, ನರಗಳ ದೌರ್ಬಲ್ಯ ಹಾಗೂ ಮರೆವಿನ ಕಾಯಿಲೆ ಹೆಚ್ಚಾಗಿ ಕಂಡು ಬರುತ್ತಿದ್ದು, ಸಕಾಲದಲ್ಲಿ ಚಿಕಿತ್ಸೆ ಪಡೆದು ಜಾಗೃತಿ ವಹಿಸುವುದು ತೀರಾ ಅಗತ್ಯವಾಗಿದೆ ಎಂದರು. ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಭರತ್ ಮಾತನಾಡಿ,

> ಮನುಷ್ಯ ಆರೋಗ್ಯಕರ ಜೀವನ ನಡೆಸಲು ಪ್ರತಿದಿನ 7 ರಿಂದ 9 ಗಂಟೆಗಳ ಕಾಲ ನಿದ್ರೆ ಮಾಡಬೇಕು. ಸಮಯಕ್ಕೆ ಸರಿಯಾಗಿ ಪೌಷ್ಟಿಕ ಆಹಾರ ಸೇವಿಸಬೇಕು. ಜಂಕ್ ಫುಡ್ಗಳಿಂದ ದೂರವಿರುವುದು. ಹೊಸ ಕೌಶಲ್ಯಗಳನ್ನು ಕಲಿಯುವುದರಿಂದ ಮೆದುಳು ಚುರುಕಾಗಿ ಕಾರ್ಯನಿರ್ವಹಿಸಲಿದೆ ಎಂದು ತಿಳಿ ಹೇಳಿದರು. -ಡಾ.ಟಿ.ಲಿಂಗರಾಜು

ಈ ಹಿಂದೆ ಪಾರ್ಶ್ವವಾಯು ಕೇವಲ ಹಿರಿಯ ನಾಗರಿಕರಲ್ಲಿ ಮಾತ್ರ ಕಂಡು ಬರುತ್ತಿತ್ತು. ಆದರೆ ಬದಲಾದ ಕೆಟ್ಟ ಅಭ್ಯಾಸಗಳಿಂದಾಗಿ ಇತ್ತೀಚೆಗೆ ಯುವ ಸಮುದಾಯದಲ್ಲೂ ಈ ಸಮಸ್ಯೆ ಉಲ್ಬಣಿಸುತ್ತಿದೆ. ಪಾರ್ಶ್ವವಾಯು ಲಕ್ಷಣಗಳು ಕಂಡು ಬಂದಾಗ ಗೋಲ್ಡನ್ ಅವರ್ ಅಂದರೆ ಘಟನೆ ಸಂಭವಿಸಿದ 4 ಗಂಟೆಗಳ ಒಳಗಾಗಿ ಹತ್ತಿರದ ಆಸ್ಪತ್ರೆಗೆ ದಾಖಲಿಸಿದರೆ ಜೀವ ಉಳಿವು ಸಾಧ್ಯ ಎಂದರು.

# ಬೆಳೆವಿಮೆ ತಾರತಮ್ಯ ಸರಿಪಡಿಸಿ ವೈದ್ಯಕೀಯ ಶಿಕ್ಷಣ ಸಚಿವರಿಗೆ ಮಾಜಿ ಶಾಸಕ ನರಿಬೋಳ ಮನವಿ ಸಲ್ಲಿಕೆ

• **ಉದಯವಾಹಿನಿ, ಕಲಬುರಗಿ:**

ಜಿಲ್ಲೆಯ ಜೇವರ್ಗಿ ಹಾಗೂ ಯಡ್ರಾಮಿ ತಾಲ್ಲೂಕಿನ ಸಾಥಖೇಡ, ಬಿಳವಾರ, ಬಳಬಟ್ಟಿ, ಯಾಳವಾರ , ಕೋಳಕೂರ, ಕೂಡಿ, ಕರಕಿಹಳ್ಳಿ ಇಜೇರಿ ವರವಿ, ಕಡಕೋಳ, ನೆಲೋಗಿ ಹಾಗೂ ಇತರ ಗ್ರಾಮಗಳ ಎರಡನೇ ಕಂತಿನ ವಿಮಾ ಹಣ ರೈತರ ಖಾತೆಗೆ ಜಮಾ ಮಾಡಿಸುವಂತೆ ಹಾಗೂ ಸಿಸಿಐ ವರದಿ ಪೂರ್ಣಗೊಳಿಸುವಂತೆ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ಅವರಿಗೆ ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ್ ನರಿಬೋಳ ಮನವಿ ಸಲ್ಲಿಸಿದರು.

ಪ್ರಮುಖವಾಗಿ ಈ ಗ್ರಾಮಗಳ ರೈತರ ಸಂರಕ್ಷಣೆ ಪೋರ್ಟಲ್ ನಲ್ಲಿ ಸಿಸಿಐ ನಾಟ್ ಎಲಿಜೆಬಲ್ ಎಂದು ತೋರಿಸುತ್ತಿರುವ ಹಿನ್ನೆಲೆಯಲ್ಲಿ ಬೆಳೆವಿಮೆ ಪರಿಹಾರ ದೊರಕುತ್ತಿಲ್ಲ. ಹೀಗಾಗಿ ವರದಿ ಪೂರ್ಣಗೊಳಿಸಿ ಬೆಳೆ ಹಾನಿಗೆ ತಕ್ಕ ಪರಿಹಾರ ದೊರಕಿಸಲು ತಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಬೇಕೆಂದು ಸಚಿವರಲ್ಲಿ ಮನವಿ ಮಾಡಲಾಯಿತು. ತಾಂತ್ರಿಕ ದೋಷ ಸರಿಪಡಿಸಿದ್ದಲ್ಲಿ ರೈತರಿಗೆ ಬೆಳೆವಿಮೆ ಪರಿಹಾರ ದೊರಕಲು ಸಾಧ್ಯ. ಹೀಗಾಗಿ ಅಧಿಕಾರಿಗಳಿಗೆ ತಕ್ಷಣವೇ ನಿರ್ದೇಶನ ನೀಡಿ ರೈತರಿಗೆ ಪರಿಹಾರ ಅವರ ಖಾತೆಗೆ ಜಮಾ ಮಾಡಲು ಮುಂದಾಗಬೇಕೆಂದು ಕೋರಲಾಯಿತು. ಹಾಗೂ ಜಂಟಿ ಕೃಷಿ ನಿರ್ದೇಶಕರಿಗೆ ಸೂಚನೆ ನೀಡಿದರು.

# ವಿದ್ಯಾರ್ಥಿಯ ಜೀವನ ಬದಲಾಗುವ ಸಮಯ,ಶಿಸ್ತು ಬಹಳ ಮುಖ್ಯ

• **ಉದಯವಾಹಿನಿ,ಚಿಂಚೋಳಿ**

ಪಿಯುಸಿ ತರಗತಿಯೇ ವಿದ್ಯಾರ್ಥಿಗಳ ಜೀವನ ಬದಲಾಗುವ ಸಮಯವಾಗಿದೆ ಹಾಗಾಗಿ ವಿದ್ಯಾರ್ಥಿಗಳು ಒಳ್ಳೆಯ ಶಿಸ್ತು,ಸಂಸ್ಕೃತಿ, ಸಂಸ್ಕಾರ ಕಾಪಾಡಿಕೊಂಡರೆ ಉನ್ನತಮಟ್ಟಕ್ಕೆ ಬೆಳೆಯಲು ಸಾಧ್ಯವಾಗುತ್ತದೆ ಎಂದು ಮಲ್ಲಿಕಾರ್ಜುನ ಪಾಲಾಮೂರ್ ಹೇಳಿದರು.ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ ಹಾಗೂ ಎನ್‌ಎಸ್‌ಎಸ್ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು,ವಿದ್ಯಾರ್ಥಿಗಳು ಶಿಸ್ತು ಜೀವನದಲ್ಲಿ ಅಳವಡಿಸಿಕೊಳ್ಳಬೇಕು.ಪಿಯುಸಿ ಎರಡು ವರ್ಷದಲ್ಲಿ ಕಷ್ಟಪಟ್ಟು ಚನ್ನಾಗಿ ವಿದ್ಯಾಭ್ಯಾಸ ಮಾಡಿದರೆ ಮುಂದೆ 80ವರ್ಷಗಳ ಕಾಲ ಸುಖಕರವಾಗಿ ಬಾಳುತ್ತೀರಿ,ಇಲ್ಲದಿದ್ದರೆ 80ವರ್ಷಗಳ ಕಾಲ ಬಹಳಷ್ಟು ಕಷ್ಟಪಡಬೇಕಾಗುತ್ತದೆ,ವಿದ್ಯಾರ್ಥಿಗಳು ತಂದೆ ತಾಯಂದಿಯರಿಗೆ ಒಳ್ಳೆಯ ಮಕ್ಕಳಾಗಿ,ಗ್ರಾಮಕ್ಕೆ



ಉದಯವಾಹಿನಿ ಚಿತ್ರ

ಒಳ್ಳೆಯ ಗ್ರಾಮಸ್ಥರಾಗಿ ಇದ್ದು ತಾಲ್ಲೂಕಿಗೆ ಜಿಲ್ಲೆಗೆ ಕೀರ್ತಿ ತಂದು ಉನ್ನತ ಹುದ್ದೆಗಳು ಪಡೆಯಬೇಕು,ಪಿಯುಸಿಯಲ್ಲಿ 80ಪ್ರತಿಶತಃ ಹಾಜರಾತಿ ಇದ್ದರೆ ಮಾತ್ರ ಪರೀಕ್ಷೆ ಬರೆಯಲು ಅರ್ಹರು ಇಲ್ಲದಿದ್ದರೆ ಇಲ್ಲ ಎಂದರು.ಈ ಸಂದರ್ಭದಲ್ಲಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ದೇವೀಂದ್ರಪ್ಪ ಹೋಳ್ಕರ,ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸುರೇಶ ಕೊರವಿ,ಅಗ್ನಿಶಾಮಕ ದಳದ ಅಧಿಕಾರಿ ಎಸ್.ಕೆ.ಹಸನ್ ಅಲಿ,ಬಸವರಾಜ ಐನೋಳ್ಳಿ ಸೇರಿದಂತೆ ಅನೇಕ ವಿದ್ಯಾರ್ಥಿಗಳು ಇದ್ದರು.

# 80ನೇ ಸ್ವಾತಂತ್ರ್ಯೋತ್ಸವದ ಪೂರ್ವಭಾವಿ ಸಭೆಗೆ ಅಧಿಕಾರಿಗಳು ಗೈರು

• **ಉದಯವಾಹಿನಿ, ಹಗರಿಬೊಮ್ಮನಹಳ್ಳಿ,**

ಪಟ್ಟಣದ ತಾಪಂ ಸಭಾಂಗಣದಲ್ಲಿ ಸೋಮವಾರ ನಡೆದ 80ನೇ ಸ್ವಾತಂತ್ರ್ಯೋತ್ಸವದ ಪೂರ್ವಭಾವಿ ಸಭೆಗೆ ಕೆಲವು ಇಲಾಖೆಯ ಅಧಿಕಾರಿಗಳು ಗೈರು ಹಾಜರಿ ಕಂಡು ಶಾಸಕ ಕೆ.ನೇಮಿರಾಜ್ ನಾಯ್ಕ್ ಕೂಡಲೇ ನೋಟೀಸ್ ನೀಡುವಂತೆ ತಹಶೀಲ್ದಾರ್ ಗೆ ಸೂಚಿಸಿದರು. ಸಭೆಯ ಅಧ್ಯಕ್ಷತೆ ವಹಿಸಿ ಶಾಸಕರು ಮಾತನಾಡಿ ಕೊಟ್ಟೂರಲ್ಲಿ ಧ್ವಜಾರೋಹಣ ಮುಗಿಸಿಕೊಂಡು ಬರುವುದರಿಂದ ಮಕ್ಕಳು ಹಸಿವಿನಿಂದ ಕೂಡಬಾರದು ಅವರಿಗೆ ಟಿಫನ್ನು ವ್ಯವಸ್ಥೆ ಕಲ್ಪಿಸಲಾಗುವುದು.

ಶುದ್ಧವಾದ ಕುಡಿಯುವ ನೀರು ಒದಗಿಸುವಂತೆ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿ ಬಸವ ರೆಡ್ಡಿಗೆ ಸೂಚಿಸಿದರು. ವೇದಿಕೆ ಸಿದ್ಧತೆ ಅಚ್ಚುಕಟ್ಟಾಗಿ ನಿರ್ವಹಿಸಲು ಪುರಸಭೆಗೆ ವಹಿಸಲಾಗುವುದು.

ಇಲಾಖೆಯ ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸಿ ತಮಗೆ ನೀಡಿದ ಜವಾಬ್ದಾರಿಯನ್ನು ನಿರ್ವಹಿಸಬೇಕು. ಕಾರ್ಯಕ್ರಮಕ್ಕೆ ಸಾರ್ವಜನಿಕರು ರೈತರು ಸಂಘ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಬೇಕು. ದೇಶದ ಅಭಿಮಾನ ಪ್ರತಿಯೊಬ್ಬರ ರಕ್ತದಲ್ಲೂ ಹರಿಯಬೇಕು. ಎಸ್ ಎಸ್ ಎಲ್ ಸಿ ಪಿಯುಸಿ ಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಗುವುದು.

ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ 5 ಜನ ಗಣ್ಯರನ್ನು ಸನ್ಮಾನಿಸಿ ಗೌರವಿಸಲಾಗುವುದು. ಪಟ್ಟಣದ ಎಲ್ಲಾ ಬ್ಯಾಂಕುಗಳ ಕಟ್ಟಡಗಳ ಮೇಲೆ ಕಡ್ಡಾಯವಾಗಿ ಧ್ವಜಾರೋಹಣ ಮಾಡಬೇಕು ಎಂದು ತಿಳಿಸಿದರು. ಈ ಒಂದು ಆಚರಣೆಯಲ್ಲಿ ರೈತರು ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸಿದರೆ ಸಂಭ್ರಮವಾಗಿರುತ್ತದೆ ಎಂದರು.

# ಹೊಸ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಚಾಲನೆ

## ರಸ್ತೆ ಸಂಚಾರದ ತೊಂದರೆ ಹಾಗೂ ರಾತ್ರಿ ವೇಳೆ ಬೆಳಕಿನ ಕೊರತೆ ಮೊದಲಾದ ಸಮಸ್ಯೆಗಳು ನಿವಾರಣೆಯಾಗಲಿವೆ

• **ಉದಯವಾಹಿನಿ, ಬೀದರ್**

ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಗದಲ ಗ್ರಾಮದ ಸಮಗ್ರ ಅಭಿವೃದ್ಧಿಗೆ ವಿವಿಧ ಯೋಜನೆಗಳಡಿ ಒಟ್ಟು 3.21 ಕೋಟಿ ಅನುದಾನ ಮಂಜೂರಾಗಿದ್ದು, ಅದರಡಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಗ್ರಾಮದಲ್ಲಿ ಹೊಸ ಅಭಿವೃದ್ಧಿಯ ಚಿತ್ರಣ ಮೂಡಿಸುತ್ತಿವೆ.

ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರ ನೇತೃತ್ವದಲ್ಲಿ ಗ್ರಾಮದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗಿದ್ದು, ಇದುವರೆಗೆ 2.29 ಕೋಟಿ ವೆಚ್ಚದ ಕಾಮಗಾರಿಗಳು

**1 : ಚರಂಡಿ ವ್ಯವಸ್ಥೆ ಸುಧಾರಣೆ**
**2 : ರಸ್ತೆ ಸಂಚಾರದ ತೊಂದರೆ**
**3 : ಗ್ರಾಮದಲ್ಲಿ ಸಂಚಾರ ವ್ಯವಸ್ಥೆ**

ಯಶಸ್ವಿಯಾಗಿ ಪೂರ್ಣಗೊಂಡಿದ್ದು, 92 ಲಕ್ಷ ವೆಚ್ಚದ ಹೊಸ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಲಾಗಿದೆ.

ಗ್ರಾಮದ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು ಪಶು ವೈದ್ಯಕೀಯ, ಆಸ್ಪತ್ರೆ ಕೌಪೌಂಡವಾಲ್, ಸಿಸಿ ರಸ್ತೆಗಳ ನಿರ್ಮಾಣ, ಚರಂಡಿ ವ್ಯವಸ್ಥೆ ಸುಧಾರಣೆ, ಸಮುದಾಯ ಭವನಗಳ ನಿರ್ಮಾಣ, ಹೈಮಾಸ್ಟ್ ವಿದ್ಯುತ್ ದೀಪಗಳ ಅಳವಡಿಕೆ ಸೇರಿದಂತೆ ಹಲವು ಜನೋಪಯೋಗಿ ಕಾಮಗಾರಿಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಗಳು ಗ್ರಾಮದಲ್ಲಿ ಸಂಚಾರ ವ್ಯವಸ್ಥೆ ಸುಧಾರಿಸುವುದರ ಜೊತೆಗೆ ಸ್ವಚ್ಛತೆ, ಸಾರ್ವಜನಿಕ



ಉದಯವಾಹಿನಿ ಚಿತ್ರ

> ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ , ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಜನಸಹಭಾಗಿತ್ವಕ್ಕೂ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಗ್ರಾಮಸ್ಥರ ಸಲಹೆ ಹಾಗೂ ಬೇಡಿಕೆಗಳನ್ನು ಆಧರಿಸಿ ಮುಂದಿನ ಹಂತದ ಅಭಿವೃದ್ಧಿ ಕಾಮಗಾರಿಗಳನ್ನು ರೂಪಿಸಲಾಗುವುದು ಎಂದು ಶಾಸಕರು ಹೇಳಿದರು. -ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ

> ಶಾಸಕರ ಅನುದಾನದಿಂದ ಸಿಸಿ ರಸ್ತೆ, ಚರಂಡಿ, ಸಮುದಾಯ ಭವನ ಸೇರಿದಂತೆ ಅನೇಕ ಅಭಿವೃದ್ಧಿ ಕಾಮಗಾರಿಗಳು ನಡೆದಿರುವುದು ಸಂತಸದ ವಿಷಯ. ಗ್ರಾಮದ ಅಭಿವೃದ್ಧಿಗೆ ವಿಶೇಷ ಗಮನ ಹರಿಸಿರುವ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರಿಗೆ ನಮ್ಮ ಗ್ರಾಮಸ್ಥರ ಪರವಾಗಿ ಅಭಿನಂದನೆಗಳು ತಿಳಿಸಿದರು. -ಶಾಸಕ ಡಾ.

ಸುರಕ್ಷತೆ ಮತ್ತು ಮೂಲಭೂತ ಸೌಲಭ್ಯಗಳ ಗುಣಮಟ್ಟವನ್ನು ಮತ್ತಷ್ಟು ಹೆಚ್ಚಿಸಲಿವೆ.ಪೂರ್ಣಗೊಂಡ ಕಾಮಗಾರಿಗಳಿಂದ ಗ್ರಾಮಸ್ಥರಿಗೆ ದೀರ್ಘಕಾಲದ ಸಮಸ್ಯೆಗಳಿಗೆ ಪರಿಹಾರ ದೊರೆತಿದ್ದು, ಮಳೆಗಾಲದಲ್ಲಿ ನೀರು ನಿಲ್ಲುವ ಸಮಸ್ಯೆ, ರಸ್ತೆ ಸಂಚಾರದ ತೊಂದರೆ ಹಾಗೂ ರಾತ್ರಿ ವೇಳೆ ಬೆಳಕಿನ ಕೊರತೆ ಮೊದಲಾದ ಸಮಸ್ಯೆಗಳು ನಿವಾರಣೆಯಾಗಲಿವೆ. ಅಲ್ಲದೆ, ಸಮುದಾಯ ಭವನಗಳು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅನುಕೂಲಕರ ವಾತಾವರಣವನ್ನು ಕಲ್ಪಿಸಲಿವೆ.

> 3.21 ಕೋಟಿ ಅನುದಾನದಲ್ಲಿ ಈಗಾಗಲೇ 2.29 ಕೋಟಿ ವೆಚ್ಚದ ಕಾಮಗಾರಿಗಳು ಪೂರ್ಣಗೊಂಡಿದ್ದು, ಇನ್ನೂ 92 ಲಕ್ಷ ವೆಚ್ಚದ ಹೊಸ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಇದರಿಂದ ಗ್ರಾಮದಲ್ಲಿ ಮೂಲಭೂತ ಸೌಲಭ್ಯಗಳು ಮತ್ತಷ್ಟು ಉತ್ತಮವಾಗಲಿವೆ. ಶಾಸಕರು ಗ್ರಾಮಾಭಿವೃದ್ಧಿಗೆ ನೀಡುತ್ತಿರುವ ಆದ್ಯತೆಗೆ ನಾವು ಧನ್ಯವಾದಗಳನ್ನು ತಿಳಿಸುತ್ತೇವೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರು, ಬಗದಲ ಗ್ರಾಮದ ಸಮಗ್ರ ಅಭಿವೃದ್ಧಿಯೇ ನಮ್ಮ ಪ್ರಮುಖ ಗುರಿಯಾಗಿದೆ. ಜನರ ಬೇಡಿಕೆಗಳಿಗೆ ಸ್ಪಂದಿಸಿ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ.ಅಭಿವೃದ್ಧಿ ಕೇವಲ ಕಟ್ಟಡಗಳನ್ನು ನಿರ್ಮಿಸುವುದಲ್ಲ, ಜನರ ಜೀವನಮಟ್ಟವನ್ನು ಉತ್ತಮಗೊಳಿಸುವುದು. ಕ್ಷೇತ್ರದ ಪ್ರತಿಯೊಂದು ಗ್ರಾಮವೂ ಅಭಿವೃದ್ಧಿಯ ಮಾದರಿಯಾಗಬೇಕು ಎಂಬ ಸಂಕಲ್ಪದೊಂದಿಗೆ ಕೆಲಸ ಮಾಡುತ್ತಿದ್ದೇನೆ, ಎಂದು ಹೇಳಿದರು. ಅಭಿವೃದ್ಧಿ ಕಾಮಗಾರಿಗಳ ಗುಣಮಟ್ಟಕ್ಕೆ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿ, ಎಲ್ಲಾ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು. ಗ್ರಾಮಗಳ ಅಗತ್ಯತೆಗಳನ್ನು ಪರಿಗಣಿಸಿ ರಸ್ತೆ, ಕುಡಿಯುವ ನೀರು, ಚರಂಡಿ, ಬೀದಿ ದೀಪ, ಸಮುದಾಯ ಭವನ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿಗೆ ಮುಂದಿನ ದಿನಗಳಲ್ಲಿಯೂ ಹೆಚ್ಚಿನ ಅನುದಾನವನ್ನು ಸರ್ಕಾರದಿಂದ ತರಲು ನಿರಂತರ ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.